# ಸಾವಿನ ಮೇಜವಾನಿ

ಡಾ. ಪಾಟೀಲ ಪುಟ್ಟಪ್ಪ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಸಾವಿನ ಮೇಜವಾನಿ

ಪಾಟೀಲ ಪುಟ್ಟಪ್ಪ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು - ೫೬೦ ೦೦೨

**SAVINA MEJAVANI** : Collection of short stories written by **Patil Puttapa**, Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xiv + ೯೮
ಬೆಲೆ : ರೂ. ೩೫/-

ರಕ್ಷಾಪುಟ ವಿನ್ಯಾಸ : ಕೆ. ಚಂದ್ರನಾಥ ಆಚಾರ್ಯ

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ "ವಿಶ್ವ ಕನ್ನಡ ಸಮ್ಮೇಳನ" ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು - ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

(ಗೋವಿಂದ ಎಂ. ಕಾರಜೋಳ)

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ


**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಎರಡು ನುಡಿ | v |
| ಅಧ್ಯಕ್ಷರ ಮಾತು | vi |
| ಪ್ರಕಾಶಕರ ಮಾತು | vii |
| ಆಯ್ಕೆ ಸಮಿತಿ | ix |
| | |
| ದೋಣಿ ಸಾಗಲಿ | ೧ |
| ಅನ್ನ ದೇವರು | ೨೧ |
| ರೆಪ್ಪೆಯ ಭಾರ ! | ೩೬ |
| ನೆಲದ ಮಗ | ೪೫ |
| ಸಾವಿನ ಮೇಜವಾನಿ | ೫೨ |
| ತುತ್ತಿನ ಚೀಲ | ೭೧ |
| ಪ್ರಶಂಸೆಯ ನುಡಿಗಳು | ೯೧ |

# ಸಾವಿನ ಮೇಜವಾನಿ

# ದೋಣಿ ಸಾಗಲಿ !

"ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ
ಬೀಸುಗಾಳಿಗೆ ಬೀಳುತೇಳುತ ತೆರೆಯ ಮೇಗಡೆ ಹಾರಲಿ"

–ಕೆ.ವಿ. ಪುಟ್ಟಪ್ಪ

"ಹೂಂ, ಬೇಗ ಬೇಗ ಓದ್ರಿ."

"ಆಗಲಿ, ರಾಣಿಸಾಹೇಬರ ಇಚ್ಛೆಯಂತೆಯೇ ಆಗಲಿ."

ರಾತ್ರಿ ಊಟವಾದ ಮೇಲೆ ದಿನದ ರೂಢಿಯಂತೆ ನಾನು ಶರಚ್ಚಂದ್ರರ 'ಪರಿಣೀತಾ' ಕಾದಂಬರಿಯನ್ನು ಓದುತ್ತಾ ಹಾಸಿಗೆಯಲ್ಲಿ ಅಡ್ಡವಾಗಿದ್ದೆ. ಲಲಿತಾ ಅದನ್ನು ಆಲಿಸುತ್ತಾ ಮಂಚದ ಮೇಲೆ ತನ್ನ ತಲೆದಿಂಬಿನ ಬಳಿ ಕುಳಿತುಕೊಂಡಿದ್ದಳು.

ಆಕೆ ಸಮೀಪದಲ್ಲಿದ್ದಳೆಂದರೆ ನನಗಂತೂ ಓದುವುದಕ್ಕೆ ವಿಶೇಷವಾದ ಉತ್ಸಾಹ. ಅದೇಕೊ ಎಂಬುದನ್ನು ಮಾತ್ರ ಹೇಳಲಾರೆ. ಅದು ಕೇಳತಕ್ಕ ಮಾತಲ್ಲ– ಕೇಳಬಾರದು. ತಿಳಿಯುವ ವಯಸ್ಸಿಗೆ ತಾನಾಗಿಯೇ ತಿಳಿಯುತ್ತದೆ. ಸುಮ್ಮನೆ ಆತುರಪಟ್ಟುಕೊಳ್ಳುವುದೇಕೆ – ನಾನು ಹೇಳುತ್ತಿದ್ದೆ, ಅದರಲ್ಲೇನು ? ಆದರೆ ಯಾಕೊ ಸಂಕೋಚ. ಹೋಗಲಿ ಬಿಡಿ !

ಲಲಿತೆಯಂತೂ ಕತೆಯನ್ನು ತುಂಬಾ ಮೆಚ್ಚಿರಬೇಕೆಂದು ತೋರುತ್ತದೆ. ನಾನು ಓದಿದಂತೆ ವಾಕ್ಯವಾಕ್ಯಕ್ಕೂ 'ಹೂಂ, ಹೂಂ' ಎಂದು ಅವಳ ಬಾಯಿಂದ ಉಕ್ಕಿ ಬರುವ ಕುತೂಹಲವೇ ಸಾಕ್ಷಿ ಅದಕ್ಕೆ !... ಮೆಚ್ಚಿಗೆಯಾಗದೇನು ಮಾಡೀತು ? ಮೆಚ್ಚಿಗೆಯಾಗಬೇಕಾದ ಕತೆಯೆ ಸರಿ! ಅದನ್ನು ಯಾರೇನು ಹೇಳಬೇಕು? ಅವಳ ವಯಸ್ಸಿನ, ಅವಳ ಹೆಸರಿನ, ಅವಳ ನಿಲುವಿನ, ಅವಳ ಬಣ್ಣದ ಹದಿನಾರು ಜವ್ವನದ ಹೆಣ್ಣು ಆ ಕತೆಯ ನಾಯಕಿ! ಎಂದ ಮೇಲೆ ಸಂಶಯವುಂಟೆ ?

ಲಲಿತಾ ತನ್ನನ್ನೆ ತಾನು ಮರೆತಳು. ಮಧುರವಾದ ಆ ಕತೆಯ ರಸ ಪ್ರವಾಹದಲ್ಲಿ ತೇಲಿಹೋದಳು. ದೂರದೂರಕ್ಕೆ ನನಗ ಸಿಕ್ಕದಂತೆ!

ಆದರೆ ನನ್ನಿಂದ ಮಾತ್ರ ಅವಳನ್ನು ಹಿಂಬಾಲಿಸುವುದು ಆಗಲಿಲ್ಲ. ಹಿಂಬಾಲಿಸಬಹುದಾಗಿತ್ತು. ಅದೇನು ಮಹಾ! ಲಲಿತಾ, ನನ್ನ ಮುದ್ದು ಲಲಿತಾ ನನ್ನ ಎದುರಿಗಿರುವಾಗ ಯಾವ ಕತೆ ಯಾಕೆ ? ಅವಳ ಅಪರೂಪ. ಅವಳ ರಾಗ ಅನುರಾಗ.

ಅವಳ ಬದುಕು ಅಪರಂಜಿ!

ಅದೆಲ್ಲ ಸರಿಯೆ ! ಕತೆಯಿಂದ ಬಿಡುಗಡೆ ಹೊಂದುವ ಬಗೆ ಹೇಗೆ ? ಒಂದು ಯೋಚನೆ ಹೊಳೆಯಿತು. ನಾನು ಹೀಗೆ ಒಂದು ಉಪಾಯ ಹೂಡಿದೆ. ತಪ್ಪಿಸಿಕೊಳ್ಳಬೇಕೆಂಬ ಮನಸ್ಸಿದ್ದರೆ ದಾರಿಗೇನು ಕಡಿಮೆ ? ಬೇಕಾದಷ್ಟು!

ಕತೆಯ ಸನ್ನಿವೇಶ ಒಂದು ಅಲ್ಲೋಲಕಲ್ಲೋಲವಾದ ಸ್ಥಿತಿಗೆ ಬಂದು ಮುಟ್ಟಿದಾಗ ನಾನು ಓದುವದನ್ನು ನಿಲ್ಲಿಸಿಬಿಟ್ಟೆ. ಲಲಿತೆಗೆ ಅದು ತಿಳಿಯಲಿಲ್ಲ. ಪಾಪ, ಹೇಗೆ ತಿಳಿದೀತು? ಅವಳಿನ್ನೂ ಆ ಕತೆಯಲ್ಲಿಯೇ ತನ್ಮಯಳಾಗಿದ್ದಳು. ಅದಕ್ಕೆಂತಲೆ ಆಕೆ ತನ್ನ ವಾಡಿಕೆ ಮುಂದುವರಿಸಿದಳು—ಮತ್ತೆ ಹೂಂಗುಟ್ಟಿದಳು!

ನಾನಂತೂ ಓದಲೇಬಾರದೆಂದು ಮುಂಚಿತವಾಗಿಯೆ ನಿರ್ಧರಿಸಿದ್ದೆ. ಪುನಃ ಓದಲಿಲ್ಲ. ಮುಂದಕ್ಕೆ ಹೋಗಲಿಲ್ಲ. ಮೇನಕೆಯ ಸಮ್ಮುಖದಲ್ಲಿಯೂ ವಿಶ್ವಾಮಿತ್ರನ ತಪಸ್ಸೇ ? ಛೆ, ನಾನೇನೂ ಅಂಥ ಮೂರ್ಖನಲ್ಲ. ಅವಳ ಮುದ್ದು ಮುಖವನ್ನು ದಿಟ್ಟಿಸುತ್ತ ಕುಳಿತುಬಿಟ್ಟೆ.

ಲಲಿತಾ, ಮುಗ್ಧ ಹುಡುಗಿ! ಅವಳಿಗೆ ಕತೆಯನ್ನುಳಿದು ಇನ್ನು ಯಾವುದೊಂದೂ ಗಮನದಲ್ಲಿಲ್ಲ. ಅವಳ ಉದ್ವಿಗ್ನ ಮುಖ ನನಗೆ ತುಂಬ ಮೋಹಕವಾಗಿ ಕಂಡಿತು. ಆಕೆ ಪುನಃ 'ಮುಂದೆ' ಎಂದಳು.

ನನಗಂತೂ ನಗೆ ತಡೆಯಲಾಗಲಿಲ್ಲ.

"ಮುಂದೆ, ಮುಂದೆ—ಇದೇ ನೋಡು" ಎಂದು ನಗುತ್ತ ನಾನು ಮೆಲ್ಲಗೆ – ಮೆಲ್ಲಗೆಯೆಂದರೆ ಅಷ್ಟು ಮೆಲ್ಲಗೆ– ಅವಳ ತಿಳಿಯಾದ, ನುಣುಪಾದ, ಎಳೆಯ ಕೆನ್ನೆಯ ಮೇಲೆ ಸ್ವಲ್ಪ ಬಿಸಿ ಮಾಡಿದೆ. ಆಗ ಎಚ್ಚರಿಕೆ ಬಂತು ಅವಳಿಗೆ!

"ಎಲ್ಲಿದ್ದೀಯೆ ಲಲ್ಲಿ?" ಎಂದೆ ನಾನು ಸ್ವಲ್ಪ ಎತ್ತರದ ಧ್ವನಿಯಲ್ಲಿ !

"ಕಾಣೋಲ್ವೇನ್ರಿ ? ನನಗೂ ಕಿವಿ ಇವೆ, ಇನ್ನೂ ಹೋಗಿಲ್ಲ!"

"ಯಾರೋ ಇಲ್ಲಾ ಅಂತಿದ್ರಲ್ಲೇ ?"

"ಓಹೋ, ನಿಮಗೆ ಗೊತ್ತೇ ಇಲ್ವೇನು? ನಮ್ಮ ಯಜಮಾನ್ರು ಹೇಳ್ತಿದ್ರಲ್ಲ!" ಲಲಿತಾ ನನ್ನ ಮಾತು ನನಗೆ ಮುಟ್ಟಿಸಿದಳು.

"ಮರೆತಿದ್ದೆ ಜಾಣೆ, ನೀನು ಮಾತು ಬೇರೆ ಕಲ್ತೀ"ಎಂದೆ.

"ಕಲಿಯೋದೇನು ಬಂತು? ಸುಮ್ಮನೆ ಮರೆಸಬೇಡಿರಿ. ನಿಮಗ ಬೇಡಾದರೆ ನಾನು ಓದುತ್ತೇನೆ" ಎನ್ನುತ್ತ ಆಕೆ ತನ್ನ ಕೈಯಲ್ಲಿ ಸಿದ್ಧಮಾಡಿ ಇಟ್ಟುಕೊಂಡಿದ್ದ ತಾಂಬೂಲದ ಪಟ್ಟಿಯನ್ನು ನನ್ನ ಬಾಯಿಗೆ ನೀಡಿ ಪುಸ್ತಕಕ್ಕೆ ಕೈಹಾಕಿದಳು.

"ಸ್ವಲ್ಪ ತಾಳು" ಎಂದೆ ನಾನು.

ಅಷ್ಟಾದರೂ ಲಲಿತಾ ಕೇಳಬಾರದೆ ? ಎಷ್ಟೊ ಕೇಳಲಿಲ್ಲ. ಸುಮ್ಮಸುಮ್ಮನೆ

ಎಳೆದಳು. ಕೊಸರಿದಳು. ನಾನೇನು ಕಡಿಮೆಯೆ ? ಉಂಹೂ ! ಏನೆಂದರೂ ನಾನು ಮಾತ್ರ ಅವಳ ಕೈಗಳನ್ನು ಬಿಡಲಿಲ್ಲ. ನನ್ನದು ಮೊದಲೆ ಕಪಿಮುಷ್ಟಿ! ಈ ವಿಷಯದಲ್ಲಿ ಕೇಳಬೇಕೆ? ಇನ್ನೂ ಭದ್ರವಾಗಿ ಹಿಡಿದುಕೊಂಡೆ. ಅವಳಿಗೆ ನೋವಾಯಿತೊ ಏನೋ !

"ಲಲಿತಾ" ಎಂದೆ ನಾನು.

ಆಕೆ ಮಾತನ್ನೇನೂ ಆಡಲಿಲ್ಲ. ಒಮ್ಮೆ ಹಾಗೇ ತೇಲುಗಣ್ಣಿನಿಂದ ಮೇಲಕ್ಕೆ ನೋಡಿದಳು. ಸರಿ ಇನ್ನೇನಾಗಬೇಕು? ನನ್ನ ಸೋಲಿಗೆ ಅದು ಸಾಲದೇನು? ಲಲಿತಾ ಅಷ್ಟರಿಂದಲೇ ನನ್ನನ್ನು ಸೆಳೆದುಕೊಂಡು ಬಿಟ್ಟಳು. ನಾನು ಅವಳ ಅಧೀನವಾಗಿ ಹೋದೆ. ಉಪಾಯವಿಲ್ಲ– ಇನ್ನೇನು ಮಾಡುವುದು?

ಪ್ರೇಮದ ಸೆರೆ, ಪ್ರೇಮದ ಸೆರೆಯಾಳು—ಎರಡೂ ಸೊಗಸು!

"ಪಾಪ, ದಿನವೂ ಪಟ್ಟೀ ಕಟ್ಟಿ ನನಗೇ ತಿನ್ನಿಸಬೇಕು. ನೀನು ಮಾತ್ರ ಒಮ್ಮೆಯಾದರೂ ತಿನ್ನಬಾರದು. ಇದು ಯಾವ ನ್ಯಾಯ ನೀನೇ ಹೇಳು! ಇವೊತ್ತಾದರೂ ತಿನ್ತೀಯಾ – ನಾನು ಕಟ್ಟಿಕೊಡಲೇ?" ಎಂದು ರಾಣೀಸನ್ನಿಧಾನವನ್ನು ಸೌಮ್ಯವಾಗಿ ಕೇಳಿಕೊಂಡೆ.

ಅದು ಚೇಷ್ಟೆಯೆಂದು ಅವಳಿಗೆ ಗೊತ್ತೇ ಗೊತ್ತು. ಗೊತ್ತಾಗದೆ ಏನು ?

"ಸುಮ್ನೆ ಹೋಗ್ರಿ ಅಂದ್ರೆ" ಎನ್ನುತ್ತ ಲಲಿತಾ ಮುಖವನ್ನು ಪಕ್ಕಕ್ಕೆ ತಿರುಗಿಸಿದಳು. ಆದರೆ ನಾನು ಅಷ್ಟಕ್ಕೇ ಬಿಡುವವನೇ ? ಅವಳಿಗೆ ಅದನ್ನು ಇದನ್ನು ಕಥೆ ಮಾಡಿ ಹೇಳಿ ಅವಳನ್ನು ಇನ್ನೂ ಹತ್ತಿರಕ್ಕೆ ಕರೆದುಕೊಂಡೆ.

"ಬಿಡ್ರೀ" ಎಂದು ಆಕೆ ಮುಖದ ಮೇಲೆ ಒಂದು ಹುಸಿ ಮುನಿಸನ್ನು ಸೂಸುತ್ತ ಮೆಲುದನಿಯಲ್ಲಿ ಮೆಲ್ಲಗೆ ಹೇಳಿದಳು. ಅದು ಹೇಳಬೇಕೆಂದು ಹೇಳಿದ ಮಾತು ಅಷ್ಟೆ ! ಅದಕ್ಕೆ ಅರ್ಥವೇ ಇಲ್ಲ. ಇದ್ದರೂ ಬಹುಶಃ ಅದಕ್ಕೆ ಇದರ ವಿರುದ್ಧವಾದ ಅರ್ಥ ಇದ್ದಿರಬಹುದು. ಇಲ್ಲವೆಂತೇನೂ ಅಲ್ಲ. ಹೋಗಲಿ, ಅದಕ್ಕೆಲ್ಲಾ ಇಷ್ಟೊಂದು ರಗಳೆ ಯಾಕೆಬೇಕು? ಹೆಂಡತಿ ಹೇಳುವ "ಬಿಡ್ರೀ" ಎಂಬ ಮಾತುಗಳಲ್ಲಿ ನೂರಕ್ಕೆ ನೂರು ಪ್ರೇಮದ ಸಂಕೇತ – ಪ್ರಣಯದ ಆಹ್ವಾನ ಎಂದು ನಾನು ತಿಳಿದುಕೊಂಡಿದ್ದೇನೆ. ತಪ್ಪೋ, ಒಪ್ಪೋ ಹೇಳಲಾರೆ. ನನ್ನ ತಿಳುವಳಿಕೆ ಮಾತ್ರ ಖಂಡಿತ ಸುಳ್ಳಲ್ಲ!"

"ಯಾಕೇ ಲಲಿತಾ, ಸುಮ್ಮನಾದೆ?" ಎಂದೆ.

ಪಾಪ, ಅವಳೇನು ಹೇಳಬೇಕು?.... ಎಷ್ಟಾದರೂ ಈಗ ಅವಳು ನನ್ನ ತೋಳ – ಬಂಧಿ. ಸೋತು ಗೆದ್ದ ವೀರ ನಾನು!

"ಏನಾಯಿತೇ ?"ಎಂದು ನಾನು ಪುನಃ ಕೇಳಿದ ಎಳೆದೆಳೆದು.

"ಏನಾಗಬೇಕು ಅನ್ತೀರಿ?" ಎಂದು ನನಗೇ ಪ್ರಶ್ನೆ ಹಾಕಿದಳು ಲಲಿತಾ. ಚೆಲುವು ಅವಳ ಮುಖದ ಮೇಲೆ ನಾಟ್ಯ ಹೂಡಿತ್ತೊ ಏನೋ ! ಅರೆಮುಚಿದ ಕಣ್ಣನ್ನೇನೂ ಅವಳು

ತೆರೆಯಲಿಲ್ಲ. ರಸಭಂಗ ಮಾಡಲಿಲ್ಲ. ನಿಜಕ್ಕೂ ಜೀವನದಲ್ಲಿ ದುರ್ಮಿಳವಾದ ನೋಟ ಅದು!... ಲಲಿತಾ ನನಗ ಮೋಹಿನಿಯಂತೆ ತೋರಿದಳು. ಆಕರ್ಷಕವಾಗಿ ಕಾಣಿಸಿಕೊಂಡಳು. ಈ ಸಾರೆ ಮಾತ್ರ ಅವಳು ಬಾಯಿ ಬಿಡಲಿಲ್ಲ "ಬಿಡ್ರೀ" ಎನ್ನಲಿಲ್ಲ!

"ತೌರುಮನೆಗೆ ಕಳಿಸಿಕೊಳಲಿಲ್ಲಾಂತ ಸಿಟ್ಟಾದೆಯೇನೆ ಲಲಿ!"

"ನಾನು ಸಿಟ್ಟಾದರೇನು, ಬಿಟ್ಟರೇನು?"

"ಬಿಟ್ಟರೇನೂ ಇಲ್ಲ. ನೀನು ಸಿಟ್ಟಾದರೇ ಚೆಂದ ಕಾಣೋದು; ನನ್ನ ಕಟ್ಟಾಣೀ" ಎಂದೆ.

"ಏನ್ರೀ ಇದು ? ಕೇಳಿದವರು ನಕ್ಕಾರು!" ಎನ್ನುತ್ತ ಆಕೆ ನನ್ನ ಬಾಯಿ ಮೇಲೆ ಕೈಯಿಟ್ಟಳು. ಹೇಳಿದ ಬಗೆ ಬಹು ಮೆತ್ತಗೆ – ಬಹುಮೆತ್ತಗೆ!

"ತಮಗೆ ಈ ಸುಖ ಇಲ್ಲವಲ್ಲ ಎಂಬ ಹೊಟ್ಟೆಕಿಚ್ಚಿನಿಂದ ನಗ್ತಾರೇ ಅವರು! ನಿನಗೇನು ಗೊತ್ತು?"ಎಂದೆ.

"ಅದೇನೊ ಹೋಗಲಿ, ನೀವು ನನ್ನ ಮಾತು ಎಂದು ನಡೆಸಿಕೊಟ್ಟೀರಿ, ಹೇಳ್ರಿ?"

"ಯಾಕೇ ಲಲಿತಾ ! ಥ್ಚು ಥ್ಚು! ಸಿನಿಮಾ ಆಗ್ತಿದ್ದೆ ಇವೊತ್ತೇ ಹೋಗಿ ಬರಲಿಲ್ಲೇನು? ಆಯಿತಲ್ಲ, ಇನ್ನೇನಾಗಬೇಕು? ಮನೆಯಲ್ಲಿ ನೋಡಿದಿರೋ ಇಲ್ಲೊ – ನಾವು ಬರೊಹೊತ್ತಿಗೆ ರಾಮಾಯಣ ನಡೆದುಹೋಗಿತ್ತು."

"ಓಹೊ, ಮರೆತಿದ್ದೆ. ಈಗ ನೀನು ತಾಯಿ ಬೇರೆ ಆಗಿರುವೆ!"

"ಹೂಂ, ಚೇಷ್ಟೆ ಮಾಡಿರಿ!ನಿಮಗಿನ್ನೇನು ಕೆಲಸ?"

"ಚೇಷ್ಟೆಯಲ್ಲ ಲಲಿತಾ, ನಿನ್ನ ಬಾಳು ಜೇನಿನಂಥ ಬಾಳು! ಮನೆಗೆ ಬಂದ ಮೂರು ತಿಂಗಳಲ್ಲೆ ಎಂಥ ಬಳಗ ಕಟ್ಟಿಕೊಂಡೆಯಲ್ಲೇ ?"

"ಸರಿ ಬಿಡ್ರಿ ! ಇನ್ನು ನೀವೆ ಹೊಗಳಬೇಕು ಅದನ್ನು!"

"ಹೊಗಳಿಕೆ ಏನು? ಇದ್ದ ಮಾತು! ನನ್ನ ಚಿನ್ನಾ!"

"ಹೋಗಲಿ ಬಿಡ್ರಿ, ಅದೇನು ಮಹಾ ?"

"ಅಲ್ಲೇ ಲಲಿ, ಇವೊತ್ತು ಗೌರೀನ್ನ ನಮ್ಮ ಜೊತೇಲಿ ಕರಕೊಂಡು ಹೋದ್ರಾಗಿತ್ತು!"

"ಹೌದ್ರೀ! ನನ್ನ ಜೀವ ಹೊಡದಾಡಿತು. ಆ ಹುಡುಗಿ ಪಾಪ, ಬಾಯಿಗೆ ಬಾಯಿ ಹಚ್ಚಲೆ ಇಲ್ಲವಂತೆ. ಜೊತೆಗೆ ಚಂದ್ರಾನ ಕಿರಿಕಿರಿ ಬೇರೆ. ಇದ್ದುದರಲ್ಲಿ ಶೇಖರನೆ ಸ್ವಲ್ಪ ವಾಸಿ. ಅತ್ತೆಯವರಿಗಂತೂ ಇವುಗಳನ್ನು ಹಿಡಿದೂ ಹಿಡಿದೂ ಸಾಕುಬೇಕಾಗಿರಬೇಕು ಎಂದೂ ರೇಗಿಕೊಳ್ಳದಂಥವರು ಇವೊತ್ತೇ ಅವತಾರ ತಾಳಬೇಕಾದರೆ? ನಾನು ಬಾಗಿಲೊಳಗೆ ಇನ್ನೂ ಕಾಲನ್ನು ಇಡುಇಡುತ್ತಲೆ "ಸದ್ಯಕ್ಕೆ ಬದುಕಿದೆ ಬಾ ನನ್ನ ತಾಯೀ?" ಎಂದು ನಿಟ್ಟುಸಿರು ಹಾಕಿದರು. ನಿಮಗೆ ಕೇಳಿದ್ದರೂ ಕೇಳಿರಬಹುದು. ಇನ್ನು ಹೇಗಾಗಿರಬೇಡ ಅವರಿಗೆ, ನೀವೆ

ನೋಡ್ರಿ!"

"ಏನಾದರೂ ನಿನ್ನ ಮನಸ್ಸು ದೊಡ್ಡದು ಲಲಿ" ಎಂದೆ ನಾನು.

ಬಳಿಯಲ್ಲಿ ಮಲಗಿದ್ದ ಚಂದ್ರಾ "ನನ್ನಲ್ಲ"ಎಂದು ನಿದ್ರೆಯಲ್ಲಿಯೆ ಇನ್ನೂ ಏನೇನೊ ಅಂದಳು.

ಆ ಮಾತು ಕೇಳಿ ನಾವಿಬ್ಬರೂ ಬಿದ್ದು ಬಿದ್ದು ನಕ್ಕೆವು.

"ಬೆಳಿಗ್ಗೆ ಕೊಟ್ಟ ಬಾಳೇಹಣ್ಣನ್ನು ಇನ್ನೂ ಮರೆತಿಲ್ಲ ಹುಚ್ಚುಮುಂಡೆ! ಚಿಕ್ಕದಾದರೆ ತನ್ನದಲ್ಲವಂತೆ. ಪ್ರತಿಸಲವೂ ಇವಳಿಗೆ ಶೇಖರನೇ ಸೋಲಬೇಕು. ಈಗಾಗಲೇ ಇಷ್ಟು ಹಟ! ಇನ್ನು ಮುಂದೆ ಹೇಗೋ?"

"ಅದೇನೋ ಬಿಡ್ರಿ. ದೊಡ್ಡದು ಮಾಡದಿದ್ದರೆ ಹೆಂಗಾಗ್ತದೆ, ನೀವೇ ಹೇಳ್ರಿ ?" ಎಂದು ಲಲಿತಾ ಬಿದ್ದು ಹೋದ ಮಾತನ್ನು ಎತ್ತಿಕೊಟ್ಟಳು.

"ಎಳೆಯ ವಯಸ್ಸಿನಲ್ಲಿಯೆ ತಂದೆ–ತಾಯನ್ನು ಕಳೆದುಕೊಂಡ ಈ ಪರದೇಶಿ ಮಕ್ಕಳಿಗೆ ನೀನು ಒಂದು ಆಧಾರವಾಗಿ ಬಂದೆ, ಲಲಿತಾ ! ಅವರ ಪಾಲಿಗೆ ಇಂದು ನೀನೆ ತಾಯಿ ತಂದೆ" ಎಂದು ಅವಳ ಕೆನ್ನೆಯನ್ನು ನೇವರಿಸುತ್ತ ನಾನು ಅವಳಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸಿದೆ.

"ಹಾಗೆ ಕರೆಸಿಕೊಳ್ಳುವುದು ನನ್ನ ಭಾಗ್ಯ, ಏನು ಪುಣ್ಯ ಮಾಡಿದ್ದನೊ ಏನೋ !" ಎನ್ನುತ್ತ ಆಕೆ ನಮ್ರವಾಗಿ ಹೇಳಿದಳು, "ಅದನ್ನು ನಾನು ಉಳಿಸಿಕೊಳ್ಳಬೇಕು."

ನಾನು ಏನು ಕೇಳುತ್ತಿರುವೆನೊ ಎಂದೆನಿಸಿತು. ಅಹಾ, ಲಲಿತಾ ಎಂಥ ಮಾತನ್ನು ಆಡಿದಳು ! ಅವಳು ಮೊದಲೆ ಮುದ್ದು. ಅವಳ ಮಾತು ಇನ್ನೂ ಮುದ್ದು! ಅದಕ್ಕೆ ಯಾವುದು ಬೆಲೆಯಾದೀತು? ಅದನ್ನು ಕೇಳಿಯಂತೂ ನಾನು ಆನಂದ ಪುಲಕಿತನಾಗಿ ಹೋದೆ. ಅವಳಿಗೆ ನಾನು ಏನು ಹೇಳಬೇಕೊ ಕೊನೆಗೂ ತೋಚಲಿಲ್ಲ. ಹೇಳಬೇಕಾದ ಮಾತು ಬಾಯಲ್ಲೆ ನಿಂತು ಹೋಯಿತು. ಆದರೂ ಆಡಿದೆ –ಏನೊ –ಮನಸ್ಸಿನ ಸಮಾಧಾನಕ್ಕೆ!

"ಅಣ್ಣಾ, ಅತ್ತಿಗೆ ಈಗ ನಿಶ್ಚಿಂತರಾಗಿರಬೇಕು. ಅವರ ಜೀವನ ತಳಮಳ ನಿಶ್ಚಯವಾಗಿಯೂ ಶಾಂತವಾಗಿರಬೇಕು. ಇದಕ್ಕೆಲ್ಲ ಔಷಧಿ ನೀನೆ ಲಲಿತಾ !" ಎಂದು ನಾನು ಅವಳ ಕಡೆಗೆ ನೋಡಿದೆ.

ಲಲಿತೆಯ ಕಣ್ಣಿನಲ್ಲಿ ನೀರಾಡುತ್ತಿತ್ತು!

ಅಷ್ಟು ಹೊತ್ತಿಗೆ ಗೌರಿ ಸೂರು ಹಚ್ಚಿದಳು! ರಾಗ ಎತ್ತಿದಳು!

ಲಲಿತಾ ಅವಳ ಬಳಿಗೆ ಹೋಗಿ "ಇಲ್ಲೇ ಅದೇನೆ, ಮಲಗೇ ಗೌರಿ! ಮಲಗವ್ವಾ, ನಮ್ಮವ್ವಾ ಜಾಣೆ!" ಎಂದು ಲಲ್ಲೆಯಿಂದ ತಟ್ಟಿ ಸಮಾಧಾನ ಮಾಡಿ ಮಲಗಿಸಿ ಬಂದಳು.

೨

ಸರಿ !

ಲಲಿತಾ ಮನೆಗೆ ಬಂದಮೇಲೆ ಎಲ್ಲವೂ ತನ್ನಷ್ಟಕ್ಕೆ ತಾನೆ ಹೊಂದಿಕೊಂಡು ಹೋಯಿತು. ಬೇಸಿಗೆಯ ಬಿಸಿಯನ್ನು ಸಂತೈಸಬಂದ ಹೊಸ ಮಳೆಯ ಸೆಳಕಿನಂತೆ ಅವಳು ನಮ್ಮ ಮನೆಗೆ ಚಿಮ್ಮಿ ಬಂದಳು. ಅಸ್ತವ್ಯಸ್ತವಾದ ನಮ್ಮ ಬದುಕಿನಲ್ಲಿ ಹೊಸ ವ್ಯವಸ್ಥೆ ಮೂಡಿಬಂದಿತು. ಎಂಥ ಮೆರುಗು ಅದು! ಮನೆಯ ಬಣ್ಣವೆ ಬದಲಾಯಿಸಿ ಹೋಯಿತು. ತಳಿರ ಸಂದು ಸಂದುಗಳಲ್ಲಿ ಎಳೆಬಿಸಿಲು ತೂರಿಬರುವಂತೆ ಮನೆಯ ಮೂಲೆ ಮೂಲೆಯಲ್ಲಿ ನಗೆ ಅರಳಿ ನಿಂತಿತು.

ಹೋ, ನಮ್ಮ ಜೀವನ ರಂಗದಲ್ಲಿ ಮತ್ತೆ ವಸಂತಕೂಜನ!

ತಾಯಿಯವರ ಆನಂದ ಸಂಭ್ರಮಕ್ಕಂತೂ ಕೊನೆಮೊದಲಿಲ್ಲ. ಪಾರಾವಾರವಿಲ್ಲದ ಅಪಾರ ವಾರಿಧಿ ಅದು! ಅವರ ಎದೆ ತುಂಬಿ ಹೋಗಿದೆ. ತುಂಬಿದ ಕಟ್ಟೆ ತುಳುಕುವುದೇನೂ ಅಚ್ಚರಿಯಲ್ಲ! "ಲಕ್ಷ್ಮೀಯಂತ ಹುಡುಗೀನ್ನ ತಂದೇನೋ" ಎಂದು ಅವರು ನನ್ನೆದುರು ಮುಕ್ತಕಂಠವಾಗಿ ಆಡಿಕೊಂಡು ಬಿಡುವರು.

ಅದಕ್ಕಿಂತ ಹೆಚ್ಚಿಗೆ ನಾನು ಗಂಡನಾದವನು ಲಲಿತೆಯ ಬಗ್ಗೆ ಇನ್ನೇನನ್ನು ಹೇಳಬೇಕು? ಹೇಳಬೇಕೆಂದರೆ ಹೇಳುವ ಮಾತು ಎಂದಿಗೂ ಕಡಿಮೆಯಾಗಲಾರದು. ಹೇಳಬಹುದಾಗಿತ್ತು. ಆದರೆ ವಿಷಯ ಬಹು ಸೂಕ್ಷ್ಮ, ತುಂಬ ನಾಜೂಕು! ಆ ಬಗ್ಗೆ ಹೆಚ್ಚು ಮಾತು ಹುಳಿ, ಅನುಚಿತ! ಹೋಗಲಿ ಉಚಿತವೊ ಅನುಚಿತವೊ –ಅದನ್ನೆಲ್ಲ ನಿರ್ಣಯಿಸುವ ಜವಾಬ್ದಾರಿ ನನಗೇಕೆ? ಒಟ್ಟಿನಲ್ಲಿ ಅದು ಅವರವರ ವ್ಯಕ್ತಿಗತ ಪ್ರಶ್ನೆ – ಹೀಗೆಂದು ಹೇಳಿದರೆ ಯಾವ ತೊಂದರೆಯೂ ಇಲ್ಲ! ಅದೇ ಸರಿ.

"ಲಲಿತಾ" ನನಗೆ ಪ್ರಿಯವಾದ ಹೆಸರಾದರೂ "ಲಕ್ಷ್ಮೀ" ಎಂದು ತಾಯಿಯವರು ಆಗಾಗ ಅನ್ನುವುದನ್ನು ಕೇಳಿ ನನಗ ಆ ಹೆಸರಿನಲ್ಲಿಯೂ ಒಂದು ವಿಧವಾದ ಮಮತೆ, ಅನುರಾಗ ಹುಟ್ಟಿದೆ. ಅದಕ್ಕೆಂತಲೆ ನಾನು ಒಮ್ಮೊಮ್ಮೆ ನಮ್ಮಾಕೆಯನ್ನು ಕರೆಯಬೇಕಾದರೂ "ಲಕ್ಷ್ಮೀ" ಎಂತಲೇ ಕರೆಯುತ್ತೇನೆ. ಅಷ್ಟಕ್ಕೇ ಲಲಿತೆಗೆ ಮಾತ್ರ ಆ ಮಾತು ಎಳ್ಳಷ್ಟೂ ಒಪ್ಪಿಗೆಯಿಲ್ಲ.

ಈಗ ಲಲಿತೆಯನ್ನು ರೇಗಿಸುವ ಚಪಲ ಬಂದರೆ ತೊಂದರೆಯೇನೂ ಇಲ್ಲ. "ಲಕ್ಷ್ಮಿ" ಎಂದುಬಿಡುತ್ತೇನೆ. ಅಷ್ಟಕ್ಕೇ ಲಲಿತಾ ಕೆರಳಿಬಿಡುತ್ತಾಳೆ. ಆಗ ಕೆಣಕಿದ ನಾಗಿಣಿ ಆಕೆ !

ಆ ದಿನ ಗೆಳೆಯರೆಲ್ಲ ಕಲೆತದ್ದರಿಂದ ಅವರ ಉಪದ್ರವವನ್ನು ಮೀರಲಾರದೆ "ವಿದ್ಯಾಪತಿ" ನೋಡಲು ಹೋದದ್ದಾಯಿತು. ಎರಡನೆಯ ಆಟಕ್ಕ ನಾನೆಂದಿಗೂ ಹೋದವನಲ್ಲ, ರಾತ್ರಿ ಮನೆಗೆ ಬರಬೇಕಾದರೆ ಒಂದು ಗಂಟೆಯ ಮೇಲಾಗಿತ್ತು. ನಾನು

ಹೀಗೆ ಎಲ್ಲಿಯಾದರೂ ಹೋಗಿದ್ದರೆ ಬರುವವರೆಗ ಲಲಿತಾ ನನ್ನ ಹಾದೀ ಕಾಯಬೇಕು. "ನಿದ್ದೆಗೆಡಬೇಡ, ಮಲಗಿರು" ಎಂದು ಎಷ್ಟೇ ಹೇಳಿದರೂ ಅವಳು ಕೇಳುವುದಿಲ್ಲ.

ಮನೆಯಲ್ಲಿ ನೋಡಿದೆ. ಇನ್ನೂ ದೀಪವಿತ್ತು. ಸರಿ, ಲಲಿತಾ ನನ್ನನ್ನು ಕಾಯುತ್ತಾ ಕುಳಿತಿರಬೇಕು ಎಂದುಕೊಂಡು ಕೂಗಿದೆ. ಅವಳನ್ನು!

"ಲಕ್ಷ್ಮೀ" ಎಂದೆ.

ಯಾರೂ ದನಿದೋರಲಿಲ್ಲ. ಕದ ತೆರೆಯಲಿಲ್ಲ.

"ಲಕ್ಷ್ಮೀ" ಎಂದು ಪುನಃ ಕರೆದು ಮತ್ತೆ ಕದವನ್ನು ತಟ್ಟಿದೆ.

ಏನೂ ಪ್ರಯೋಜನವಾಗಲಿಲ್ಲ.

"ಕೇಳಿಸಿತೇನೆ ಲಕ್ಷ್ಮೀ?" ಎಂದೆ.

ಏನೊಂದೂ ಸೊಲ್ಲೂ ಇಲ್ಲ. ಎಲ್ಲ ನಿಷ್ಫಲವಾಯಿತು.

ಹೀಗಾದರೆ ಸರಿಯಲ್ಲ ಎಂದುಕೊಂಡು "ಏ ಲಲೀ" ಎಂದೆ.

ಅದಕ್ಕೂ ಅಷ್ಟೆ! ಮೌನವೆ ಉತ್ತರ. ನಿಃಶಬ್ದವೇ ಸಮಾಧಾನ.

"ಎದ್ದಿರುವೆಯೇನೆ ಲಲಿತಾ?" ಎಂದು ಸೌಮ್ಯವಾಗಿ ಕರೆದೆ. ಮತ್ತೆ ಸ್ವಲ್ಪ ಹೊತ್ತು ತಡೆದು ಇನ್ನೂ ಗಟ್ಟಿಯಾಗಿ ಕೂಗಿದೆ.

ಆದರೂ ಪ್ರತ್ಯುತ್ತರ ಬರಲಿಲ್ಲ. ನನ್ನ ಕೂಗಿಗೆ ತಾಯಿಯವರಾದರೂ ಎಚ್ಚರಿಯುತ್ತಿದ್ದರೇನೋ! ಅವರು ಮಲಗಿರುವುದಂತೂ ದೂರ– ಆ ಹಿಂದಿನ ಕೋಣೆಯಲ್ಲಿ! ಏನು ಮಾಡುವುದು, ದೇವಿ ಪ್ರತ್ಯಕ್ಷಳಾಗಬೇಕಾದರೆ? ಅವಳ ಹೆಸರನ್ನು ಕೂಗುವದಕ್ಕೇನೂ ನನ್ನ ಸಂಕೋಚವಿಲ್ಲ. ಆದರೆ ಜನ ಕೇಳಿದರೆ? ಅವರಿಗೇನು. ತಮ್ಮ ಮೋಜಿಗೆ ಇಷ್ಟು ವಸ್ತು ಸಿಕ್ಕರಾಯಿತು! ಒಂದು ಕ್ಷಣ ನಿಧಾನಿಸಿ ನಾನು ಒಂದು ಮಧ್ಯಮಾರ್ಗ ಕಂಡುಹಿಡಿದೆ. ಜನಕ್ಕೆ ಕೇಳಿರಬಾರದು– ಲಲಿತೆಗೆ ಬಿಟ್ಟಿರಬಾರದು!

"ಲಲಿತಾ ರಾಣಿ!" ಎಂದೆ ಮೆತ್ತಗೆ.

ಒಮ್ಮೆಲೆ ನಗೆಯ ಹೊನಲು ಕೋಡಿಯೊಡೆದು ಧುಮ್ಮಿಕ್ಕಿ ಬಂದಂತಾಯಿತು. ಆ ನಗೆಯೊಂದಿಗೆ ಕದವೂ ತೆರೆಯಿತು. ಲಲಿತೆಯ ನಗೆಯನ್ನು ಕಂಡು ನನ್ನ ಗೌರವ ಸ್ವಲ್ಪ ಕಂಪನಗೊಂಡಿತೇನೊ!

"ಹೂಂ, ಆಯಿತು ನಗು" ಎಂದೆ ನಾನು ಮೃದು –ಕಠೋರವಾಗಿ.

"ಓ, ಹೀಗೆ ಸಿಟ್ಟಾದರೆ ನಾನು ಕೇಳ್ತೀನೇನು? ಇವೊತ್ತು ಬೆಳಿಗ್ಗೆ ಕಟ್ಟಿದ್ದ ಜಿದ್ದು ನಾನೇನೂ ಮರೆತಿಲ್ಲ. ಏನಾದರೂ ಇನ್ನೊಂದಿಗೂ ಹೆಸರು ಹಿಡಿದು ಕರೆಯೋದಿಲ್ಲ ಎಂದು ನೀವೆ ಹೇಳಿದ್ದೀರಿ. ನೆನಪಿಲ್ಲವೇನು ನಿಮಗೆ ? ಒಂದಲ್ಲ. ಎರಡಲ್ಲ – ನಾಲ್ಕು ಬಾರಿ ಕೂಗಿದಿರಿ?"

"ಅಂತೂ ನಿಮ್ಮ ತಾಯಿ ತಂದೆ ಬುದ್ಧೀ ಪ್ರಯೋಗಿಸಿದ್ದಾರೆ, ಅನ್ನು!ಲಲಿತವಾದ ಹುಡುಗಿಗೆ ಲಲಿತವಾದ ಹೆಸರೆ ಸರಿ. ಮಲ್ಲಿಗೆಯನ್ನು ಮಲ್ಲಿಗೆಯಂತಲೆ ಕರೆಯಬೇಕು! ಅಲ್ಲವೇನೇ ಲಲಿತಾ?"

"ಆ ಮಾತು ಯಾಕೆ ಬೇಕ್ರಿ ಇಲ್ಲಿ ? ಏನಾದರೂ ಮರೆಸಬೇಕು ಎಂದರೆ ನೀವು ಯಾವಾಗಲೂ ಮುಂದೇ! ಈಗ ನೀವು ಸೋತಿರೊ ಇಲ್ಲೊ ಮೊದಲು ಹೇಳ್ರಿ. ಆಮೇಲೆ ಮುಂದಿನ ಮಾತು!"

"ಯಾರು ಸೋತರೇನು ಲಲಿತಾ?– ನಾನೇ ಸೋತೆ! ಸರಿ, ಆಯಿತಷ್ಟೇ ?"

"ಇನ್ನೇನೂ ಇಲ್ಲ, ನಿಮ್ಮ ಬಾಯಿಂದ ನನ್ನ ಹೆಸರು ಕೇಳಬೇಕು ಅಂತ ಆಶೆಯಾಗಿತ್ತು. ಅದಕ್ಕೆ ಅಷ್ಟು ಹೊತ್ತು ಸುಮ್ಮನೆ ಇದ್ದದ್ದು! ಸುಮ್ಮನೆ ಒಂದು ನೆವ ಅಷ್ಟೆ!"

"ಅಲ್ಲ, ಅದೆಂಥ ಆಸೆಯೆ ಜಿದ್ದು, ನಿನ್ದು ? ಪ್ರತಿಮಾತಿಗೊಮ್ಮೆ ನಿನ್ನ ಹೆಸರಿಲ್ಲದೆ ನಾನು ದನಿಯನ್ನೆತ್ತುವುದೇ ಇಲ್ಲ. ಹೀಗಿದ್ದರೂ –"

"ನನ್ನ ಹೆಸರನ್ನು ನಿಮ್ಮ ಬಾಯಿಂದ ಎಷ್ಟು ಸಲ ಕೇಳಿದರೂ ನನಗೆ ಬೇಸರವಿಲ್ಲ."

"ಲಲಿತಾ–ಲಲಿತಾ–ಲಲಿತಾ–ಸಾಕೆ? ಅಥವಾ ಇನ್ನೂ ಬೇಕೆ ? ಹೇಳು. ಸಂಕೋಚ ಮಾಡಿಕೊಳ್ಳಬೇಡ. ಬಿಚ್ಚು ಮನಸ್ಸಿನಿಂದ ಹೇಳು."

"ಹೀಗೆ ಹುಡುಗರಂತೆ ಅಣಕಿಸಿ ಕೇಳಿದರೆ ನಾನೇನು ಹೇಳಲಿ? ಹೂಂ ನಿಲ್ಲಿಸಬೇಡ ಅದೇನು ಪೂರ್ತಿ ಬರಲಿ. ಯಜಮಾನನಂತೆ ಕೇಳಬೇಕು. ಹೌದಲ್ಲೋ? ಇದೋ ನೆನಪಾಯಿತು ನೋಡು. ಆ ಮಾತು ಅಲ್ಲಿರಲಿ, ನೀನಾಗಿಯೆ ಜ್ಞಾಪಿಸಿ ಕೊಟ್ಟಂತಾಯಿತು. ನಮ್ಮ ಬಾಳುವೆಯ ಸುಖದುಃಖದ ವಿಚಾರ ಕುರಿತು ನಾವು ಆ ದಿನ ಯೋಚಿಸುತ್ತಿದ್ದೆವಲ್ಲವೆ ?"

ಲಲಿತಾ ಸುಮ್ಮನೆ ತಲೆ ಹಾಕಿದಳು.

"ಸಂಖ್ಯೆ ಆರು ಶುಭವೆಂದು ಹೇಳುತ್ತಾರೆ. ಅನ್ನಲಿಕ್ಕೂ ಬಹಳ ಸುಲಭ. ನಮಗೆ ಆರು ಮಕ್ಕಳಾದರೆ ಸಾಕು, ಅಲ್ಲವೇನೆ ಲಲಿ?"

"ಅನ್ನಲಿಕ್ಕೆ ಸ್ವಲ್ಪ ಕಷ್ಟವಾದರೂ 'ನಾಲ್ಕೇ' ಸರಿ. ನಿಮಗೆ ಅನ್ನುವುದು ಸುಲಭವಾಗಬೇಕೋ, ಜೋಕೆ ಮಾಡುವುದು ಸುಲಭವಾಗಬೇಕೋ?" ಎಂದು ಲಲಿತಾ ನನ್ನನ್ನು ಕೇಳಿದಳು.

ಅವಳ ಮಾತು ನನಗೆ ಸರಿಯೆಂದು ತೋರಿತು. ನಾಲ್ಕು ಒಪ್ಪಿಗೆಯಾಯಿತು.

"ಹಾಗಾದರೆ ನಿನಗೆ ಗಂಡಿನ ಮೇಲೆ ಪ್ರೀತಿ, ಹೆಣ್ಣಿನ ಮೇಲೆ ಅಪೇಕ್ಷೆಯೊ ?"

"ನನಗೆ ಗಂಡಿನ ಮೇಲೆ ಪ್ರೀತಿಯೊ, ಹೆಣ್ಣಿನ ಮೇಲೆ ಅಪೇಕ್ಷೆ. ನನಗೆ ಎರಡೂ

ಬೇಕು – ಎರಡೂ ಸಮವಾಗಿ ಬೇಕು. ಹೆಚ್ಚು ಕಡಿಮೆ ಆಗಲೇಬಾರದು!"

"ಅಂತೂ ಸಂಸಾರದ ತೂಕ ಹೊಂದಿಕೆಯಾಯಿತು. ಇನ್ನು ಉಳಿದಿರುವುದು ಒಂದೇ ಒಂದು! ಅದೊಂದು ಸರಿಗೊಂಡರೆ ಕಲಂಕವಿಲ್ಲದ ಚಂದ್ರಬಿಂಬ ನಮ್ಮ ಬದುಕು. ಜೀವನಪಥ ನಿಷ್ಕಂಟಕ, ನಿರಾಯಾಸ ಲಲಿತಾ !"

"ಅದೊಂದನ್ನು ಬಿಟ್ಟು, ಬೇಕಾದುದನ್ನು ಹೇಳಿ, ಕೇಳ್ತೇನೆ."

ಇದುವರೆಗೆ ಸುಖದಿಂದ ನೂತುಕೊಂಡು ಬಂದದ್ದೆಲ್ಲ ಒಂದರೆಕ್ಷಣದಲ್ಲಿ ಹಂಜಿ!

ಲಲಿತೆಗೂ ನನಗೂ ಒಂದು ವಿಷಯದಲ್ಲಿ ಮೊದಲಿನಿಂದಲೂ ಭಿನ್ನಾಭಿಪ್ರಾಯ. ಆ 'ಕಾರಣ' ಎಂದಾದರೊಮ್ಮೆ ನಮ್ಮ ನಡುವೆ ಬಂದು ನಮ್ಮನ್ನು ಅಗಲಿಸಿ ದೂರವಿರಿಸಿ ಬಿಡುವುದು. ಇದೇ ಕಾರಣಕ್ಕಾಗಿ ಅವಳೊಡನೆ ಜಗಳವಾಡಿ ಮುಖವನ್ನು ಒಂದೊಂದು ದಿಕ್ಕಿಗೆ ಕಳಿಸಿ ಕುಳಿತ ದಿನಗಳಿಗೇನೂ ಕೊರತೆಯಿಲ್ಲ.

"ಹೆಂಡತಿಯಾದವಳು ಗಂಡನನ್ನು ಅನುಸರಿಸಬೇಕು ಲಲಿತಾ!"

"ಎಲ್ಲ ವಿಧದಲ್ಲಿಯೂ ಸರಿ. ನನ್ನ ವಿರೋಧವೇನ್ನೂ ಇಲ್ಲ. ಆದರೆ ಅದೊಂದನ್ನು ಮಾತ್ರ ಬಿಟ್ಟು. ಆ ಒರಟು ಬಟ್ಟೆ ಕಂಡರೆ ನನಗೆ ಆಗುವುದೇ ಇಲ್ಲ." ನನ್ನ ಮಾತಿಗೆ ಲಲಿತೆಯ ಉತ್ತರ ಸಿದ್ಧವೆ !

ನಾನು ಖಾದಿ ತೊಟ್ಟು, ನನ್ನ ಹೆಂಡತಿ ತೊಡುವುದಿಲ್ಲ ಎಂದು ಖಡಾಖಂಡಿತ ಹೇಳಿದರೆ ನನಗೆ ಇನ್ನು ಹೇಗಾಗಬೇಡ ! ನನ್ನ ಹೆಂಡತಿಯೆ ನನ್ನ ಮಾತಿಗೆ ಒಪ್ಪದೆ ಹೋದ ಮೇಲೆ ಜನ ಒಪ್ಪುವ ಬಗೆಯೇನು? ಹೀಗಾಗಿ ನಾನು ಸಿಟ್ಟಿಗೆದ್ದೆ.

ಆ ದಿನದ ಮಾತು ಅಲ್ಲಿ ನಿಂತುಹೋಯಿತು.

ಅವಳ– ನನ್ನ ನಡುವೆ ಇರುವ ಭಿನ್ನಾಭಿಪ್ರಾಯ ಇಂದಿಗೂ ಮೇಳಗೊಂಡಿಲ್ಲ. ಈಗ ಮಾತ್ರ ನಾನು ಅದನ್ನು ಅಲ್ಲಿಗೆ ಬಿಟ್ಟುಬಿಟ್ಟಿದ್ದೇನೆ. ಒರೆಗೆ ಹಚ್ಚುವ ಹವ್ಯಾಸಕ್ಕೆ ಹೋಗಿಲ್ಲ. ಸಾಧ್ಯವಾದ ಮಟ್ಟಿಗೆ ಎಳೆದುನೋಡಿದೆ. ಲಲಿತಾ ನನ್ನ ಎಳೆಗೆ ಒಳಪಡುವಂತೆ ತೋರಲಿಲ್ಲ. ಆ ಪ್ರಕರಣ ಅಷ್ಟಕ್ಕೇ ಸಮಾಪ್ತವಾಗಿದೆ. ಮೊದಲೇನೊ ನನಗೆ ಶಿವನೆ ಅನ್ನಿಸಿತು! ಇಂದಾದರೂ ಆ ಅಳುಕು ಹೋಗಿದೆಯೆಂದು ಹೇಳಲಾರೆ. ಆದರೆ ಇಷ್ಟೆ! ಆ ಬಗ್ಗೆ ಈಗ ಮನಸ್ಸನ್ನು ಗಟ್ಟಿಮಾಡಿಕೊಂಡಿದ್ದೇನೆ.

ನಾನು ಪ್ರೀತಿಸುವ ನಮ್ಮ ಉದ್ಧಾರದ ತಂತು ಖಾದಿಯ ಬಗ್ಗೆ ಅವಳಿಗಿರುವ ಅನಾದರವನ್ನು, ಔದಾಸೀನ್ಯವನ್ನು ಕಂಡು ನನ್ನ ಮನಸ್ಸು ಆಗಾಗ ಈಗಲೂ ಪ್ರಕ್ಷುಬ್ಧವಾಗುವುದುಂಟು. ಆ ಸಂದರ್ಭದಲ್ಲಿ ನಾನು ಸಿಟ್ಟಿಗೆದ್ದರೂ ಏಳಬಹುದು. ಲಲಿತೆ ಮಾತ್ರ ಅದನ್ನೆಲ್ಲ ಸುಮ್ಮನೆ ನುಂಗಿಕೊಳ್ಳುವಳು!

ಆದರೆ ನನ್ನ ಮಾತು ಸ್ವಲ್ಪ ಬಿರುಸಾದರೆ ನನ್ನ ಧ್ವನಿ ಸ್ವಲ್ಪ ವಕ್ರವಾದರೆ ಲಲಿತೆಗೆ

ಸಹಿಸುವುದಾಗುವುದಿಲ್ಲ. ಅವಳೆದೆಯಲ್ಲಿ ಹುದುಗಿದ ಹೆಣ್ತನದ ನವುರು ನೀರೊಡೆದು ಬಿಡುವುದು. ಆಗ ಅವಳು ಗಳಗಳನೆ ಅತ್ತು, ಕಣ್ಣೀರಧಾರೆ ಹರಿಸಿಬಿಡುವಳು.

ತನ್ನ ಪ್ರಪಂಚ ತನ್ನ ಗಂಡನೆಂದು ತಿಳಿದು ಬಂದ ಹೆಣ್ಣಿಗೆ ಗಂಡನಾದವನು ಹೀಗೆ ಕಣ್ಣೀರಿನ ಕೂಳನ್ನು ತಿನ್ನಿಸಬಾರದು– ನನ್ನ ಹಾಗೆ!

ನನ್ನ ತಪ್ಪು ನನಗೆ ಇತ್ತಿತ್ತಲಾಗಿ ತಿಳಿದು ಬಂದಿದೆ. ತಡವಾದರೂ ಚಿಂತೆಯಿಲ್ಲ– ಅಂತೂ ತಿಳಿದಿದೆ! ಅದೇ ಒಳ್ಳೆಯದು.

ಗಾಂಧೀ ಕೋಶದಲ್ಲಿ ಒತ್ತಾಯ, ಜುಲುಮೆ, ಆಗ್ರಹ, ಹಿಂಸೆ–ಇವುಗಳಲ್ಲಿ ಯಾವುದೊಂದೂ ಇಲ್ಲ. ಎಲ್ಲವನ್ನೂ ಪ್ರೀತಿಯಿಂದ ಗೆಲ್ಲಬೇಕು. ಹೀಗೆಂದುಕೊಂಡು ಅವಳ ಮನಸ್ಸನ್ನು ತೀಡಲು, ಅವಳನ್ನು ಹಸನ್ಮುಖಿಯಾಗಿ ಮಾಡಲು ನಾನು ಗೋಳಾಡುತ್ತೇನೆ. ತೊಂದರೆಗೆ ಬೀಳುತ್ತೇನೆ. ಆ ಕಷ್ಟ ನುಂಗಲಾರದ ತುತ್ತು.

ಅದನ್ನು, ಆ ನೋವನ್ನು ಹೊಂಡತಿಯೊಂದಿಗೆ ಮಾತಿಲ್ಲದೆ ನಗೆಯಿಲ್ಲದೆ, ಸರಸವಿಲ್ಲದೆ ನಾಲ್ಕು ದಿನವನ್ನು ನೂಕಿದವರು ಚೆನ್ನಾಗಿ ಬಲ್ಲರು. ಅದು ಯಮಯಾತನೆ, ಕೈಹಿಡಿದವಳ ನಗೆ ಕುಲುಕುಲು ಎನ್ನದಿದ್ದರೆ ಮನೆಗೆ ಮನೆಯೆ 'ಬಿಕೊ' ಎನ್ನುವುದು!

ಈಗಲೂ ನಾನು ಲಲಿತೆಯನ್ನು ಒಂದೊಂದು ಸಲ ಅಳಿಸುತ್ತೇನೆ. ಆದರೆ ಇದು ನಿಷ್ಕಾರಣದ ಗೋಳು! ಖಾದೀ ಪ್ರಚಾರದ ಹಿಂಸೆಯಲ್ಲ – ಕೇವಲ ತಮಾಷೆಗಾಗಿ ಬಂದುದು! ಮೊದಲೇ ಅವಳಲ್ಲಿ ತಾಳ್ಮೆ ಮನೆಮಾಡಿ ಹೋಗಿದೆ. ಇಲ್ಲವಾದರೆ ಜಗಳವಿಲ್ಲದ ದಿನವೆ ಇರುತ್ತಿರಲಿಲ್ಲವೋ ಏನೋ! ಅವಳನ್ನು ಅಳಿಸಲಿಕ್ಕೆ ಇದೂ ಒಂದು ಕಾರಣ! ಇನ್ನು ಅವಳನ್ನು ರೇಗಿಸಿದರೂ ಅವಳನ್ನು ಪುನಃ ಸಮಾಧಾನಗೊಳಿವುದೇನೂ ದೊಡ್ಡ ಹೊರೆಯಲ್ಲ. ಅದಂತೂ ಅನುಭವದಿಂದ ಕಂಡುಬಂದ ಮಾತು. ಆಕೆ ನಾಗಿಣಿಯಂತೆ ಸಿಟ್ಟಿಗೆದ್ದಾಗಲೂ ಅವಳನ್ನು ನಗಿಸುವ ಸೂಕ್ಷ್ಮ ನನಗೆ ಸಿಕ್ಕಿಹೋಗಿದೆ ಎಂದ ಮೇಲೆ ಕೇಳುವುದೇನು ? ಅದರಿಂದಲೆ ಮನೆಯ ಸುಖ–ಶಾಂತಿ ಶಾಶ್ವತವಾಗಿ ಉಳಿದುಕೊಂಡಿದೆ.

ಲಲಿತೆಗೂ ನನಗೂ ಒಡಂಬಡಿಕೆಯಾಗಿದೆ. ಅದು ಕೇವಲ ನನಗೆ ಲಲಿತೆಗೆ ಅಷ್ಟೇ ಗೊತ್ತು! ನಮ್ಮ ಸಂಸಾರದ ಆ ಗುಟ್ಟನ್ನು ನಾನು ಖಂಡಿತ ಬಯಲಿಗೆ ಹಾಕಲಾರೆ. ಲಲಿತೆಯ ಕಿವಿ ಮುಟ್ಟಿದರೆ ನನ್ನ ಗತಿಯೇನೋ ?

ಅದನ್ನು ನಾನು ಬಾಯಿ ಬಿಡಲಾರೆ–ಎಂದೆಂದಿಗೂ!

ಲಲಿತೆಯಿಂದ ನನ್ನ ಮನೆ ಬೆಳಗಿದೆ. ಅಮರಾವತಿಯಾಗಿದೆ.

ಅವಳಲ್ಲಿ ನಾನು ಬಿರುಸುತನವನ್ನಾಗಲಿ, ಕಲ್ಲುಮನಸ್ಸನ್ನಾಗಲಿ ಇದುವರೆಗೆ ಕಂಡಿಲ್ಲ. ಇನ್ನು ಮೇಲೆ ನಾನು ಕಾಣಲಾರೆ.

ನನ್ನ ಬಾಳಿನಲ್ಲಿ ಮಂದಸ್ಮಿತ ಮೂಡಿದೆ ಆ ಜೀವದಿಂದ. ನನ್ನ ಸಪ್ಪೆ ಬದುಕಿನಲ್ಲಿ

ಅಮೃತಧಾರೆ ಎರೆದಿದ್ದಾಳೆ ಲಲಿತಾ!

೩

ಚಂದ್ರಾ ಶೇಖರನನ್ನು ತಾಯಿಯವರಿಗೊಪ್ಪಿಸಿ, ಗೌರಿಯೊಬ್ಬಳನ್ನೇ ಜೊತೆಯಲ್ಲಿ ಕರೆದುಕೊಂಡು ಲಲಿತಾ ತವರುಮನೆಗೆ ನಡೆದುಬಿಟ್ಟಳು.

ನಾವು ಪುನಃ ಅವಳನ್ನು ಕಾಣಲಿಕ್ಕೆ ಹೋದಾಗ ಕುಸುಮಾ ಆಗಲೆ ಮೂರು ತಿಂಗಳ ಕೈಗೂಸು.

ಲಲಿತಾ ಕುಸುಮೆಯನ್ನು ನಗೆಯ ತೊಟ್ಟಿಲಲ್ಲಿ ತೇಲಿಸಿಕೊಂಡು ತಂದು ನನ್ನ ಕೈಯಲ್ಲಿತ್ತಳು. ಹುಬ್ಬಿನ ಕೊಂಕು, ಕಣ್ಣಿನ ಮಾಟ– ಎಲ್ಲ ಅವಳಂತೆ. ಬಣ್ಣದಲ್ಲಿಯಾದರೂ ನನ್ನಂತೆ ಎನ್ನಲಾರೆ. ಮೂಗಿನ ರಚನಯೆಲ್ಲಿ ನನ್ನ ಛಾಯೆ ತೋರಿತು. ಅಷ್ಟೇ! ಒಟ್ಟಿನಲ್ಲಿ ಲಲಿತೆಯ ಸಂಕ್ಷಿಪ್ತಾಕೃತಿ.

"ಹೆಣ್ಣು –ಎಂದೇ ಹೇಳಿದ್ದೆ. ನನ್ನ ಮಾತು ನಿಶ್ಚಯವಾಯಿತಲ್ಲ!" ಎಂದೆ.

ನನ್ನ ಭವಿಷ್ಯ ಸತ್ಯವಾಯಿತೆಂದು ಲಲಿತೆಗೇನೂ ಮುಖಭಂಗವಾಗಲಿಲ್ಲ. ಆಕೆ ತನ್ನ ಸಂಭ್ರಮದಲ್ಲಿಯೆ ಹೇಳಿದಳು:

"ಹೆಣ್ಣೇನು, ಗಂಡೇನು? ನಮ್ಮ ಬಾಳ ಗೋಪುರದ ಕಳಸ. ನಮ್ಮ ಜೀವನೋದ್ಯಾನದ ಕುಸುಮ."

"ಸುಮ ಎಂದು ಹೆಸರಿಡಬಹುದಾಗಿತ್ತಲ್ಲ!" ಎಂದೆ.

"ಸುಮ ಎರಡೇ ಅಕ್ಷರ. ಸುಲಭವಾಗಿದೆಯೇನೋ ನಿಜ. ಆದರೆ ನೋಡಿರಿ "ಕುಸುಮ" ಹೇಗೆ ಬಾಯಿತುಂಬ ಬರುತ್ತದೆ! ಕುಸುಮ, ಆಹಾ ಎಷ್ಟು ಮಧುರವಾಗಿದೆ? ಸಂಗೀತಮಯ ಹೆಸರು ಅದು!"

"ನಿನ್ನ ಮಾತು ಒಪ್ಪಿಗೆ ನನಗೆ ಸುಮ –ಕುಸುಮ ಅರ್ಥವೇನೊ ಒಂದೇ! ಆದರೆ ಕುಸುಮ ಎಂಬ ಮಾತಿನಲ್ಲಿ ಸೂಸುವ ಇಂಪು ಕಂಪು ಸುಮ ಎಂಬ ನುಡಿಯಲ್ಲಿ ತುಳುಕಲಾರವು."

"ನೋಡ್ರಿ, ನಗ್ತಾಳೆ ಹೇಗೆ! ಏ ಕಳ್ಳೀ, ಹುಚ್ಚೀ, ಬೇಬೀ" ಎಂದು ಲಲಿತಾ ಕುಸುಮೆಯ ಪುಟ್ಟ ಕೋಮಲ ಗಲ್ಲಗಳನ್ನು ನೇವರಿಸಿ ಆಕೆಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಮುದ್ದಾಡಿದಳು.

"ನೀವು ನೋಡಿದಿರೋ ಇಲ್ಲೊ?" ಎಂದು ಲಲಿತಾ ನನ್ನನ್ನು ಪ್ರಶ್ನಿಸಿದಳು.

"ಏನು ನೋಡುವುದು?" ನಾನು ವಿಸ್ಮಯದಿಂದ ಕೇಳಿದೆ.

"ಓ, ನಿಮಗೆ ಗೊತ್ತೇ ಆಗಿಲ್ಲ!" ಎನ್ನುತ್ತ ಲಲಿತಾ ನಗುವುದಕ್ಕಾರಂಭಿಸಿದಳು.

ನನಗೆ ಏನೊಂದೂ ತಿಳಿಯಲೆ ಇಲ್ಲ!ಲಲಿತಾ ಕುಸುಮೆಗೆ ತೊಡಿಸಿದ್ದ ಕಸೆ ಅಂಗಿಯ

ಕಡೆಗೆ ಕೈಮಾಡಿ ತೋರಿಸುತ್ತ "ಇಲ್ಲಿ ನೋಡಿರಿ" ಎಂದಳು.

"ನೀನೆ ಹೊಲಿದಿದ್ದೇನು? ಚೆನ್ನಾಗಿದೆ."

"ಅದಲ್ರೀ ನಾನು ಕೇಳಿದ್ದು! ಬಟ್ಟೆ ನೋಡಿದಿರೇನು?"

ಹೀಗೆ ಅವಳು ಕೇಳಿದ ಮೇಲೆ ನನಗೆ ಅವಳ ನಗೆಯ ಕಾರಣ ಸ್ಪಷ್ಟವಾಗಿ ಹೊಳೆಯಿತು.

"ಅಲ್ಲ, ನಿನಗ ಆಗದ ಬಟ್ಟೆಯನ್ನು ಅವಳಿಗೇಕೆ ಹಾಕಿರುವೆ?"

"ನನಗ ಆಗಲಾರದ್ದು ಅವಳಿಗೂ ಆಗಬಾರದೆಂದು ನಿಮ್ಮ ಮಾತಿನ ತಾತ್ಪರ್ಯವೇನು? ಒಳ್ಳೇ ತರ್ಕ! ಇಷ್ಟೆ, ನನಗೆ ರೂಢಿಯಾಗಿಲ್ಲವೆಂದು ಜಿಗುಪ್ಸೆ. ಇಲ್ಲವಾದರೆ ನಾನು ತೊಡುತ್ತಿದ್ದೆ."

"ಅಂತೂ 'ತೊಡುತ್ತಿದ್ದೆ' ಎನ್ನುವ ಮಾತಾದರೂ ನಿನ್ನ ಬಾಯಿಂದ ಬಂದಿತಲ್ಲ ಅಷ್ಟೇ ಸಮಾಧಾನ!"

" 'ಇಲ್ಲ' ಎಂದು ನಾನೆಂದಿಗೂ ಅಂದಿಲ್ಲ. 'ನನಗೆ ಆಗದು' ಎಂದಿಷ್ಟೇ ಹೇಳುತ್ತ ಬಂದಿದ್ದೇನೆ. ನನಗೆ ತೊಡುವಂತಾದರೆ ತೊಟ್ಟೇನು! ಬಾರದೆನ್ನುವ ಹಟವಾಗಲಿ, ಆಗ್ರಹವಾಗಲಿ ನನ್ನಲ್ಲಿಲ್ಲ!"

"ಅಂತೂ ನಿನ್ನ ಮಗಳು ನಿನಗೆ ಖಾದಿ ತೊಡಿಸಲು ಸತ್ಯಾಗ್ರಹ ಹೂಡಿದ ಮೇಲೆಯೆ ನೀನು ತೊಡುವವಳೆಂದು ತೋರುತ್ತದೆ."

"ಸತ್ಯಾಗ್ರಹ ಹೂಡಿದರೆ ಮೀರಲಿಕ್ಕಾಗುತ್ತದೆಯೆ?"

"ಹಾಗಾದರೆ ನನ್ನ ಸತ್ಯಾಗ್ರಹಕ್ಕೆ ಅರ್ಥವೇ ಇಲ್ಲೇನು?"

"ನೀವು ಸತ್ಯಾಗ್ರಹವನ್ನು ಮಾಡಿಯೆ ಇಲ್ಲವಲ್ಲ!"

"ಅಂತೂ ನನ್ನದೇ ತಪ್ಪು!"

"ನಾಳೆ ನಮ್ಮ ಕುಸುಮಾ ನಾನು ಖಾದಿ ತೊಡದ ವಿನಃ ಊಟ ಮಾಡುವುದಿಲ್ಲವೆಂದು ಹಟ ಹಿಡಿದರೆ ತೊಡದೆ ಇರುವುದಕ್ಕಾದೀತೆ ? ನೀವೆ ಹೇಳಿರಿ. ನಿಜವಾದ ಲವಲವಿಕೆ ಎಂದಿಗೂ ಹುಸಿಯಾಗಲಾರದು!"

ಲಲಿತೆಯ ವಾಣಿಯನ್ನು ಕೇಳಿ ನನ್ನ ಸಂಕಲ್ಪ ಗಟ್ಟಿಗೊಂಡಿತು. ಲಲಿತೆಯ ಸಹವಾಸದಲ್ಲಿ ನನ್ನ ಬಾಳಿನ ವಿಷಗಳಿಗೆಯನ್ನು ಮರೆತು ಬಂದೆ. ಅವಳ ಅಮೃತಮಯ ಸಂಗದಲ್ಲಿ ಭವಿಷ್ಯಜ್ಜೀವನದ ಹೊಂಗನಸುಗಳನ್ನು ಕಟ್ಟಿ ಬಂದೆ. !

ಲಲಿತೆ ನನ್ನನ್ನೇನೊ ಅರಿತುಕೊಂಡಿದ್ದಾಳೆ. ನಾನೆ ಅವಳನ್ನು ಇದುವರೆಗೂ ಅರಿತುಕೊಳ್ಳಲಿಲ್ಲ. ಅವಳೆದುರು ಎಷ್ಟೊ ಕಾವ್ಯಮಯ ಚಿತ್ರಗಳನ್ನು ಹೆಣೆದೆ ಪ್ರಣಯದ ನಾನಾ ಸರಸ ಸಲ್ಲಾಪಗಳನ್ನು ಉಸುರಿದೆ. ಆದರೇನು? ಕಾವ್ಯದ ಭಾವ ಅವಳೆಂಬುದನ್ನು

ಮರೆತೆ! ಪ್ರಣಯದ ಗೀತೆ ಅವಳೆಂಬುದನ್ನು ಅರಿಯದಾದೆ!

ಕ್ರಮಶಃ ನನ್ನಲ್ಲಿ ಆ ತಿಳುವಳಿಕೆ ಮೂಡಿಬಂತು. ಅಂದಿನಿಂದ ನಮ್ಮ ನಮ್ಮಲ್ಲಿ ತೋರಿದ ಅಂತರ ನಮಗೆ ಅಡ್ಡವಾಗಿ ನಿಲ್ಲಲಿಲ್ಲ. ನಾವು ಒಬ್ಬರೊಬ್ಬರು ಹತ್ತಿರ ಹತ್ತಿರವಾದೆವು.

ಲಲಿತಾ ತನ್ನ ಚೊಚ್ಚಿಲು ಸಂಭ್ರಮದ ತೌರ ಸೌಖ್ಯವನ್ನು ಸವಿದು ಮರಳಿ ನಮ್ಮ ಮನೆಗೆ ಬಂದಮೇಲೆ ಜೀವನ ಒಂದು ಮಧುರ ಗೀತದಂತೆ ನವಿಲ ಸಿಂಗಾರದ ಕೊಳಲವಾಣಿಯಲ್ಲಿ ಉಯ್ಯಾಲೆಯಾಡತೊಡಗಿತು!

ಗೌರಿ, ಚಂದ್ರಾ, ಶೇಖರ–ಜೊತೆಯಲ್ಲಿ ಕುಸುಮಾ! ಮನೆ ಕಳೆಗೊಂಡು ಶೋಭಿಸಿ ಹೋಗಿದೆ! ಈ ನಾಲ್ಕು ಜೀವಗಳನ್ನೂ ಲಲಿತಾ ತನ್ನೆದೆಯಲ್ಲಿ ಹಿಡಿದುಕೊಂಡಿದ್ದಾಳೆ. ಒಂದು ಅತ್ತರೂ, ಒಂದು ಕೆಮ್ಮಿದರೂ ಅವಳ ಎದೆ ನಡುಗುವುದು. ನಾಲ್ಕು ಜನದ ನೋವನ್ನು ಕಂಡು ಬಾಡುವ ಜೀವ ಅದರ! ಈ ನಾಲ್ಕು ಮಕ್ಕಳ ಲಾಲನೆ ಪಾಲನೆಯಲ್ಲಿ ಹೆಚ್ಚು ಕಡಿಮೆ ಏನೂ ಇಲ್ಲ. ತಾಯ್ತನದ ಕರುಣೆ ಎಲ್ಲರಿಗೂ ಸಮಪಾಲು!

"ತನ್ನದಲ್ಲದ ಮಕ್ಕಳ ಮೇಲೆ ಇವಳಿಗೇಕಿಷ್ಟು ಹುಚ್ಚು?" ಎಂದು ನೆರೆಹೊರೆಯ ಜನರಾಡುವ ಸಂಕುಚಿತ ಮನಸ್ಸಿನ ಕುತ್ಸಿತ ವಿಚಾರಗಳಿಗೆ ಲಲಿತಾ ಕಿವಿಗೊಡುವುದಿಲ್ಲ. ಅವರ ಛಿದ್ರ ಹೃದಯಕ್ಕಾಗಿ ಮರುಗುವಳು. 'ಶಿವನೆ, ಎಂಥ ಸಣ್ಣ ಮನಸ್ಸು?' ಎನ್ನುವಳು.

ಚಿಲ್ಲರೆ ಬುದ್ಧಿ ಅವಳದಲ್ಲ. ಅವಳ ಮನಸ್ಸು ವಿಶಾಲ, ಅವಳ ಹೃದಯ ಮಹಾಸಾಗರ, ಕ್ಷುಲ್ಲಕದ ಸುಳಿವೆ ಅಲ್ಲಿಲ್ಲ.

ಖಾದಿ ಬಟ್ಟೆಯ ಒತ್ತಾಯ ಕ್ಷುಲ್ಲಕತನವೆ ಸರಿ. ತುಂಡು ಬಟ್ಟೆಯ ಸಂತುಷ್ಟಿಗಾಗಿ ಆತ್ಮ ತುಷ್ಟಿಯನ್ನು ಕಳೆಕೊಳ್ಳುವುದು ಜಾಣತನವೇನೂ ಆಗಲಾರದು. ಹೀಗೆಂದು ಯೋಚಿಸಿ ಆ ವಿಚಾರವನ್ನು ನಮ್ಮ ಮಾತುಕತೆಯಲ್ಲಿ ತರುವುದೆ ಇಲ್ಲ. ಬಟ್ಟೆಗಾಗಿ ಬಟ್ಟೆಗೆಡುವುದು ಎಲ್ಲಿಯ ಮಾತು ?

ಈ ತಿಳುವಳಿಕೆಯ ಬೆಳಕಿನಲ್ಲಿ ಕಾಲವಾಹಿನಿ ತೇಲಿಹೋಯಿತು.

ಲಲಿತಾ ಇನ್ನೊಂದು ಕಂದನ ಬಯಕೆಯನ್ನು ಹೊತ್ತು ನಿಂತಿರುವಳು. ತುಂಬಿದ ಮನೆ ಎಂದಿನಂತೆಯೆ ಕುಕಿಲಾಡುತ್ತಿರುವುದು. ಮಳೆಯಲ್ಲಿ ಮಿಂದ ಪ್ರಕೃತಿ ಹಚ್ಚಗೆ ತನ್ನ ತಾರುಣ್ಯದಲ್ಲಿ ಮೆರೆಯಲಾರಂಭಿಸಿದೆ.

ಭಾರತದ ನೆಲದಲ್ಲಿ ವಿಪ್ಲವದ ಗಾಳಿ ಬೀಸಿತು. ನಾಡಿನ ಮೂಲೆ ಮೂಲೆಗೂ ಅದರ ಕಂಪು ಸೋಂಕಿತು. ಜೀವನಪಥ ಅಲುಗಾಡಿಹೋಯಿತು. 'ಇನ್ನು ಸಾಕು' ಎಂಬ ಸೊಲ್ಲು ಹಿಮಾಚಲದಿಂದ ಕನ್ಯಾಕುಮಾರಿಯವರಗೆ ಮರುಧ್ವನಿಗೊಂಡಿತು

ಆಗಷ್ಟ ೧೧ನೆಯ ತಾರೀಕು ನಾನು –ಲಲಿತಾ, ಈ ವಿಪ್ಲವದ ಸುದ್ದಿಯನ್ನು ಓದುತ್ತಾ

ಇರುವಾಗ ಸಾರ್ವಭೌಮ ಸರಕಾರದ ಆತಿಥ್ಯ ವಹಿಸಲು ನನಗೆ ಆಮಂತ್ರಣ ಬಂದಿತ್ತು. ದೇಶಕ್ಕೇ ಪಿಡುಗು ಬಡಿದ ಹೊತ್ತು. ನಾನು 'ಒಲ್ಲೆ'ನೆಂದರೆ ಕೇಳುತ್ತದೆಯೆ? ಲಲಿತೆಯ ಮನೋದಾರ್ಢ್ಯವನ್ನು ಆ ಕ್ಷಣ ಮರೆತುಬಿಟ್ಟೆ. ಅವಳೆಲ್ಲಿ ಅತ್ತು ಕರೆದು ರಂಪಾಟ ಮಾಡುವಳೊ ಎಂದು ನನ್ನ ಮನಸ್ಸು ಹೊಯ್ದಾಡಿತು. ಲಲಿತೆಯೇನೂ ಖಿನ್ನಳಾಗಲಿಲ್ಲ. ದುಃಖ ಮಾಡಲಿಲ್ಲ. ನನಗೆ ತುಂಬ ಸಂತೋಷವಾಯಿತು.

ತಾಯಿಯವರಿಗೆ ನಮಸ್ಕರಿಸಿ ಸಿದ್ಧನಾದೆ. ಲಲಿತಾ ಆರತಿ ಬೆಳಗಿ ನನಗೆ ಕುಂಕುಮವಿರಿಸಿದಳು.

ಗೌರಿ, ಚಂದ್ರಾ, ಶೇಖರ– ಎಲ್ಲರನ್ನೂ ಕಂಡು ಕುಸುಮೆಗೆ ಒಂದು ಮುದ್ದು ಕೊಟ್ಟು ನಾನು ಪೋಲೀಸ ಬಸ್ಸಿನಲ್ಲಿ ಹೊರಟುಬಿಟ್ಟೆ. ಎಂಟು ದಿನಗಳ ನಂತರ ನನ್ನನ್ನು ಹಿಂಡಲಗೆ ಕಾರಾಗಾರಕ್ಕೆ ಕರೆದೊಯ್ದರು. ಅಲ್ಲಿಂದ ಎಂಟು ದಿನಗಳ ಮೇಲೆ ನನಗೆ ಲಲಿತೆಯ ಕಾಗದ ಬಂತು–ಕಾಂಗ್ರೆಸ್ ಟಪ್ಪಾಲಿನಲ್ಲಿ!

೨೦.೮.೧೯೪೨

ಪತಿದೇವನ ಚರಣಕಮಲಗಳಲ್ಲಿ

ಸಹಧರ್ಮಿಣಿಯ ಶಿರಸಾಷ್ಟಾಂಗ ನಮಸ್ಕಾರಗಳು–

ದೇಶವೆಲ್ಲ ಅಗ್ನಿಕುಂಡದಲ್ಲಿ ಕುದಿಯುತ್ತಿರುವಾಗ ಕುಶಲವೆಂದು ಹೇಳಲಾರೆ. ಉಚಿತವೂ ಅಲ್ಲ. ಲಾಠೀ ಪ್ರಹಾರ, ಗುಂಡಿನ ಮಳೆ ಇವೇ ಇಂದಿನ ರಾಜ್ಯಸೂತ್ರಗಳು. ನಿಃಶ್ಯಸ್ತ್ರರಾದ ಜನತೆಯ ಮೇಲೆ ಸರಕಾರ ಯುದ್ಧ ಹೂಡಿದೆ. ನಾಗರಿಕ ಜನರ ರಕ್ತ ಹೊಳೆಯಾಗಿ ಹರಿಯತೊಡಗಿದೆ. ಕೈಲಾಗದ ಮಕ್ಕಳು, ಅಬಲೆಯರ ಮೇಲೂ ಶಸ್ತ್ರ ಕಾಳಗ! ಆಸುರೀ ದಬ್ಬಾಳಿಕೆ ತನ್ನ ನಗ್ನರೂಪದಲ್ಲಿ ತಾಂಡವ ನರ್ತನಕ್ಕಾರಂಬಿಸಿದೆ!

ನನ್ನ ದೊರೆಯೆ, ನೀವು ನನಗೆ ಬೋಧಿಸುತ್ತಿದ್ದ ಖಾದಿಯ ಮರ್ಮವನ್ನು ಈಗ ಅರಿತುಕೊಂಡೆ. ಅದನ್ನು ಅರಿಯಬೇಕಾದ ಎಂಥ ಪ್ರಯೋಗ ನಡೆಯಬೇಕಾಯಿತೆಂಬುದನ್ನು ಹೇಳಲು ನಾಲಗೆ ಹಿಂಜರಿಯುವುದು. ಎದೆಯಲ್ಲಿ ಕುದಿಯುತ್ತಿರುವ ತಳಮಳವನ್ನು ಈ ಕಾಗದಕ್ಕೆ ಸುರಿಯಲು ನನಗೆ ಶಕ್ತಿಯಿಲ್ಲ. ಅಲ್ಪಸ್ವಲ್ಪ ಏನನ್ನಾದರೂ ಬರೆದಿದ್ದೇನಾದರೆ ಅದೆಲ್ಲವೂ ಖಾದಿಧಾರಣೆಯ ಪ್ರೇರಣೆಯಿಂದ ಎಂದಿಷ್ಟೇ ಹೇಳಬಲ್ಲೆ!

ಮೊನ್ನೆ ಈಗೆರಡು ದಿನಗಳ ಹಿಂದೆ ಹುಡುಗರೆಲ್ಲ ಸೇರಿ ಮೆರವಣಿಗೆ ತೆಗೆದಿದ್ದರು. ಆ ವಾನರ ಸೇನೆ ಎಷ್ಟೊಂದು ಉತ್ಸಾಹಭರಿತವಾಗಿತ್ತು! ನಾನು ನಮ್ಮ ಮನೆಯ ಆವಾರದಲ್ಲಿ ಆ ಸಂಪಿಗೆ ಗಿಡದ ಕಟ್ಟೆಯ ಮೇಲೆ ನಿಂತುಕೊಂಡೇ ಎಲ್ಲವನ್ನೂ ನಿರೀಕ್ಷಿಸುತ್ತಿದ್ದೆ. 'ಭಾರತ ಭಾಗ್ಯ ವಿಧಾತ' ಎಂದು ಹುಡುಗರೆಲ್ಲ ಸೇರಿ ಏಕಕಂಠದಿಂದ ನುಡಿಯುತ್ತಿದ್ದ ಆ ಹಾಡಿನಲ್ಲಿ ಸ್ವತಂತ್ರ ಭಾರತದ ಸುಪ್ರಭಾತ ಗಾನಗುಂಜಾರವದಲ್ಲಿ ತೇಲಿ ಬರುವಂತೆ ನನಗೆ

ಭಾಸವಾಗುತ್ತಿತ್ತು. ಮೆರವಣಿಗೆ ನಮ್ಮ ಮನೆಯ ಮುಂದುಗಡೆ ಬರುವುದಕ್ಕೂ ಪೋಲಿಸರ ದಳ ಎದುರಾಗುವುದಕ್ಕೂ ಸರಿಹೋಯಿತು. ಬಿಳಿಯ ಅಧಿಕಾರಿ ಎದುರಿಗೆ ಬಂದು ಚದುರಿಹೋಗಲು ಹುಡುಗರಿಗೆ ತಿಳಿಸಿದ. ಅವರು ಒಪ್ಪಲಿಲ್ಲ. ಜೋರು ಜುಲುಮೆಯಿಂದ ಅವರ ಕೈಯಲ್ಲಿದ್ದ ಗೌರವದ ಪತಾಕೆಯನ್ನು, ನಮ್ಮ ರಾಷ್ಟ್ರದ ಧ್ವಜವನ್ನು ಕಸಿದುಕೊಂಡು "ನಡೆಯಿರಿ" ಎಂದ ! ಪಾಪ, ಹುಡುಗರೇಕೆ ಹೋದಾರು ? ಆ ಅಧಿಕಾರಿಯ ದರ್ಪ ಅಲ್ಲಿಗೇ ನಿಲ್ಲಲಿಲ್ಲ. ಆ ಹುಡುಗರ ಮುಖ್ಯಸ್ಥನ "ಗಾಂಧಿ ಟೊಪ್ಪಿಗೆ"ಯವರೆಗೂ ಹರಿಯಿತು. ಅದು! ನನ್ನ ದೊರೆಯೆ, ಏನೆಂತ ಬರೆಯಲಿ? ಕೈ ಕಂಪಿಸತೊಡಗಿದೆ!

ಟೊಪ್ಪಿಗೆ ತೆಗೆದೊಗೆಯದಿದ್ದರೆ ಗುಂಡಿನಿಂದ ಸುಡುವೆನೆಂದು ಬೆದರಿಕೆ ಹಾಕಿದ. ನಾನು ಎವೆಯಿಕ್ಕದೆ ಅವಲೋಕಿಸಿದೆ. ಹುಡುಗ ಏನು ಹೇಳುತ್ತಾನೊ ಎಂದು ಮೈಯೆಲ್ಲ ಕಣ್ಣಾಗಿ ಆಲಿಸಿದೆ. "ಜೀವ ಹೋದರೆ ಹೋಗಲಿ, ಟೊಪ್ಪಿಗೆ ತೆಗೆಯುವ ಮಾತೇ ಇಲ್ಲ!" ಹೀಗೆನ್ನುವುದೆ ತಡ – ಗುಂಡು ಹಾರಿತ್ತು. ದೀನರ, ದಲಿತರ, ದರಿದ್ರರ ಹೊಟ್ಟೆಯ ಆಧಾರವಾದ ಖಾದಿಯನ್ನು ತೊಡುವುದೂ ಆಳರಸರ ಕಣ್ಣಿನಲ್ಲಿ ಅಪರಾಧ!

ಭಾರತೀಯರು ನಾವಿಂದು ನಿಃಶ್ಶಸ್ತ್ರರು; ನಿಃಸ್ಸಹಾಯಕರು. ಈ ಕೈ–ನೂಲಿನ ಬಟ್ಟೆಯೆ ನಮ್ಮ ಚಕ್ರ, ಗದೆ, ಪಾಶುಪತಾಸ್ತ್ರ! ಆ ಮಾತು ಸತ್ಯವಿರಬೇಕು! ಇಲ್ಲವಾದರೆ ನಿರುಪದ್ರವಿ ಬಟ್ಟೆಯಿಂದ ಸರಕಾರಕ್ಕೆ ಹೊಟ್ಟೆಶೂಲೆ ಯಾಕೆ ಬರಬೇಕು? ಭಾರತ ಶಕ್ತಿ, ನಮೋ ನಿನಗೆ!

ಈಗ ಶುಭ್ರ ಖಾದಿಯ ವೇಷಧಾರಿಣಿ ನಾನು ! ಹೊತ್ತು ಹೋಗದಿರುವುದರಿಂದ ದಿನವೂ ೩–೪ ಗಂಟೆ ನೂಲಲು ಪ್ರಾರಂಭಿಸಿದ್ದೇನೆ. ರಾಟೆ ಮನಸ್ಸಿಗೆ ಶಾಂತಿಯ ಪಾಠ ಹೇಳುತ್ತದೆ. ನೂಲುತ್ತಿದ್ದರೆ ಜೀವನದ ಎಂಥ ತುಮುಲವೂ ಮರೆತುಹೋಗುವುದು.

ಗೌರಿ, ಚಂದ್ರಾ, ಶೇಖರ ಎಲ್ಲರೂ ನಿಮ್ಮನ್ನು ನೆನಸುತ್ತಾರೆ, ಸತ್ಯಾಗ್ರಹ ಮಾಡಿ ನಿಮ್ಮ ಬಳಿಗೆ ಹೋಗುತ್ತೇನೆಂದು ಶೇಖರ ಹಠ ಹಿಡಿದು ಕುಳಿತಿದ್ದಾನೆ. ಅತ್ತೆಯವರು ನಿಮಗೆ ಆಶೀರ್ವಾದ ಹೇಳಿದ್ದಾರೆ. ಕುಸುಮೆಯ ಮುದ್ದುಗಳನ್ನು ಮರೆಯಬೇಡಿರಿ. ಅವಳು ತನ್ನ ತೊದಲಿನಲ್ಲಿ ನಿಮ್ಮನೆಷ್ಟು ಸಲ ಕರೆಯುತ್ತಾಳೆ ಒಂದು ದಿನಕ್ಕೆ–ಲೆಕ್ಕವೆ ಇಲ್ಲ. ಎಷ್ಟು ಸಲ ಎಂಬುದನ್ನು ಬರೆದಿಟ್ಟು ಮುಂದಿನ ಸಲ ತಿಳಿಸುತ್ತೇನೆ.

ನೀವು ಮನೆಯ ಕಡೆಯ ವಿಚಾರವನ್ನು ನೆನೆಸಿಕೊಂಡು ಅಧೀರರಾಗಬಹುದು. ನಾನು ತಮಗೆ ಈ ಮಾತನ್ನೇನೂ ಹೇಳಬೇಕಾಗಿಲ್ಲ. ತಾವು ಗುರುಗಳು! ನನಗೆ ಬೋಧಿಸಿದ ಪಾಠವನ್ನು ನಿಮ್ಮೆದುರು ಒಪ್ಪಿಸಿದೆ ಅಷ್ಟೆ! ತಪ್ಪುತಡೆ ಆಗಿದ್ದರೆ ಕ್ಷಮಿಸಿರಿ. ನಿರಂತರವೂ ನಿಮ್ಮ ಆಶೀರ್ವಾದದ ಕೃಪೆ ನನ್ನ ಮೇಲಿರಲಿ. ಇತಿ ತಮ್ಮ

ಚರಣ ಸೇವಕಿ

–ಲಲಿತಾ

೪

ಲಲಿತೆಯ ಕಾಗದವನ್ನೋದಿ ನನ್ನ ಮನಸ್ಸು ಮುಗಿಲಿಗೇ ನೆಗೆಯಿತು. ನನ್ನ ಸಮಗ್ರ ಕಾರ್ಯಗಳಲ್ಲಿ ನನ್ನ ಹೆಂಡತಿ ನನ್ನ ಕೈಹಿಡಿದು, ಜೊತೆಯಾಗಿ ಬಂದು, ಬರುವ ಲಾಭ ನಷ್ಟಗಳಿಗೆ ಸರಿ ಪಾಲುಗಾರಳಾಗುತ್ತೇನೆಂದು ಸ್ವಸಂತೋಷದಿಂದ ಒಪ್ಪಿಕೊಂಡರೆ ನನ್ನ ಭುಜಕ್ಕೆ ರೆಕ್ಕೆ ಒಡೆಯದೇನು? ಭವಿಷ್ಯ ಜೀವನದ ಕಲ್ಪನೆಯ ಕನಸುಗಳು ಮಾಲೆಮಾಲೆಯಾಗಿ ನನ್ನ ಮನಸ್ಸಿನಲ್ಲಿ ತೇಲಿಹೋದವು.

ದಿನ ಉರುಳಿ ನಸುಕು ಹರಿಯುವುದೊಂದೇ ತಡ ಹೊಸ ಹೊಸ ಮುಖಗಳು ಬಂದು ನಮ್ಮನ್ನು ಕೂಡಿಕೊಳ್ಳತೊಡಗಿದ್ದವು!

ಮೊದಲಿನ ನಾಲ್ಕೈದು ದಿನ ಅಪರಿಚಿತವಾದ ಹೊಸ ಜೀವನ ನಮಗೆ ಹೊಂದಿಕೆಯಾಗಲಿಲ್ಲ. ಬರಬರುತ್ತ ಅದೇ ರೂಢಿಯಾಯಿತು. ಲಲಿತಾ ಭಾವಿಸಿಕೊಂಡಂತೆ ಮನೆಬಿಟ್ಟು ಬಂದ ೩-೪ದಿವಸವೆಲ್ಲ ಮನೆಯ ಕಡೆಯ ಯೋಚನೆಯೆ! ಲಲಿತಾ ಈಗ ಬಹುಶಃ ಏನು ಮಾಡುತ್ತಿರಬಹುದು? ಗೌರಿ ತನ್ನ ಕಿರಿಕಿರಿಯನ್ನು ನಿಲ್ಲಿಸಿದ್ದಾಳೆಯೋ? ಚಂದ್ರಾನನ್ನು ಜೊತೆಯಲ್ಲಿ ಕರೆದುಕೊಂಡು ಶೇಖರ ಆಡುತ್ತಾನೆಯೊ ಇಲ್ಲವೊ? ಕುಸುಮೆಗೆ ನಾನು ಬರುವಾಗ ಸ್ವಲ್ಪ ಶೀತವಾಗಿತ್ತು- ಈಗ? ತಾಯಿಯವರು ನನ್ನ ಚಿಂತೆ ಮಾಡುತ್ತಿರಬಹುದಷ್ಟೇ -ಇವೇ ಮುಂತಾದ ಅನೇಕ ಯೋಚನೆಗಳು ಬಂದು ಹೋಗುತ್ತಿದ್ದವು.

ಜೈಲಿನಲ್ಲಿ ಜನಸಂದಣಿ ಹೆಚ್ಚಿದಂತೆ ಈ ವಿಚಾರ ತಾವಾಗಿಯೆ ಅಡಗಿಹೋದವು. ದೇಶದಾದ್ಯಂತವೂ ಕೆರಳಿದ ದಾವಾನಲದ ಕತೆಗಳನ್ನು ಕೇಳುವುದಕ್ಕೆ ವೇಳೆ ಸಾಲುತ್ತಿರಲಿಲ್ಲ. ಹೀಗಿರುವಾಗ ಸ್ವಂತದ ಮನೆತನದ ವಿಷಯಗಳಲ್ಲಿ ಮನಸ್ಸು ಹಾಕಲು ಅವಕಾಶವೆಲ್ಲಿ? ಲಲಿತೆಯ ಕಾಗದ ಬಂದಾಗಲೆ ಮನೆಯ ಕಡೆಯ ಯೋಚನೆ ನನ್ನೆದೆಯಲ್ಲಿ ಮೂಡಿದ್ದು. ಮನೆಯ ಕಡೆಯ ಯೋಚನೆಯೇನೂ ಮರುಕ್ಷಣದಲ್ಲಿ ಮರೆಯಾಗಿ ಹೋಯಿತು. ಆದರೆ ಲಲಿತೆಯ ಮನಸ್ಸಿನಲ್ಲಾದ ಮಾರ್ಪಾಟು ನನ್ನೆದೆಯ ರಂಗದಲ್ಲಿ ಓಕುಳಿಯನ್ನೆರೆದಿತ್ತು. ಅಮರವಾದ ಪ್ರಭಾವವನ್ನು ಬೀರಿತ್ತು.

ನಮಗೆ ದಿನವೆಲ್ಲವೂ ದೇಶೋದ್ಧಾರದ ಯೋಚನೆಯೆ! ಆಗಷ್ಟ ವಿಪ್ಲವ ಯಶಸ್ವಿಯಾದೀತೊ ಇಲ್ಲವೊ ಅದು ನಮಗೆ ಬೇಕಾಗಿರಲಿಲ್ಲ! ಯಾಕೆಂದರೆ ಜನಜಂಗುಳಿ ಕುರುಡು- ಕರೆದೊಯ್ಯುವ ಮಾರ್ಗದರ್ಶಿ ಯಾರೊಬ್ಬರೂ ಇಲ್ಲ! ಅದಕ್ಕೆಂತಲೆ ಅಲ್ಲಿ ಕಲೆತಿದ್ದ ನಾವೆಲ್ಲರೂ ಭವಿಷ್ಯತ್ಕಾಲದ ವ್ಯೂಹ ರಚನೆಯಲ್ಲಿ ನಿಮಗ್ನರಾಗಿದ್ದೆವು. ಕ್ರಾಂತಿಯ ನೂತನ ಮಂತ್ರವನ್ನು ಚೇತನದುತ್ಸಾಹದಿಂದ ನೆಯ್ಯತೊಡಗಿದ್ದೆವು!

ಹೊರಗಿದ್ದ ಜನಕ್ಕೆ ತಿಳಿಯದ ಸುದ್ದಿಗಳು ನಮಗೆ ತಿಳಿದು ಬರುತ್ತಿದ್ದವು. ಪತ್ರಿಕೆಗಳ

ಮೇಲಾದರೆ "ಸೆನ್ಸಾರ್"! ನಾನಾ ಮೂಲೆಗಳಿಂದ ಜೇಲಿಗೆ ಬರುತ್ತಿದ್ದ ಜನಗಳ ಮೇಲೆ ಯಾವ ಸೆನ್ಸಾರ್?

ಸರಕಾರ ತನ್ನ ದಬ್ಬಾಳಿಕೆ ನಡಿಸೇ ಇತ್ತು. ಸರಕಾರದ ದಬ್ಬಾಳಿಕೆ ಹೆಚ್ಚಿದಂತೆ ವಿರೋಧ ಪ್ರದರ್ಶನವೇನೂ ಕಡಿಮೆಯಾಗಲಿಲ್ಲ. ಒಂದು ಬಾಯಿ ಮುಚ್ಚುವ ಪ್ರಯತ್ನದಲ್ಲಿ ಸರಕಾರ ಯಶಸ್ವಿಯಾದರೆ ಹತ್ತು ಹೊಸ ಮುಖಗಳು ಅದೇ ಸ್ಥಳದಲ್ಲಿ ದನಿಯೆತ್ತುತ್ತಿದ್ದವು!

ಹೊಸ ಜನರು ಬಂದು ನಮಗೆ ಹೊಸ ಹೊಸ ಕತೆಗಳನ್ನು ಹೇಳುತ್ತಿದ್ದರು. ಸರಕಾರ ಜನಸ್ತೋಮದ ವಾಣಿಯನ್ನು ಅಮಾನುಷ ರೀತಿಯಿಂದ ಸದೆಬಡಿಯಲಾರಂಭಿಸಿತಂತೆ! ಚೀಮೂರು ಮುಂತಾದ ಅಸಂಖ್ಯ ಗ್ರಾಮ ನಗರಗಳಲ್ಲಿ ಮಾನಿನಿಯರಲ್ಲಿ ಪಾತಿವ್ರತ್ಯ ಹರಣವಾಯಿತಂತೆ! ನಾವು ಒಳಗೆ ಕುಳಿತುಕೊಂಡೆ "ಅಯ್ಯೋ" ಎಂದು ಹಲ್ಲು ಮಸೆದೆವು. ಒಬ್ಬ ದ್ರೌಪದಿಯ ವಸ್ತ್ರಾಪಹರಣ ಕುರುಕ್ಷೇತ್ರಕ್ಕೆ ಪೀಠಿಕೆಯಾಯಿತು. ಭಾರತ ದ್ರೌಪದಿಯ ಜನ್ಮಭೂಮಿ! ಇಲ್ಲಿಯ ಪ್ರತಿಯೊಬ್ಬ ನಾರಿಯ ಒಂದೊಂದು ರಕ್ತಬಿಂದುವಿನಲ್ಲಿ ದ್ರೌಪದಿ ಹುದುಗಿದ್ದಾಳೆ! ದ್ರೌಪದಿಯ ಶಾಪ ಎಂದಿಗೂ ತಪ್ಪುವುದಿಲ್ಲ. ಭಾರತ ಇಂದಲ್ಲ ನಾಳೆ ಕುರುಕ್ಷೇತ್ರವಾಗಲೇ ಬೇಕು– ಹೀಗೆಂದು ನಾವು ಮುಂದಿನ ಹೋರಾಟದ ರೂಪರೇಷೆಗಳನ್ನು ಚಿತ್ರಿಸುತ್ತಿದ್ದೆವು.

ನಾನು ಸೆರೆಮನೆಗೆ ಹೋದ ಒಂದು ತಿಂಗಳ ಅನಂತರದಲ್ಲಿ ಚಳವಳಿ ಆಗಲೇ ಇಳಿಮುಖವಾಗಿತ್ತು. ಮೆರವಣಿಗೆ ಇತ್ಯಾದಿಗಳೆಲ್ಲ ಕ್ರಮೇಣವಾಗಿ ನಿಂತುಹೋಗಿದ್ದವು ಎನ್ನಬಹುದು. ಒಂದೊಂದು ಊರಿನಲ್ಲಿ ಮಾತ್ರ ಅಡೆತಡೆಯಿಲ್ಲದೆ ಹಾಗೆಯೇ ನಡೆದಿದ್ದವು. ಅದೇನು, ಎಲ್ಲರೂ ಒಪ್ಪತಕ್ಕ ಮಾತೇ.

ಲಲಿತಾ ಮೆರವಣಿಗೆಯಲ್ಲಿ ಭಾಗವಹಿಸಿದ್ದಳು ಎಂದು ಯಾರೊ ಒಂದೆರಡು ದಿನದ ಮೇಲೆ ಸುದ್ದಿ ತಂದರು. ನನಗೆ ಭರವಸೆಯಾಗಲಿಲ್ಲ. ಒಂದು ವೇಳೆ ಅವರು ತಂದ ಸುದ್ದಿ ನಿಶ್ಚಯವೇ ಆಗಿದ್ದಲ್ಲಿ ನನಗೆ ಸಂತೋಷವೂ ಸರಿ, ದುಃಖವೂ ಸರಿ! ನನ್ನ ಹೆಂಡತಿ ದೇಶಕ್ಕಾಗಿ ಕಷ್ಟನಷ್ಟ ಅನುಭವಿಸಲು ಸಿದ್ಧಳಾದಳಲ್ಲ ಎಂಬ ಸಂತೋಷ!ಹಸುಮಕ್ಕಳ ಅನುಪಾನವನ್ನು ನೋಡಿಕೊಳ್ಳದೆ ದೂಡಿಬಂದಳೆಂಬ ದುಃಖ! ಅವರು ಹೇಳಿದ ಸುದ್ದಿ ನಿಜವೆ? ಛೆ, ಆಗಿರಲಾರದು! ಒಂದು ವೇಳೆ ನಿಜವೆಂದರೆ ತಾಯಿಯವರು ಎತ್ತ ನೋಡಬೇಕು? ಏನು ಮಾಡಬೇಕು? ನನಗೆ ಯಾವುದೊಂದೂ ತೋಚಲಿಲ್ಲ. ಅಂತೂ ಒಟ್ಟಿನಲ್ಲಿ ಮನೆಯ ಯೋಚನೆ ಬಂದುಬಿಟ್ಟು ನನ್ನ ಧೈರ್ಯವುಡುಗಿತು. ನಾನು ಅಧೀರನಾದೆನೆಂದರೂ ಸರಿ!

ಈ ಎಳಕುಳಿಯ ಸೆಳಕಿನಲ್ಲಿ ಸಿಕ್ಕು ಇನ್ನೂ ಮೂರು –ನಾಲ್ಕು ದಿನಗಳೂ ಸರಿದವು. ಲಲಿತಾ ಕಳಿಸಿದ ಸುದ್ದಿ ಬಂದು, ಎಲ್ಲ ನಿಶ್ಚಿಂತೆಯಾಯಿತು. ನನ್ನ ಹೆಸರಿನ ಗೌರವವನ್ನು ಕಾಪಾಡುವುದಕ್ಕಾಗಿ ಅವಳು ಮೆರವಣಿಗೆಯಲ್ಲಿ ಭಾಗ ವಹಿಸಿದ್ದಳಂತೆ. ನಾನು ಬೇಡವೆಂದರೆ

ಇನ್ನೊಮ್ಮೆ ಆ ಗೋಜಿಗೆ ಹೋಗುವುದಿಲ್ಲವಂತೆ! ನಾನು ಬೇಡವೆಂದು ಹೇಗೆ ಹೇಳಲಿ ? ನಾನು ಸುಮ್ಮನಿದ್ದು ಬಿಟ್ಟೆ! ಲಲಿತಾ ನನ್ನ ಮೌನವನ್ನು ಏನೆಂದು ಅರ್ಥ ಮಾಡಿಕೊಂಡಳೊ ಏನೊ!

ಲಲಿತಾ ಇಷ್ಟೆಲ್ಲ ತೊಂದರೆಗಳನ್ನು ಏತಕ್ಕೆ ಮೈಮೇಲೆ ತೆಗೆದುಕೊಳ್ಳಬೇಕು? ಅವಳ ಹೆರಿಗೆಯ ದಿನಗಳಂತೂ ಸಮೀಪಿಸಿವೆ. ಈ ಸಲ ನಿಶ್ಚಯವಾಗಿಯೂ ಗಂಡು ಎಂದು ಲಲಿತಾ ಹೇಳಿದ್ದಾಳೆ. ಅವಳ ಕ್ರಾಂತಿಮಯ ಜೀವನದ ಪ್ರಭಾವವನ್ನು ಆ ಗರ್ಭಸ್ಥ ಶಿಶು ಧರಿಸಲೇಬೇಕು. ಕ್ರಾಂತಿಯ ಪುತ್ರ ಕ್ರಾಂತಿವಾಣಿಯಾಗಲೇಬೇಕು. ಕುಸುಮೆಯ ತಮ್ಮ ಕಠೋರ ವಜ್ರಶಕ್ತಿಯಾಗುವನೇನು? ನೋಡಬೇಕು! ಕಾಲ ಅದಕ್ಕೆ ಉತ್ತರ ಹೇಳಲಿ.

ನಾನು ಪುತ್ರೋತ್ಸವದ ಆನಂದೋತ್ಸಾಹದಲ್ಲಿ ದೇಶದ ಚಿಂತನೆಯನ್ನೂ ಮರೆತೆನೇನೊ! ನನಗೆ ಲಲಿತೆಯನ್ನುಳಿದ ಇತರ ವಿಷಯಗಳಲ್ಲಿ ಆಸಕ್ತಿ ಮಂದವಾಗುತ್ತ ಬಂತು.

ಸೆರೆಮನೆಯ ಮಿತ್ರರು ನನ್ನ ಸ್ವಭಾವದಲ್ಲಾದ ವ್ಯತ್ಯಾಸವನ್ನು ಕಂಡು ದಿಗಿಲುಗೊಂಡರು. "ಇದೇನು ಮಳೆ ಬಂದು ನಿಂತಂತಾಯಿತಲ್ಲ?" ಎಂದರು. ಅವರಿಗೆ ಉತ್ತರವಾಗಿ ಏನನ್ನೂ ಹೇಳುವ ಸ್ಥಿತಿಯಲ್ಲಿಯೂ ನಾನಿರಲಿಲ್ಲ!

ಆ ದಿನ ಮಧ್ಯಾಹ್ನ ತಾಯಿಯವರಿಂದ ಕಾಗದ ಬಂತು. ಭಯ ಆಶ್ಚರ್ಯಗಳಿಂದ ಓದಿದೆ. ಎರಡು ದಿನಗಳ ಹಿಂದೆ ಲಾಠೀ "ಚಾರ್ಜ" ಆಯಿತಂತೆ! ನಾಲ್ಕೂರು ಜನರಿಗೆ ಸ್ವಲ್ಪ ಪೆಟ್ಟಾಯಿತಂತೆ! ಅದರಲ್ಲಿ ಲಲಿತೆಯೂ ಒಬ್ಬಳಂತೆ! ನನಗೆ ಕಾಗದದೊಳಗಿನ ಅಕ್ಷರಗಳು ಒಂದಕ್ಕೊಂದು ಸೇರಿಕೊಂಡು ಕಾಣದಂತಾಗಿ ಹೋದವು. ಕಣ್ಣನ್ನು ಒರೆಸಿಕೊಂಡು ಪುನಃ ಓದಿದೆ. "ಎರಡು ದಿನಗಳ ಹಿಂದೆಯಿದ್ದ ಚಿಂತೆಗೆ ಈಗ ಅವಕಾಶವಿಲ್ಲ. ಲಲಿತಾ ಗುಣಮುಖಳಾಗತೊಡಗಿದ್ದಾಳೆ. ಕುಸುಮಾ ಅವಳ ಬಳಿಯಲ್ಲಿಯೇ ಇದ್ದಾಳೆ!"

ನನಗೆ ರಾತ್ರಿಯೆಲ್ಲ ಲಲಿತೆಯದೆ ಕನಸು! ಎದ್ದರೆ ಅವಳ ವಿಚಾರ, ಮಲಗಿದರೆ ಅವಳ ಕನಸು. ನನ್ನ ಕಣ್ಣೀರ ಹಸಿಗೆ ತಲೆದಿಂಬು ತೊಯ್ದು ತಪ್ಪಡಿಯಾಗಬೇಕು. ನನ್ನ ತಳಮಳವನ್ನು ಯಾರ ಮುಂದೆ ಹೇಳಲಿ?

ಹಿಂದಿನ ಸರಸ ಸಲ್ಲಾಪಗಳನ್ನು ನೆನೆದುಕೊಂಡು, ಬಂದ ಕಳವಳವನ್ನು ಮರೆಯಲು ಯತ್ನಿಸಿದೆ. ಕೊಂಚ ಸಮಾಧಾನವಾದಂತಾಯಿತು. ಲಲಿತಾ "ನಾಲ್ಕು" ಮಕ್ಕಳೆಂದು ಹೇಳಿದ್ದಾಳಲ್ಲವೆ? ಅವಳ ಮಾತು ಎಂದಿಗೂ ಹುಸಿಯಾಗುವುದಿಲ್ಲ!

ಆಸೆ ನಿರಾಸೆಗಳ ಉಯ್ಯಾಲೆಯಲ್ಲಿ ತೂಗುತ್ತ ಇನ್ನೆರಡು ದಿನಗಳನ್ನು ನೂಕಿದೆ. ಮೂರನೆಯ ದಿನ ನನ್ನನ್ನು ಬಿಡುಗಡೆ ಮಾಡಿದ ಆಜ್ಞೆ ಬಂದಿತ್ತು. ನನ್ನ ಕಿವಿಯನ್ನೇ ನಾನು ನಂಬದಾದೆ.

ಅಂತೂ ಆ ದಿನ ನಾನು ಸ್ವತಂತ್ರನಾದೆ!

ಲಲಿತೆಯ ಯೋಚನೆಯ ಮೇಲೆ ನನ್ನ ಮನಸ್ಸು ಕಾದು ಕೂತಿತ್ತು. ಅವಳ ಕ್ಷೇಮವಾರ್ತೆ ಬೆಳಗಾವಿಯಲ್ಲಿಯೇ ನನಗೆ ತಿಳಿದುಬಂದು ನನ್ನ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾದಂತಾಯಿತು!

ರೈಲು ವೇಗವಾಗಿ ಓಡತೊಡಗಿತ್ತು. ನನ್ನ ಹೃದಯವೆಲ್ಲವೂ ಲಲಿತೆಯನ್ನು ಯಾವಾಗಲೊ ಸೇರಿಕೊಂಡು ಹೋಗಿತ್ತು. ರೈಲು ತನ್ನ ವೇಗದಲ್ಲಿ ತಾನು ಸಾಗಿದ್ದರೂ ನನ್ನ ಆತುರಕ್ಕೆತೃಪ್ತಿಯಿಲ್ಲ. ಇನ್ನೂ ಬೇಗ ಬೇಗ ಓಡಬೇಕು ಅದು! ಆದಷ್ಟು ಶೀಘ್ರ ನಾನು ಲಲಿತೆಯನ್ನು ಕಾಣಬೇಕು.

ಲಲಿತಾ ತುಂಬು ಬಸುರಿ !ಮೂರ್ತಿಯನ್ನು ಹೊತ್ತು ನಿಂತ ದೇವಾಲಯದಂತೆ ಮಂಗಳಮಯವಾಗಿ ಕಂಗೊಳಿಸುವಳು.

ಕುಸುಮಾ ನನ್ನನ್ನು ತೊದಲು ಮಾತಿನಲ್ಲಿ ಕರೆಯುವಳಂತೆ. ಒಂದು ದಿನಕ್ಕೆ ಎಷ್ಟು ಬಾರಿ ಕರಿಯುವಳೋ ಎಣಿಸಿ ನೋಡಿ ಬರೆಯುತ್ತೇನೆಂದು ಬರೆದಿದ್ದಳು ಲಲಿತಾ! ದಿನಕ್ಕೆ ಎಷ್ಟು ಸಲ ನನ್ನನ್ನು ಕರೆಯುವವಳು, ನಾನು ಹೋದಾಗ್ಗೆ ಏನು ಮಾಡುವಳೋ ನೋಡಬೇಕು!

ಶೇಖರ ಸತ್ಯಾಗ್ರಹ ಮಾಡುತ್ತಾನಂತೆ. ನೋಡಿದರೆ ಒಂದು ಚೋಟು ಇದ್ದಾನೆ – ಎಷ್ಟು ಮುಂದೋಟ!

ಚಂದ್ರಾ ನಾನು ಹೋದೊಡನೆಯೆ "ಅಪ್ಪ ಬಂದಾ" ಎಂದು ಕುಣಿದಾಡಿ ಬಿಡುವಳು. ಎರಡು ದಿನಗಳ ಮಟ್ಟಿಗಂತೂ ಅವಳು ನನ್ನ ಕೈಬಿಟ್ಟಿರುವುದೇ ಇಲ್ಲ!

ತಾಯಿಯವರ ಹಿಗ್ಗು ಕಣ್ಣಿನಲ್ಲಿ ಹರಿದು ಬರುವುದು, ನನ್ನನ್ನು ಕಂಡು!

ಇಷ್ಟೆಲ್ಲ ಯೋಚನೆ ಮಾಡಿ ಮುಗಿಸಿ ಮತ್ತೆ ಪ್ರಾರಂಭಿಸಿದರೂ ಊರು ಇನ್ನೂ ಮೂವತ್ತು ಮೈಲುಗಳಾಚೆಗೆ!

ಲಲಿತಾ ಮೊದಲೇ ಚೆಲುವಾದ ಆಕೃತಿ! ಖಾದಿಬಟ್ಟೆಯಲ್ಲಂತೂ ಅವಳು ಗಂಭೀರವಾಗಿ ವಿಜಯದೇವಿಯಂತೆ ಶುಭ್ರವಾಗಿ ಗೌರವದ ಕುರುಹಾಗಿ ಕಂಗೊಳಿಸುವಳು!

ಅವಳನ್ನು ಕಾಣುವುದೇ ಒಂದು ಭಾಗ್ಯ. ಹೆಣ್ಣಿನ ಸ್ಮರಣೆ ರೂಪವೆತ್ತಂತೆ ಇದ್ದಾಳೆ ಲಲಿತಾ! ಅವಳು ನನಗೆ ಬರಿ ಸ್ತ್ರೀಯಲ್ಲ, ದೇವಿ!

ಈ ಯೋಚನೆ ಇನ್ನೂ ನಡೆದಿರುವಾಗಲೇ ನಾನು ರೈಲಿನಿಂದಿಳಿದೆ.

ನನ್ನನ್ನು ಕಾಣಲು ಸ್ನೇಹಿತರು ಕಾದಿದ್ದರು. ಅವರ ಕುಶಲವನ್ನು ವಿಚಾರಿಸಿ ಕುದುರೆ ಗಾಡಿಯಲ್ಲಿ ಕುಳಿತೆ. ಲಲಿತೆಗೇನೂ ಹೆಚ್ಚು ಕಡಿಮೆಯಾಗಿಲ್ಲವೆಂದು ನನಗೆ ಅವರಿಂದ ಗೊತ್ತಾಯಿತು.

ಮೆರವಣಿಗೆ ಇನ್ನೂ ನಡೆದಿದ್ದವು. ಜೈ ಜೈಕಾರ ಇನ್ನೂ ಅಡಗಿರಲಿಲ್ಲ. ಶಾಲೆಯ ಅಂತಸ್ತಿನ ಮೇಲೆ ಕಟ್ಟಿದ ಧ್ವಜ ನನ್ನ ಕಣ್ಣಿಗೆ ಬಿತ್ತು. ಅದಕ್ಕೆ ನನ್ನ ವಿಧೇಯತೆಯ ವಂದನೆಗಳನ್ನು ಸಲ್ಲಿಸಿದೆ!

ಕುದುರೆ ಗಾಡಿ ಹಾಗೇ ಮುಂದಕ್ಕೋಡಿತು. ನಮಸ್ಕಾರ ಹೇಳಿದವರಿಗೆ ಪ್ರತಿ ನಮಸ್ಕಾರ ಸಲ್ಲಿಸುತ್ತ ನಮ್ಮ ದಾರಿ ಸಾಗಿತ್ತು.

"ಜಮುನಾ ಗಂಗಾ."

"ಉಜ್ವಲ ಜಲಧಿ ತರಂಗಾ"ಎಂದು ಭಾರತದ ಸರ್ವ ಜನಜಂಗುಳಿಯನ್ನು ಬಂಧಿಸಿ ನಿಲ್ಲಿಸದ ಆ ಮಹಾಗೀತೆಯ ಈ ಎರಡು ಚರಣಗಳು ಗಾಳಿಯಲ್ಲಿ ತೇಲಿಬಂದವು. ಹೃದಯದಲ್ಲಿ ರೋಮಾಂಚವಾದಂತಾಯಿತು!

ಸಂಜೆಯ ರಕ್ತವರ್ಣ ಆಗಸದಲ್ಲಿ ಮೋಹದ ರಂಗೆರಚಿತ್ತು. ತೃಪ್ತಿಯ ಗೀತವನ್ನು ಉಲಿಯುತ್ತ ಪಕ್ಷಿಸಂಕುಲ ತಮ್ಮ ನಿವಾಸಗಳಿಗೆ ಹಿಂದಿರುಗುತ್ತಿದ್ದವು.

ನಾನಿನ್ನೂ ಮನೆಯನ್ನು ತಲುಪಿರಲಿಲ್ಲ. ನಮ್ಮ ಓಣಿಯ ನಮ್ಮ ಮನೆ ಸಮೀಪದ ನಿಂಗವ್ವ ಹೇಳಿದಳು, ಆಸ್ಪತ್ರೆಯಲ್ಲಿದ್ದಾರೆ ಎಂದು! "ಹೆಂಗೈತಿ ನಿಂಗವ್ವ?" ಎಂದೆ. "ಅಮ್ಮ ಮಧ್ಯಾಹ್ನ ಕಂಡಿದ್ನು ಕಣಪ್ಪ, ಗುಣ ಅಂದಳು" ಎಂದು ಆಕೆ ಹೇಳಿದಳು.

ನಾನು ಅದೇ ಗಾಡಿಯಲ್ಲಿ ಹಾಗೇ ಆಸ್ಪತ್ರೆಗೆ ನಡೆದುಬಿಟ್ಟೆ.

ಯಾವುದೋ ಒಂದು ಜನ್ಮೋತ್ಸವನಾಗಿರಬೇಕು. ಹೊಸ ಕೂಸು ಮಂಗಳವಾಗಿ ಕಿರುಚುತ್ತಿತ್ತು. ಲಲಿತಾ ಶಾಂತವಾಗಿ ನಿದ್ರಿಸುತ್ತಿದ್ದುದು ನನಗೆ ದೂರದಿಂದಲೇ ಕಾಣಿಸಿತು. ಲಲಿತೆಯ "ನಾಲ್ಕು" ಮಕ್ಕಳು ಅವಳನ್ನು ಮುಕುರಿ ನಿಂತಿದ್ದವು. ನಾನು ಒಳಗೆ ಕಾಲನ್ನಿಡುತ್ತಲೂ ತಾಯಿಯವರ ರೋದನ ನನಗೆ ಏನೆಲ್ಲವನ್ನೂ ಹೇಳಿತು.

ನಾನು ಕಣ್ಣೀರು ಕರೆಯಲಿಲ್ಲ! ಕಣ್ಣೀರು ಹಾಕುವಷ್ಟೂ ನನ್ನ ದುಃಖ ಲಘುವಾಗಿರಲಿಲ್ಲ. ನಾನು ನಾಲ್ಕು ಮಕ್ಕಳನ್ನೂ ಎದೆಗವಚಿಕೊಂಡು ಸುಮ್ಮನೆ ನಿಂತುಬಿಟ್ಟೆ!

ಧ್ವಜಾರೋಹಣದ ಸಾಯಂಪ್ರಾರ್ಥನೆ ಬಳಿಯ ಮೈದಾನದಿಂದ ಗಂಭೀರವಾಗಿ ಗಾಳಿಯಲ್ಲಿ ತೇಲಿಕೊಂಡು ಗಂಗೆಯಂತೆ ತುಳುಕಿ ಬರುತ್ತಿತ್ತು. "ಝೇಂಡಾ ಊಂಚಾ ರಹೇ ಹಮಾರಾ." ಗಾಳಿಯಲ್ಲಿ ಬಾವುಟ ಸ್ವಚ್ಛಂದವಾಗಿ ಪಟಪಟನೆ ಹಾರಾಡುತ್ತಿತ್ತು.

* * * *

# ಅನ್ನ ದೇವರು

"ವರುಷ ಹೋಯಿತು ವರುಷ ಬಂದಿತು
ಹರುಷ ಬಾರದು ಬಾರದು;
ಬಯಕೆ ಆಸೆಯೆ? ಒಂದೂ ಫಲಿಸದು
ಎದೆಯ ವೇದನೆ ತೀರದು"

ವಿ.ಸೀ.

ಕಾಲ ಎಷ್ಟು ಬೇಗ ಓಡುತ್ತದೆ! ದಿನ ಉರುಳಿ ದಿನ ಬರುವುದೇನು ತಡ? ಇಂದೊ ನಿನ್ನೆಯೊ ಎನ್ನುವಂತಿದ್ದ ಮಾತು, ಆಗಲೆ ಎಷ್ಟೊಂದು ಹಿಂದಿನದಾಗಿ ತೋರುವುದಲ್ಲ? ಗಂಗವ್ವ, ಗೌಡರ ಮನೆಯಲ್ಲಿ ಕೆಲಸಕ್ಕೆ ನಿಂತು ಇಂದಿಗೆ ಐದು ವರುಷಗಳ ಮೇಲಾಗಿ ಹೋದವು. ಎಂಥ ಮಿಂಚಿನ ವೇಗ!

ಅಲ್ಲಿ ಅವಳಿಗೆ ಕೆಲಸಕ್ಕೇನೂ ಕೊರತೆಯಿಲ್ಲ. ನಿತ್ಯವೂ ಎರಡು ಹೊತ್ತು ಕಸಮುಸುರೆ ಕೆಲಸ ಮಾಡಬೇಕು. ಬಟ್ಟೆಬರೆ ಸೆಳೆಯಬೇಕು. ಪಾತ್ರೆ ಸಾಮಾನು ತಿಕ್ಕಬೇಕು. ನೆಲವನ್ನು ಸಾರಿಸಬೇಕು ಕಾಳುಕಡಿ ಹಸನು ಮಾಡಬೇಕು. ಹಾಗೆಯೆ ಹುಡುಗರ ಉಪದ್ರವ, ಕಿರುಕಳ ಮುಂತಾದವನ್ನೆಲ್ಲ ತಾಳಿಕೊಳ್ಳಬೇಕು. ಒಂದೇ, ಎರಡೇ? ಹೀಗೇ ಎಂದು ಒಂದು ಲೆಕ್ಕವಿಲ್ಲ, ಅಳತೆಯಿಲ್ಲ! ಇನ್ನು ಇದಕ್ಕೂ ಮೀರಿ ಕೈಗೆ ಪುರಸತ್ತು ಸಿಕ್ಕರೆ ಲಕ್ಷ್ಮಿಯನ್ನು ಬೇರೆ ಆಡಿಸಬೇಕು. ಅದು ಮಾತ್ರ ಯಾರಿಗೂ ಬೇಡವಾದ ಜವಾಬ್ದಾರಿ, ಇರಲಿ !

ಅಂತೂ ಇಂತೂ ಗೌಡರಿಗೆ ಇಷ್ಟೆಲ್ಲ ಕೆಲಸ ಕೇವಲ ಐದು – ಒಂದು, ಎರಡು, ಮೂರು, ನಾಲ್ಕು, ಐದು– ಐದು ರೂಪಾಯಿಗಳಲ್ಲಿ ಆಗಬೇಕು. ಆಹಾ, ಎಂಥ ಪರೋಪಕಾರಿ ಬುದ್ಧಿ, ದಯಾರ್ದ್ರ ಹೃದಯ!

ಏನೆ ಅಂದರೂ ಅವರ ಪಾಲಿಗೆ ಅಗ್ಗದಲ್ಲಿ ಸಿಕ್ಕ ಆಳು ಗಂಗವ್ವ ನಿರ್ಭಾಗ್ಯೆ, ದರಿದ್ರೆ! ಪಾಪ, ಅವಳಿಗೆ ಅದೆ ದೊಡ್ಡ ಆಶ್ರಯ, ದೊಡ್ಡ ನೆರಳು!

ನಾವು ಕಂಡಂತೆ ಗಂಗವ್ವನ ಸಂಸಾರವೇನೂ ದೊಡ್ಡದಲ್ಲ. ಚಿಕ್ಕ ಬಾಳು, ಸಣ್ಣ ಬದುಕು– ಮೂರೇ ಮೂರು ಜನ. ಅವಳು, ಅವಳ ಗಂಡ, ಅವಳ ಮಗಳು– ಆ ಪುಟ್ಟ ಮಲ್ಲಿಗೆ ಅಷ್ಟೆ! ಹಿಂದೆಯಿಲ್ಲ, ಮುಂದೆಯಿಲ್ಲ. ಅದೆ ಅವಳ ಬಂಧು ಬಳಗ. ಅದೆ ಅವಳ ನೆರೆಹೊರೆ. ಅದನ್ನುಳಿದು ಅವಳ ಭಾಗಕ್ಕೆ ಉಳಿದ ಬಂಧು ಬಳಗವಿಲ್ಲ. ಇನ್ನಿತರ

ನೆರೆಹೊರೆಯಿಲ್ಲ. ಅವಳ ಮೋಕ್ಷ, ಗತಿಮತಿ, ಎಲ್ಲವೂ ಅದೇ!

ಗಂಗವ್ವನ ಗಂಡ ಹೆಸರಿಗೇನೊ ರಾಮಚಂದ್ರಪ್ಪ. ಅಷ್ಟೆ! ಇನ್ನೇನೂ ಇಲ್ಲ. ಅವನನ್ನು ಕಂಡರೇ ಸಾಕು, ಗಂಗವ್ವನ ಜೀವ ತಣ್ಣಗಾಗಿ ಹೋಗುವುದು. ಅಷ್ಟು ಭಯ, ಅಷ್ಟು ಭೀತಿ ಆ ವ್ಯಕ್ತಿಯೆಂದರೆ! ಪಾಪ, ಇರದೇನು ಮಾಡೀತು ? ಆತ ಎಷ್ಟಾದರೂ ಗಂಡಸಲ್ಲವೆ? ಏನು ಹೇಳಬೇಕು ಆ ಕಲಿ ಭೀಮನನ್ನು ಕುರಿತು? ಅವನ ಪೌರುಷ ಎಲ್ಲರಿಗೂ ತಿಳಿದದ್ದೇ! ಕೈಲಾಗದ ಅಬಲೆ, ಒಬ್ಬ ಯಃಕಶ್ಚಿತ ಹೆಂಗಸು, ತಿಂಗಳಿಗೆ ಐದು ರೂಪಾಯಿ ಸಂಪಾದಿಸಿ ತರಬೇಕು. ಸಂಸಾರದ ಅನುವು ಆಪತ್ತು ನೋಡಬೇಕು. ಅಂತೂ ಎಂತೋ ಏನೋ ಅವಳು ಇವನ ಜೀವನದ ರಥ ಎಳೆಯಬೇಕು. ಈ ಪ್ರಾಣಿ, ಗಂಡನಾದ ಮನುಷ್ಯ ಯಾವುದೊಂದಕ್ಕೂ ಕಿವಿಸೋಲದೆ ಕೂಸುಮರಿಯಂತೆ ನಿಶ್ಚಿಂತವಾಗಿ ಉಂಡಲೆಯಬೇಕು. ಅಯ್ಯೋ, ಎಂಥ ನ್ಯಾಯ!

ಗಂಗವ್ವ ಇನ್ನೂ ಚುಮುಚುಮು ಎಂದು ನಸುಕು ಹರಿಯವಾಗಲೆ ಎದ್ದು ಮನೆಯಲ್ಲಿ ಊಟ ಉಡಿಗೆ ಮುಗಿಸಿಕೊಂಡು ಗೌಡರ ಮನೆಯ ಗಾಣದಲ್ಲಿ ಗಾಣದೆತ್ತಿನಂತೆ ಬೆಳಗಿನಿಂದ ಸಂಜೆಯವರೆಗೆ ತನ್ನ ದಳಿತ ದೇಹವನ್ನು ಒಂದೇ ಸವನೆ ಗಂಧದಂತೆ ನುಣ್ಣಗೆ ತೆಯ್ಯಬೇಕು. ಹೀಗೆ ಹಗಲೆಲ್ಲ ಹೊರಗಡೆ ಮೈಣಿದ ದುಡಿದು. ಸೋತು ಸೋತು ಸಾಕು ಬೇಕಾಗಿ ಮನೆಗೆ ಬರಬೇಕಾದರೆ, ಅದೂ ಅಂಜಿಕೊಂಡು ಅಂಗೈಯಲ್ಲಿ ಜೀವ ಹಿಡಿದು ಬರಬೇಕು. ಇದರೊಳಗೇನಾದರೂ ಸ್ವಲ್ಪ ಹೆಚ್ಚು ಕಡಿಮೆಯಾಯಿತೆಂದರೆ ಕತೆ ಮುಗಿಯಿತು. ದಣಿವಿಗೆ ಪೆಟ್ಟಿನ ಮದ್ದು ಸಿದ್ಧವೇ. ಉಡುಗಿದ ದೇಹ ಮತ್ತೆ ಉತ್ತವಾಗಬೇಕು.

ಪಾಪ, ಎರಡು ಮನೆಗಳಲ್ಲಿ ಅವಳು ನಾಲ್ಕು ಕೈಕಟ್ಟಿಕೊಂಡು ಕೆಲಸ ಮಾಡಬೇಕು. ರಾತ್ರಿ ಮಲಗಬೇಕಾದರೆ ಹನ್ನೊಂದೊ, ಹನ್ನೆರಡೊ, ಅದಕ್ಕಿಂತ ಕಡಿಮೆ ಎಂದಿಗೂ ಇಲ್ಲ. ಆ ವೇಳೆಗಾಗಲೇ ಅವಳಿಗೆ ತೇಲುಗಣ್ಣು, ಮೇಲುಗಣ್ಣು. ದಣಿದ ದೇಹಕ್ಕೂ ನಿದ್ದೆಗೂ ಹೊಂದಿಕೆ ಬಹಳ ಬೇಗ. ಆಗ ಅವಳಿಗೆ ಹಾಸಿಕೊಳ್ಳುವುದೂ ಬೇಡ, ಹೊದ್ದುಕೊಳ್ಳುವುದೂ ಬೇಡ. "ದೇವರೇ, ಅಂಗೈ ಅಗಲ ನೆಲ ಸಿಕ್ಕರೆ ಸಾಕು" ಎಂದು ಅವಳು ಸ್ಥಳ ಸಿಕ್ಕಲ್ಲಿ ಎಲ್ಲಿಯಾದರೂ ಒಂದು ಮೂಲೆಯಲ್ಲಿ ಮುದುಡಿಕೊಂಡು ಬಿಡುವಳು. ಇದು ಅವಳ ನಿತ್ಯದ ದಿನಚರಿ. ಅನುದಿನದ ಹಾಡು.

ರಾಮಚಂದ್ರಪ್ಪ ಎಂಬ ಹೆಸರು ಕಿವಿಗೆ ಬಿದ್ದರೂ ಸಾಕು. ಗಂಗವ್ವ ಈಗಲೂ ಥರಥರನೆ ನಡುಗಿಬಿಡುವಳು. ಅಷ್ಟು ಕಂಪನ ಅವಳಿಗೆ ಆ ಹೆಸರಿನಲ್ಲಿ ! ಕೈಹಿಡಿದ ಗಂಡ ಕೋಪಗೊಂಡು ಯಮನ ಅವತಾರ ತಾಳಿದರೆ ಹೆಂಡತಿಯಾದವಳಿಗೆ ಯಾವ ಹಾದಿ? ಅವಳ ಕಣ್ಣೀರಿಗೆ ಯಾವ ಸಮುದ್ರ ತೆರವು ಮಾಡಬೇಕು? ಗಂಡನ ಪೀಡನೆಯಿಂದ ಗಂಗವ್ವನಿಗೆ ಪ್ರತಿದಿನವೂ ಗೋಳಿನ ಕೂಳು. ಅಂತೂ ಅವಳ ತಲೆನೋವಿನ ತಾಪಕ್ಕೆ

ಕಣ್ಣೀರಿನ ಪಟ್ಟಿ ಕೊನೆಗೂ ತಪ್ಪಲಿಲ್ಲ. ಅಂಥ ಉಗ್ರ ವ್ಯಕ್ತಿ ಅದು. ನೆನೆದರೆಯೆ ಮೈ ಜುಮ್ಮೆನ್ನುತ್ತದೆ. ಇನ್ನು ಅಂಥ ಪುಣ್ಯಾತ್ಮನ ಕೈಹಿಡಿದು ಗಂಗವ್ವ ಎಂಥ ಸೌಭಾಗ್ಯ ಸಂಪತ್ತು ಕಂಡಿರಬೇಕು?

೨

ಅವನೇನೋ ಮೊದಲಿಗೆ ಹಾಗಿರಲಿಲ್ಲವೆಂದು ಜನರು ಆಡಿಕೊಳ್ಳುತ್ತಾರೆ. ಇದ್ದನೋ ಬಿಟ್ಟನೋ ಅದೆಲ್ಲಾ ನಮಗೇನು ಗೊತ್ತು? ಗಂಗವ್ವನ ಬಾಯಿಂದ ಮಾತ್ರ ಆ ಸಂಬಂಧವಾಗಿ ಇಂದಿಗೂ ಒಂದು ಚಕಾರ ಶಬ್ದ ಹೊರಗೆ ಬಂದಿಲ್ಲ. ಅದನ್ನು ನಮ್ಮ ಊರಿನ ಮಂದಿಯೆಲ್ಲಾ ಬಲ್ಲರು.

ಗಂಗವ್ವನಿಗೆ ತನ್ನ ಕೆಲಸದಲ್ಲಿ ವಿರಾಮ ಸಿಕ್ಕುವುದೇ ಇಲ್ಲ. ಆ 'ವಿರಾಮ' ಎಂಬ ಶಬ್ದವೇ ಅವಳಿಗೆ ವಿಲಕ್ಷಣವಾಗಿ ತೋರುತ್ತಿರಬೇಕು. ಏನೊ ಅಪ್ಪಿತಪ್ಪಿ ಸಿಕ್ಕರೆ ಅದೂ ಎಂದೋ ಏನೋ ಅಂತೂ ದುರ್ಲಭ, ಅಪರೂಪ ಎಂದಿಟ್ಟುಕೊಳ್ಳಬಹುದು.

ಎಂದಾದರೂ ಸಿಕ್ಕುವ ಆ ಅಲ್ಪ ವಿಶ್ರಾಂತಿ ಕಾಲದಲ್ಲಿಯೂ ಅವಳ ಮನಸ್ಸು ವಿರಾಮಗೊಳ್ಳುನುದಿಲ್ಲ. ಸಮಾಧಾನ ಪಡೆಯುವುದಿಲ್ಲ. ಹೋಗಲಿ, ಆ ವೇಳೆಯಲ್ಲಿ ಅವಳಿಗೆ ಹೆಚ್ಚಿನ ಪ್ರಸನ್ನತೆ, ಚಿತ್ತಶಾಂತಿ ದೊರೆಯುವುದು ಬೇಡ. ಇದ್ದ ನೆಮ್ಮದಿ ಉಳಿದರಾಯಿತು. ಅವಳಿಗಿನ್ನೇನೂ ಬೇಡ. ಆದರೆ ಎಂಥ ವಿಧಿ ಸಂಕೇತ! ಉಲ್ಲಾಸಗೊಳ್ಳುವುದಕ್ಕೆ ಬದಲಾಗಿ ಅವಳ ಮನಸ್ಸು ಇನ್ನೂ ಹೆಚ್ಚಿನ ಉದ್ವೇಗಕ್ಕೆ ಒಳಗಾಗವುದು. ಆ ವಿರಾಮದ ವೇಳೆಯಲ್ಲಿ ಅವಳಿಗಿರುವ ಅಲ್ಪಸ್ವಲ್ಪ ಸುಖ ಶಾಂತಿಯೂ ಕೊಚ್ಚಿಹೋಗುವುದು. ಅವಳಿಗೆ ತನ್ನ ಜೀವನದಲ್ಲಿ ಹಿಂದಿನ ಕಥೆಯೆಲ್ಲವೂ ಆಗ ಜ್ಞಾಪಕಕ್ಕೆ ಬಂದು ಅವಳ ಮನಸ್ಸು ತಳಮಳಿಸಿ ಹೋಗುವುದು. ಈ ಹಾಳು ಬಿಡುವೇಕೆ ಸಿಗಬೇಕು, ದೇವರೆ' ಎಂದು ಅವಳು ಆ ಸಂಕಟದ ವೇಳೆಯಲ್ಲಿ ಕೂಗಿಕೊಳ್ಳುವಳು. ಮರುಕ್ಷಣ ಪುನಃ ಯೋಚಿಸುವಳು ವಿರಾಮ ಸಿಕ್ಕರೆ ಸಿಗಲಿ. ಆದರೆ ಹಾಳಾದ ನೆನಪು ಏತಕ್ಕೆ ಬರಬೇಕು ? ತನ್ನನ್ನೇಕೆ ಹೀಗೆ ಚುಚ್ಚಿ ಕೆಣಕಬೇಕು? ಎಂದು ಆಕೆ ತನ್ನನ್ನೇ ಕೇಳಿಕೊಳ್ಳುವಳು. ಆ ದೇವರಿಗೂ ಅದೇ ಪ್ರಶ್ನೆಯನ್ನೇ ಹಾಕುವಳು. ಎಂಥ ಮುಗ್ಧ ಹೆಣ್ಣು ಆಕೆ ! ಎಷ್ಟು ಕೇಳಿದರೇನು? ಅವಳಿಗೆ ಉತ್ತರ, ಪ್ರತ್ಯುತ್ತರ ದೊರೆಯಬಹುದೆ ? ಅದು ಸಾಧ್ಯವೆ ?

ಇತ್ತಿತ್ತಲಾಗಿಯಂತೂ ಗಂಗವ್ವನಿಗೆ ಗಂಡನ ದರ್ಶನವೆ ಅಪರೂಪ. ಎಂದಾದರೂ ಆದರೆ ಅದೂ ಹೊಡೆತದ ರೂಪದಲ್ಲಿ. ಒದೆತದ ರೂಪದಲ್ಲಿ, ಹಿಂಸೆಯ ರೂಪದಲ್ಲಿ. ಅವಳ ಜೀವ ನವೆದು ಹೋಗಿದೆ; ಸಣ್ಣಾಗಿ ಹೋಗಿದೆ. ಗಂಡ ಕೊಡುವ ಜೀವ ಹಿಂಸೆ ಆ ದೇವರಿಗೆ ಗೊತ್ತು. ಗಂಗವ್ವನಂತೂ ಆ ಸುದ್ದಿಯನ್ನು ಬಾಯಿ ಬಿಡುವವಳಲ್ಲ. ಬಂದದ್ದನ್ನೆಲ್ಲ ನುಂಗಿಕೊಳ್ಳುವ ಜೀವ ಅದು. ಅವಳನ್ನು ನೋಡಿದವರಿಗೆಲ್ಲ ಆ ನೋವು, ಆ ವೇದನೆ

ಅನುಭವಕ್ಕೆ ಬಂದುಹೋಗಿದೆ.

ಆಕೆ ಮದುವೆಯಾದ ಮೂರು ವರುಷಗಳನ್ನು ಹೇಗೆ ಕಳೆದಳು? ಅದನ್ನು ಈಗ ಸತ್ಯವೆಂದು ನಂಬುವುದು ಕೂಡ ಸಾಧ್ಯವಿಲ್ಲ. ಅವಳಿಗೆ, ನಾಲ್ಕು ಮಂದಿಯಂತೆ ತಾನೂ ತನ್ನ ಹೊಲಮನೆ ಬದುಕನ್ನು ಮಾಡಿಕೊಂಡು ಉಂಡುಟ್ಟು ಸುಖದಿಂದ ಮೆರೆದ ಆ ದಿವಸ. ರಾಮಚಂದ್ರಪ್ಪ ಬೆವರು ಚೆಲ್ಲಿ ಹೊಲಮನೆ ಗೆಯ್ದುಕೊಂಡು ಬಂದು ನಾಲ್ಕು ಜನರ ಕಣ್ಣಿನಲ್ಲಿ ಗೃಹಸ್ಥನಾಗಿ ಗಣ್ಯನಾಗಿ ಕಾಣುತ್ತಿದ್ದ ಆ ದಿವಸ. ಹಾ, ಎಂಥ ಕಾಲ ಅದು! ಗಂಗವ್ವನ ಮನೆ ಏಳು ಬಣ್ಣಗಳಿಂದ ಹೊಳೆಯುತ್ತಿತ್ತು, ಥಳಥಳಿಸುತ್ತಿತ್ತು. ಛೆ, ಅದೇನು ಕನಸೇ!

ಹೊಲವನ್ನು ಗೆಯ್ಯುತ್ತಿದ್ದ ಗಂಡನಿಗೆ ಸಮಯಕ್ಕೆ ಒದಗುವಂತೆ ಅಡಿಗೆಯನ್ನು ಮಾಡಿಕೊಂಡು ರೊಟ್ಟಿ ಬುತ್ತಿಯ ಗಂಟನ್ನು ಕೊಟ್ಟುಬರುವ ತನ್ನ ಬದುಕಿನ ಗತವೈಭವದ ಸ್ಮರಣೆಯಾದಾಗಲೆಲ್ಲ ಅವಳ ಕಣ್ಣುಗಳಿಂದ ಅಶ್ರುಗಳು ತಾವಾಗಿಯೆ ತುಂಬಿ ಬಂದು ಹೊರಚೆಲ್ಲುವವು. ತನ್ನ ಮನೆಯಲ್ಲಿ ತಾನು ಮನೆಯೊಡತಿಯಾಗಿ ಕೂಲಿ ಕುಂಬಳಿ ಜನರಿಗೆ ಪಡಿಯನ್ನು ಅಳೆದುಕೊಡುವ ಆ ದಿನಗಳನ್ನು ಪರರ ಚಾಕರಿಯ ಇಂದಿನ ದಿನಗಳಿಗೆ ಹೋಲಿಸಿಕೊಂಡು ನೋಡಿದಾಗ ಗಂಗವ್ವನ ಎದೆಗೆ ಸಿಡಿಲೆರಗಿದಂತಾಗುವುದು. ಆಗ ಅವಳಿಗೆ ಬಂದ ದುಃಖವನ್ನು ತಡೆಯಲಾಗುವುದಿಲ್ಲ. ಎಷ್ಟಾದರೂ ಹೆಣ್ಣು ಕರುಳು. ಗೊಳೊ ಎಂದು ಗಟ್ಟಿಯಾಗಿ ಅತ್ತುಬಿಡುವಳು. ಹೂವ್ವಿನಂಥ ಅವಳ ಮೃದು ಹೃದಯಕ್ಕೆ ಬರೆಯೆಳೆದಂತಾಗುವುದು. ಸುಖವುಂಡ ಎದೆ ದುಃಖಕ್ಕೆ ಆಳಲ್ಲ, ಸಾಕು, ಎಲ್ಲಿಯವರೆಗಿದು ಭಗವಂತಾ!

ಗಂಡ ಕುಡಿದು ಬಂದು ಸಿಟ್ಟಿಗೆದ್ದು ತನ್ನನ್ನು ಹೊಡೆದು ಹೊರದೂಡುತ್ತಿರುವಾಗಲೆಲ್ಲ ಗಂಗವ್ವ ಆ ಹಿಂದಿನ ದಿನಗಳನ್ನು ನೆನೆಸಿಕೊಳ್ಳುವಳು. ಅವಳ ದುಃಖ ನೋವು, ಬಳಲಿಕೆಗಳಿಗೆಲ್ಲ ಅದೊಂದೆ ಔಷಧಿ. ಅದನ್ನುಳಿದು ಬೇರೆ ಯಾವ ಅನುಪಾನ ಬರಬೇಕು., ಆ ಬಡಪಾಯಿಗೆ? ಹಿಂದೆ ಇದೇ ಈ ಕಾಲಕ್ಕೆ ಜೋಳದ ಹೊಲ 'ಕೊಯ್ಲಿ'ಗೆ ಬಂದಾಗ ಗಂಡನೂ ತಾನೂ ಗಾಡಿಯಲ್ಲಿ ಚೆಕ್ಕಂದವಾಗಿ ಇಬ್ಬರೆ ಇಬ್ಬರು ಕುಳಿತುಕೊಂಡು ಹೊಲಕ್ಕೆ ಹೋದ ಸುಖದ ಕೊನೆಯ ದಿನಗಳನ್ನು ಅವಳು ಖಂಡಿತ ಮರೆಯಲು ಸಾಧ್ಯವಿಲ್ಲ. ಆ ಸೊಬಗಿನ ದಿನ ಮತ್ತೆ ಬರಲಾರವೆ ಎಂದು ಅವಳು ತನ್ನಷ್ಟಕ್ಕೆ ಧ್ಯಾನಿಸುವಳು. ಎಣಿಕೆ ಹಾಕುವಳು.

ಅಲ್ಲ, ಗೌಡರೂ ಅವರ ಹೆಂಡತಿ ಇಂದಿರಮ್ಮನವರೂ ಈ ವಯಸ್ಸಿನಲ್ಲಿ ಕೂಡ ಎಷ್ಟೊಂದು ಆನಂದದಿಂದ ಇದ್ದಾರೆ. ಒಬ್ಬರೊಬ್ಬರ ಪ್ರೇಮ, ಸ್ನೇಹ, ಮಮತೆ, ಕಕ್ಕುಲತೆಯನ್ನು ಕಂಡರೆ ಹೊಟ್ಟೆ ತುಂಬಿ ಹೋಗುವುದು. ಅವರ ಬಾಳುವೆಯನ್ನು ಕಂಡು

ಗಂಗವ್ವ ಹೆಚ್ಚಾಗಿ ಆನಂದಿಸುತ್ತಿದ್ದರೂ ಆಗಾಗ ಒಮ್ಮೊಮ್ಮೆ ಅಸೂಯೆ, ಹೊಟ್ಟೆಕಿಚ್ಚು ಪಡುತ್ತಿರುವುದೇನೂ ಸುಳ್ಳಲ್ಲ.

ತನ್ನ ಸ್ಥಿತಿಗೂ ಅವರ ಸ್ಥಿತಿಗೂ ನಡುವೆ ಇರುವ ಅಪರಂಪಾರವಾದ ಅಂತರವನ್ನು ಕಂಡು ಗಂಗವ್ವ ಮನಸ್ಸಿನಲ್ಲಿಯೇ ಕೊರಗುವಳು. ಆಹಾ. ಇನ್ನೂ ಮೊನ್ನೆ ಮೊನ್ನೆ ತಾನು ಹಿತ್ತಲಲ್ಲಿ ಬಟ್ಟೆ ಸೆಳೆಯಲು ಹೋಗುವಾಗ್ಗೆ ಗೌಡರು, ನಡುಮನೆಯಲ್ಲಿ, ಇಂದಿರಮ್ಮನವರ ತಲೆಯಲ್ಲಿ ಮಿಂಚಿದ ಒಂದೇ ಒಂದು ಬೆಳ್ಳಿಯ ಕೂದಲನ್ನು ಎಷ್ಟೊಂದು ಅನುಕಂಪದಿಂದ ಕಿತ್ತು ತೋರಿಸಿದರಲ್ಲ.

ಗಂಗವ್ವ ಹೀಗೆ ಉದ್ದಕ್ಕೂ ತನ್ನ ಜೀವನವನ್ನೂ, ಇಂದಿರಮ್ಮನವರ ಜೀವನವನ್ನೂ ಒರೆಹಚ್ಚಿ ನೋಡಿಕೊಳ್ಳುವಳು. ಅವರ ಜೀವನಕ್ಕೂ ತನ್ನ ಜೀವನಕ್ಕೂ ಎಲ್ಲಿಯೂ ಹೊಂದಿಕೆ ತೋರದಿದ್ದರೂ ಗಂಗವ್ವ, ಆಶಾವಾದಿ. ಅವಳೇನೂ ನಿರಾಸೆಗೊಂಡಿಲ್ಲ.

ತನ್ನ ಗಂಡ ಕುಡಿಯುವುದೊಂದನ್ನು ನಿಲ್ಲಿಸಿದರೆ ಸಾಕು. ಸುಖ ಅದರ ಹಿಂದೆ ತಾನಾಗಿಯೆ ಬರುವುದು. ನಮ್ಮ ನೆರಳು ನಮಗೆ ಹೊರತೆ? ಕೆರೆಗೆ ಕಟ್ಟೆ ಹಾಕುವುದೊಂದೆ ತಡ. ನೀರು ತುಂಬುವುದು ಯಾವ ಮಾತು? ಹೊಲಪಟ್ಟಿ ಹೋಗಿದ್ದರೇನಂತೆ ? ದುಡಿಯುವ ಗಂಡ ಕಳೆದುಕೊಂಡಿದ್ದಾನೆ, ಮತ್ತೆ ದುಡಿದು ಸಂಪಾದಿಸುತ್ತಾನೆ. ಇರಲಿಕ್ಕೆ ನೆರಳಾಗಿ ಮನೆಯಾದರೂ ಒಂದು ಇದೆಯಲ್ಲ ಎಂದು ಗಂಗವ್ವ ತಾನೇ ಸಮಾಧಾನ ಹೇಳಿಕೊಳ್ಳುವಳು. ಧೈರ್ಯ ಮಾಡಿಕೊಳ್ಳುವಳು. ಎಂಥ ಕೆಚ್ಚು. ಅಂತೂ ಅವಳ ಆಶಾಸೂತ್ರ ಗಟ್ಟಿಯಾಗಿದೆ.

ತನ್ನ ಗಂಡ ತನ್ನವನಾಗಲಿ, ತನ್ನೊಡನೆ ಪ್ರೀತಿಯಿಂದ ನಡೆದುಕೊಳ್ಳಲಿ ಎಂದು ಆಕೆ ಹಗಲಿರುಳೂ ಹಂಬಲಿಸಿ ದೇವರನ್ನು–ಮನೆಯ ಮುಂದಿನ ಹನುಮಪ್ಪನನ್ನು ಬೇಡುವಳು. ಸಮಯ ನಿರೀಕ್ಷಿಸಿ ಗಂಡನನ್ನೂ ಪ್ರಾರ್ಥಿಸುವಳು. ಸಮಾಧಾನವಾಗಿ ಹೇಳಿ ನೋಡುವಳು. ಕೇಳದಿದ್ದರೆ ಮುನಿದಂತೆ ಇದ್ದು ಪರೀಕ್ಷೆ ಮಾಡುವಳು. ಅದಕ್ಕೂ ಮಣಿಯದಿದ್ದರೆ ಸಿಟ್ಟು ಮಾಡುವಳು., ಜಗಳವಾಡುವಳು. ಕೊನೆಗೆ ಸೋತು, ಯಾವುದೂ ಆಗದಿದ್ದರೆ, ನಿರುಪಾಯಳಾಗಿ ಕಣ್ಣೀರು ಸುರಿಸಿ ಗಳಗಳನೆ ಅತ್ತುಬಿಡುವಳು. ಪಾಪ, ಅವಳಿಗೆ ಅದನ್ನುಳಿದು ಬೇರೆ ಯಾವ ಮಾರ್ಗ?

ತನ್ನ ವಸ್ತು, ತನ್ನ ಸರ್ವಸ್ವ, ತನ್ನ ಸ್ವಾಮಿ, ತನ್ನ ಆರಾಧ್ಯದೇವತೆ ತನ್ನ ಕಣ್ಣೆದುರಿನಲ್ಲಿಯೆ ಹೀಗೆ ಇಚ್ಛಿಷ್ಟೆ ಇಚ್ಛಿಷ್ಟೆ ಅಧಃಪತನಕ್ಕಿಳಿಯುವುದನ್ನು ನೋಡಿಯೂ ಸಹಿಸುವುದೆಂದರೆ ಅವಳಿಂದ ಸರ್ವಥಾ ಸಾಧ್ಯವಿಲ್ಲ.

ಹೀಗಾಗಿ ಮನೆಯಲ್ಲಿ ನಿತ್ಯವೂ ರಣರಂಗವಾಗಬೇಕು. ಕುರುಕ್ಷೇತ್ರ ನಡೆಯಬೇಕು.

೩

ಆದರೆ ಇವೆಲ್ಲ ಯತ್ನಗಳಿಂದ ಯಾವ ಪ್ರಯೋಜನವೂ ತೋರಲಿಲ್ಲ. ಪ್ರಚಂಡ

ಗಾಳಿಗೆ ಸಣ್ಣ ಸೊಡರು ಯಾವ ಎದರು? ಎಂಥ ಅಪಹಾಸ್ಯ! ಬಡಿದು ಬಡಿದಂತೆ ಹಾವು ಹೆಡೆಯನ್ನು ಇನ್ನೂ ಮೇಲುಮೇಲಕ್ಕೆತ್ತುವುದೆ ವಿನಃ ಮುದುಡಿಕೊಳ್ಳುವ ಮಾತು ಖಂಡಿತ ಸುಳ್ಳು. ಹಾಗೆಯೆ ಆತನನ್ನು – ಆ ರಾಮಚಂದ್ರಪ್ಪನನ್ನು – ದಾರಿಗೆ ತರುವ ಪ್ರಯತ್ನ ಸನ್ನಾಹ ನಡೆದಂತೆ ಆ ಕುಡುಕನ ಅನೀತಿ ವ್ಯಾಪಾರ ನಿಲ್ಲಲಿಲ್ಲ, ಕಡಿಮೆಯಾಗಲಿಲ್ಲ. ಇನ್ನೂ ಹೆಚ್ಚಿತು. ಮತ್ತೂ ವಿಷವಾಯಿತು. ಒಟ್ಟಿನಲ್ಲಿ ಅನಾಗರಿಕ ಜೀವನ ಕೂಡ ಹೇಸುವಷ್ಟು ಅದು ಅಸಹ್ಯಕ್ಕಿಟ್ಟು ಹೋಯಿತು. ಅಯ್ಯೊ ಎಂಥ ರೌರವ!

ಆ ಉನ್ಮಾದವನ್ನು ಕಂಡು ಗಂಗವ್ವ ಹೆದರಿಕೊಂಡಳು. ಅಧೀರಳಾದಳು. ಅವಳ ಮೊದಲಿನ ಕೆಚ್ಚು, ಆಶಾವಾದ ಉಳಿಯಲಿಲ್ಲ. ಕುಂದಿಹೋದವು. ಅವಳಿಗೆ ಧೈರ್ಯ ತಂದುಕೊಳ್ಳುವ ದಾರಿಯೊಂದೂ ತೋರಲಿಲ್ಲ. ಧೈರ್ಯ ಆಸೆ ಹಿಡಿದುಕೊಂಡಿದ್ದ ಸ್ಥಳವನ್ನು ಕ್ರಮೇಣ ಅಂಜಿಕೆ ನಿರಾಸೆ ಆವರಿಸಿಕೊಂಡವು. ಇದೆಲ್ಲವನ್ನು ನೆನೆದು ಅವಳ ಪುಟ್ಟ ಎದೆ ಕಂಪಿಸಿ ಇನ್ನೂ ಚಿಕ್ಕದಾಯಿತು. ಆ ಕಂಪನದ ರಭಸಕ್ಕೆ ಸಿಕ್ಕು ಆಕೆ ಕಟ್ಟಿಕೊಂಡಿದ್ದ ಬಾಳಿನ ಕಲ್ಯಾಣಮಂಟಪ, ಅವಳ ಆಸೆಯ ಅಮೃತಮಹಲು ಕುಸಿದುಹೋಯಿತು. ಹಾ, ಹೀಗೆ ಹತ್ತಿರವಿದ್ದೂ ಅವರು ಒಬ್ಬರೊಬ್ಬರ ಪಾಲಿಗೆ ಇಲ್ಲವಾದರು. ದೂರದೂರವಾದರು.

ಹರಿದ ಎಳೆಯನ್ನೆಲ್ಲಿ ಹುಡುಕುವುದು ? ಗಂಟು ಹಾಕಿದ ದೊರೆಯೆ, ಭಗವಂತಾ, ಇದನ್ನೆಲ್ಲ ಮರೆತು, ಕಣ್ಣುಮುಚ್ಚಿ ಕುಳಿತಿರುವಿಯಾ? ಬಾ, ಸತ್ವವಿದ್ದರೆ ತೋರಿಸು ನಿನ್ನ ಮಹಿಮೆಯನ್ನು.

ಕೈಬಿಟ್ಟು ಹೊರಟ ಗಂಡನನ್ನು ಕೈಹಿಡಿದು ನಡದ ಗಂಗವ್ವನಿಗೆ ಆತನನ್ನು ಪುನಃ ಮನುಷ್ಯನನ್ನಾಗಿ ಹೇಗೆ ಮಾಡಬೇಕು ಎಂಬ ವಿಚಾರದ ಲ್ಲಿ ನಿದ್ದೆಯೆ ಬಾರದು. ಕಣ್ಣೀರ ಹಸಿಗೆ ತೋಳ ಕುಪ್ಪಸ ನೆನೆದು ನೆಲ ದಿನ ದಿನವೂ ಹಸಿಯಾಗುವುದು. ಗಂಗವ್ವ ನೀರವವಾಗಿ ಬಿಕ್ಕುವಳು. ಅವಳ ಕೂಗು ಎಷ್ಟಾದರೂ ಅರಣ್ಯರೋದನ, ಯಾರು ಕೇಳಬೇಕು ಅವಳ ಕೀಳು ರಾಮಾಯಣದ ಕಥೆ? ಕ್ಷುದ್ರರ ನುಡಿಯನ್ನು ಕೇಳಲೂ ಕಿವಿ ಬೇಕೆ ? ನಡೆಯಲಿ, ಅವರ ಭಾಗ್ಯ ಅವರ ಪಾಲಿಗೆ, ಯಾರಿಗೆ ಯಾರೂ ಇಲ್ಲ.

ಗಂಗವ್ವನ ಮಗಳು ಪುಟ್ಟ ಮಲ್ಲಿಗೆಯಂತೂ ಒಂದು ನಿರ್ಜೀವ ಜಂತು. ಏಳು ವರುಷ ಆಗಿಹೋಗಿದ್ದರೂ ಎದ್ದಾಡುವ ಚೈತನ್ಯವಿಲ್ಲ. ಏನೋ ಜೀವವಿದೆ ಎಂಬುದಕ್ಕೆ ಅವಳ ಕಣ್ಣುಗಳೆ ಸಾಕ್ಷಿ. ಬೇರೆ ಮತ್ತೇನೂ ಕೇಳಬಾರದು. ಆ ಹೆದರಿದ ಕಣ್ಣು, ಹೆದರಿಕೊಂಡು, ಮನೆಯಲ್ಲಿ ನಡೆಯುವ ದುರಂತ ನಾಟಕವನ್ನು ಸುಮ್ಮನೆ ನೋಡುತ್ತಿರುತ್ತವೆ. ಅವಳಿಗೆ ಹಸಿವೆ ನೀರಡಿಕೆ ಯಾವುದರ ಪರಿವೆಯೆ ಇಲ್ಲ. ಅವರಾಗಿ ತಿಳಿದುಕೊಟ್ಟರೆ ತಿನ್ನುವುದು. ಇಲ್ಲವಾದರೆ ಇಲ್ಲ. ಕೇಳುವುದನ್ನಂತೂ ಅವಳು ಕಲಿತೇ ಇಲ್ಲ. ಅವಳಿಗೆ ತಾಯಿ ತಂದೆಯಿದ್ದರೂ ಆಕೆ ತಬ್ಬಲಿ ಮಗುವಿನಂತೆ ಮೂಕವಾಗಿರುವಳು. ಅತ್ತದ್ದೂ ಇಲ್ಲ.

ನಕ್ಕಮ್ಮೊ ಇಲ್ಲ. ಸರಿ, ಅವಳು ಗಂಗವ್ವನ ಮಗಳು, ಯಥಾರ್ಥ. ಅನುಮಾನ ಲವಲೇಶ ಕೂಡ ಇಲ್ಲ.

ಆ ನೋವಿನ ಮೂರ್ತಿ ಗಂಗವ್ವನ ಮುದ್ದಿನ ಮಗಳು ಯೋಗ್ಯ ಚಿಕಿತ್ಸೆ ಔಷಧೋಪಚಾರಗಳಿಲ್ಲದೆ ಸರಿಯಾದ ಅನ್ನಪಾನ ದೊರೆಯದೆ ಆ ಅವತಾರ ತಾಳಿರುವಳು. ಇರುವ ಒಬ್ಬಳೆ ಮಗಳನ್ನು ಉಪಚರಿಸಲು ಆಗದೆ ಹೋಯಿತಲ್ಲ ಎಂದು ಗಂಗವ್ವನಿಗೆ ಹಗಲಿರುಳು ವ್ಯಥೆ. ತನ್ನ ಮಗಳು ದಿನದಿನವೂ ಕೊರಗಿ ಹೋಗುವುದನ್ನು ತಾಯಿಯಾದವಳು ಯಾವ ಕಣ್ಣಿನಿಂದ ನೋಡಬೇಕು? ಮಕ್ಕಳಿಂದ ಜೀವನ ಸಾರ್ಥಕ, ನಿಜ. ಆದರೆ ಹೊಟ್ಟೆಯ ಹೋರಾಟದಲ್ಲಿ ಮಕ್ಕಳ ಆರೈಕೆಗೆ ಸ್ಥಳವೆಲ್ಲಿ? ಬಾಲ್ಯದಿಂದಲೂ ಆ ಪುಟ್ಟ ಮಗು ತಾಯತೋಳನ್ನಗಲಿ ಮೂಲೆ ಹಿಡಿದು ಕುಳಿತಿದೆ. ಮೂಲೆ ಗುಂಪಾಗಿದೆ. ಅದಕ್ಕೆಲ್ಲ ಕಾರಣ ಯಾರು? ಗಂಗವ್ವನೆ, ಹೊಟ್ಟೆಯೆ, ಅನ್ನವೆ ?

ರಾಮಂಚದ್ರಪ್ಪನಿಗೆ ಇದೆಂದೂ ಗಮನದಲ್ಲಿಲ್ಲ. ಕುಡಿಯುವುದಕ್ಕೆ ಹಣವನ್ನು ಎಲ್ಲಿ ದೊರಕಿಸಬೇಕು ಎಂಬುದೊಂದೇ ಅವನ ಯೋಚನೆ. ಅದರ ಹೊರತು ಅವನು ಯಾವ ಯೋಚನೆ ಮಾಡುವುದು ಇಲ್ಲ. ಹೊಲ ಹೋಯಿತು. ಇನ್ನು ಉಳಿದಿರುವುದು ಮನೆ ಮಾತ್ರ. ಅದೂ ಒತ್ತೆಯಾಯಿತೆಂದು ಸುದ್ದಿ. ಎಲ್ಲವನ್ನೂ ಪೀಪಾಯಿಗೆ ಸುರಿದು ಬಂದದ್ದಾಯಿತು. ಆದರೆ ಎಷ್ಟು ಸುರಿದರೂ ತುಂಬದ ಕಣಜ ಅದು.

ಇನ್ನು ಮುಂದಿನ ಯೋಚನೆಯೇನು ? ದಾರಿ ಯಾವುದೂ ಕಾಣದು. ಆತ್ಮಕ್ಕೆ ಮಾತ್ರ ಇನ್ನೂ ಶಾಂತಿಯಿಲ್ಲ. ಹಸಿವೆ, ದಾಹ, ಬ್ರಹ್ಮಾನಂದದಲ್ಲಿ ಇಹವನ್ನೂ ಪರವನ್ನೂ ತೇಲಿಸಿ ಮೆರೆಸುವ ಮನುಷ್ಯಸೃಷ್ಟಿಯ ಅಮೃತ! ಅಯ್ಯೋ ಶೆರೆ ಎಷ್ಟು ಕುಡಿದರೂ ತೃಪ್ತಿಯಿಲ್ಲ. ರಾಮಚಂದ್ರಪ್ಪನಿಗೆ. ಬೇಕು, ಕಂಠಪೂರ್ತಿ ಬೇಕು. ಹುಳಿ ವಾಸನೆ ನಾಲಗೆಗೆ ನಿಲುಕುವಂತೆ ಬೇಕು.

ದಾರಿ ಅವನಿಗೆ ನಿಶ್ಚಯಕ್ಕೂ ಸಿಕ್ಕಿರಬೇಕು. ಕಣ್ಣು ಹಿಗ್ಗಿ,ಸಿ ಅವನು ಅದನ್ನು ಗೊತ್ತುಹಚ್ಚಿರಬೇಕು. ಅದೇ ಸರಿ. ಅವನ ಕಣ್ಣುಗಳಂತೂ ನೋಡುವುದಕ್ಕೆ ಭಯಾನಕವಾಗಿದ್ದವು. ಬೀಭತ್ಸವಾಗಿದ್ದವು. ಅವುಗಳನ್ನು ನೋಡಲು ಪುಣ್ಯಕ್ಕೆ ಗಂಗವ್ವ ಮಾತ್ರ ಎಚ್ಚರವಾಗಿರಲಿಲ್ಲ. ಮಲ್ಲಿಗೆಯನ್ನು ಎದೆಗವಚಿಕೊಂಡು ಅವಳು ಅದೆ ಜೊಂಪಿಸುತ್ತಿದ್ದಳು.

ಏನು ಸುಖ! ಗಂಡ ಯಾವುದೋ ಒಂದು ಚಿನ್ನದ ಹಾರ ಮಾಡಿಸಿ ತಂದು ಕೊರಳಿಗೆ ಹಾಕುತ್ತಿದ್ದ ಹಾಗೆ ಕನಸು ಅವಳಿಗೆ. ಓ, ತನ್ನ ಗಂಡ ತನ್ನ ಮೇಲೆ ಎಷ್ಟು ಪ್ರೀತಿ! ಛೇ, ಇಲ್ಲದೆ ಉಂಟೆ ? ಎಷ್ಟಾದರೂ ಕೈ ಹಿಡಿದ ಹೆಂಡತಿ. ಹಾರ ನೋಡಿಕೊಳ್ಳುವ ಆತುರಕ್ಕೆ ಬಿದ್ದು ನಿದ್ದೆಯ ಅಮಲಿನಲ್ಲಿಯೇ ಅವಳು ಕೈಯನ್ನು ಎದೆಯ ಮೇಲಕ್ಕೆ ಓಡಿಸಿದಳು.

ಕನಸು ಸತ್ಯವೆಂದೆ ಅವಳ ಭಾವನೆ.

ಆ ಹೊತ್ತಿಗೆ ರಾಮಚಂದ್ರಪ್ಪನ ರಕ್ತದೃಷ್ಟಿ ಅವಳ ಕೊರಳಲ್ಲಿ ಮಿನುಗುತ್ತಿದ್ದ ಸೌಭಾಗ್ಯ ಚಿಹ್ನೆ, ಪರಮ ಪವಿತ್ರ ಮಂಗಲಸೂತ್ರದ ಮೇಲೆ ತನ್ನ ವಕ್ರ ಪ್ರಕಾಶವನ್ನು ಬೀರಿತ್ತು. ಆ ಗಳಿಗೆಯಲ್ಲಿ ಅದರ ವಿನಃ ಅವನಿಗೆ ಯಾವುದೇನೂ ಕಾಣಲಿಲ್ಲ. ಅವನಿಗೆ ಬೇಕಾದುದು ಅವನ ಹಾಳು ಲಾಲಸೆಗೆ ಸಾಕಾದುದು ಅದೊಂದು ಮಾತ್ರ. ಹೆಂಡತಿಯ ಮಾಂಗಲ್ಯ, ಅದೇನು ಮಹಾ ! ಉನ್ಮತ್ತನಾಗಿ ಧಾವಿಸಿ ಬಂದು ಅವನು ತನ್ನ ಉನ್ಮತ್ತ ಕೈಗಳನ್ನು ಮುಂದಕ್ಕೆ ನೀಡಿ ಅದನ್ನು ಕಿತ್ತಿಕೊಂಡುಬಿಟ್ಟ. ಆಗಬಾರದ ಅನುಚಿತ ಆಗಿಹೋಯಿತು.

ಗಂಗವ್ವ ಕೊಡವಿಕೊಂಡು ಹೌಹಾರಿ ಎದ್ದಳು. ಅಷ್ಟರಲ್ಲಿ ಅವನು ಮರೆಯಾಗಿದ್ದ. ಮನೆಯಿಂದ ಪರಾರಿಯಾಗಿದ್ದ. ಅವಳ ಕಾಲಿನ ಒಜ್ಜೆ ತಾಳುವುದಾಗದೆ ಪುಟ್ಟಮಲ್ಲಿಗೆಯ ಎಡದ ಕಾಲು ಮುರಿದು ಹೋಗಿತ್ತು. ಗಂಗವ್ವ ಹಾಡಿಹಾಡಿಕೊಂಡು ಅತ್ತಳು– ಬೋರಾಡಿ ಕರೆದಳು. ಯಾರೂ ಬರಲಿಲ್ಲ, ಯಾಕೆ ಅನ್ನಲಿಲ್ಲ. ಪರಮಾತ್ಮಾ, ಪಾಪಿ ಪರದೇಶಿಗಳಿಗೆ ನೀನಲ್ಲದೆ ಗತಿಯಾರು? ಎಂದು ಆಕೆ ಒರಲಿದಳು. ಓಯೆನ್ನಬಾರದೆ/ ಛೀ, ಅವನೆಂಥ ಕಿವುಡ!

೪

ಮಗುವಿನ ಕಾಲು ಮುರಿಯಿತು. ವಾಸಿ ಮಾಡುವುದು ಹೇಗೆ ? ಕೈಯಲ್ಲಿ ನೋಡಿದರೆ ಒಂದು ಕಾಸೂ ಇಲ್ಲ. ತಿಂಗಳ ಹಣದಲ್ಲಿ ಆಗಲೇ ಎರಡು ರೂಪಾಯಿ ಬಳಸಿದುದಾಗಿದೆ. ತಿಂಗಳು ಮುಗಿಯಬೇಕಾದರೆ ಇನ್ನೂ ಹತ್ತು ದಿವಸ. ಅಲ್ಲಿವರೆಗೆ ಆ ಉಳಿದ ಹಣ ಸಿಕ್ಕುವಂತಿಲ್ಲ ಮುಂದೆ ಗತಿ? ಇದಂತೂ ಅಲಕ್ಷ್ಯ ಮಾಡಿ ಬಿಡುವ ಮಾತಲ್ಲ, ಮುಂದೆ ಆಗಿಹೋಗುವ ಹೆಣ್ಣು– ಹೀಗೆ ಮುಂತಾಗಿ ಗಂಗವ್ವನ ಯೋಚನೆ, ಬಹಳ ದೂರ!

ಗೌಡರ ಮನೆಗೆ ಹೋಗಿ ಆಕೆ ಇಂದಿರಮ್ಮನವರ ಕೈಕಾಲು ಹಿಡಿದುಕೊಂಡಳು. ತನ್ನ ದುಃಖವನ್ನೆಲ್ಲ ತೋಡಿಕೊಂಡು, 'ಅಮ್ಮಾ? ನನ್ನ ಹಣೆಬರಹ' ಎಂದು ಕಣ್ಣೀರು ಕೋಡಿ ಹರಿಸಿದಳು. ಎಷ್ಟಾದರೂ ಇಂದಿರಮ್ಮನವರು ಹೆಣ್ಣುಜೀವ, ಆರು ಮಕ್ಕಳ ತಾಯಿ, ಗಂಗವ್ವನ ತಪ್ಪು ಅವರ ದೃಷ್ಟಿಯಿಂದ ನೂರಿದ್ದರೂ, ಇಂದಿರಮ್ಮನವರು ಪುಟ್ಟಮಲ್ಲಿಯ ಪಾಡು ಕೇಳಿ ಮರಮರನೆ ಮರುಗಿದರು ಗೌಡರಿಗೆ ಕಾಣದಂತೆ ಐದು ರೂಪಾಯಿ ತಂದು ಗಂಗವ್ವನ ಕೈಗಿತ್ತು 'ಒಳ್ಳೇದಾಗ್ತದೆ, ಹೋಗಿ ಬಾ' ಎಂದು ಹಸರಿ ಕಳಿಸಿದರು.

ಯೋಚಿಸಿದಂತೆ ಉಪಚಾರ ನಡೆಯಿತು. ದೇವರು ಇನ್ನೂ ಇದ್ದಾನೆ. ಭೂಪ ರಾಮಚಂದ್ರಪ್ಪ ಹೆಂಡತಿಯ ಯೋಗಕ್ಷೇಮ ನೋಡಲು ಮನೆಗೆ ಬಂದ, ಮೂರು ದಿನದ ಮೇಲೆ. ಅವನ ನುಡಿಯೇನು?ಅವನ ಮಾತುಕತೆಯೇನು ? ಅವನ ಆಕಾರವೇನು? ಸಾಕ್ಷಾತ್

ಸುರಾದೇವಿಯ ಅಪರಾವತಾರ. ನೋಡಿದ, ಮನೆಯಲ್ಲಿ ಯಾರೂ ಕಾಣಲಿಲ್ಲ. ಎಲ್ಲ ಶೂನ್ಯವಾಗಿತ್ತು.

ಅವನ ಮಗಳು ಸಣ್ಣ ನಿರುಪದ್ರವಿ ಕೀಟ, ಅದಾದರೂ ಇದೆಯೇ ಎಂದು ಗೋಡೆ ಹಿಡಿದು ಕಂಬಕ್ಕೆ ತೆಕ್ಕೆ ಹಾಯ್ದು ಹುಡುಕಿ ನೋಡಿದ. ಅವರ ಸುಳಿವೇ ಹತ್ತಲಿಲ್ಲ. ಹೇಗೆ ಹತ್ತಬೇಕು? ಅವಳು ಬಿದ್ದಿದ್ದಾಳೆ ಆಸ್ಪತ್ರೆಯಲ್ಲಿ.

'ಹಾಳ್ ರ‍್ರಂಡಿ ಎಲ್ಲಿ?' ಎಂದು ವಿಕಾರವಾಗಿ ತೊದಲುತ್ತ ಹೊರಬಿದ್ದು ಉಯ್ಯಾಲೆಯಂತೆ ಅತ್ತಿತ್ತ ಸುಯ್ದಾಡಿಕೊಂಡು ರಾಮಚಂದ್ರಪ್ಪನ ಸವಾರಿ ಗೌಡರ ಮನೆಯಂಗಳಕ್ಕೆ ಚಿತ್ತೈಸಿತು! ಆ ವೇಳೆಗೆ ಸರಿಯಾಗಿ ಗಂಗವ್ವ ಲಕ್ಷ್ಮಿಯನ್ನು ಎತ್ತಿಕೊಂಡು ಬಾಗಿಲ ಹೊರಕ್ಕೆ ಬಂದಿದ್ದಳು. ಗಂಡನ ರೀತಿಯನ್ನು, ಅವನ ವಿಕಾರಾಕೃತಿಯನ್ನು ದಿನವೂ ನೋಡಲೇಬೇಕಾದ ಗಂಗವ್ವನಿಗೆ ಆ ದಿನದ ದೃಶ್ಯ ವೇನೂ ನವೀನವಾಗಿ ತೋರಲಿಲ್ಲ. ಅವನು ವಾಡಿಕೆಯಾಗಿ ತೊಡುವ ಸಾವಿರಾರು ಅವತಾರಗಳಲ್ಲಿ ಆ ದಿನದ್ದೂ ಒಂದು. ಇನ್ನೇನೂ ವಿಶೇಷವಿಲ್ಲ! ಆದರೆ ಆ ಹೊತ್ತು ಗಂಗವ್ವನಿಗೆ ಮಾತ್ರ ಎಂದಿಗಿಂತ ಹೆಚ್ಚಾದ ದುಃಖ, ಆ ದುಃಖಕ್ಕಿಂತ ಹೆಚ್ಚಾದ ಕನಿಕರ! ಆದರೇನು? ಅವಳೊಂದು ಅಸಹಾಯ ಜೀವ. ಸುಮ್ಮನೆ ಮೂಕವಾಗಿ ನೋಡಬೇಕು, ಅಷ್ಟೆ!

'ಬಾ' ಎಂದು ರಾಮಚಂದ್ರಪ್ಪ ವಕ್ರವಾಗಿ ಕೀಚು ಧ್ವನಿಯಿಂದ ಕೂಗಿದ. ಆಗಿನ ಅವನ ಧ್ವನಿಗೂ ಮೃದುತ್ವಕ್ಕೂ ಮೈಲಿಮೈಲಿ ! ಗಂಗವ್ವನಿಗೆ ಅವನ ಕುಡುಕ ಭಾಷೆ ಪರಿಚಯವಿದ್ದಿತೆಂದು ಅವನ ವಿಕಾರ ಸ್ವರ ಅರ್ಥವಾಯಿತು. ಇಲ್ಲವಾದರೆ ಅಸಾಧ್ಯಕ್ಕೂ ಅಸಾಧ್ಯ, ಅದನ್ನು ಅರಿತುಕೊಳ್ಳುವುದು.

ಲಕ್ಷ್ಮಿಯನ್ನು ಒಳಕ್ಕೆ ಕೊಟ್ಟುಬರಬೇಕೆಂದು ಗಂಗವ್ವ ಹಾಗೆಯೇ ಮುಂದಾದಳು. 'ನಿಲ್ಲು' ಎಂದು ಪುನಃ ಆಜ್ಞೆಯಾಯಿತು. ಗಂಗವ್ವನೇನೂ ನಿಲ್ಲಲಿಲ್ಲ. ಅವಳಿಗೆ ಕುಡುಕನ ಸಹವಾಸ ಗೊತ್ತು. ಪಾಪ, ಎಳೆಯ ಕೂಸು. ತನ್ನನ್ನು ದಂಡಿಸುವ ಸಂಭ್ರಮದಲ್ಲಿ ಅಪ್ಪಿತಪ್ಪಿ ಎಲ್ಲಿಯಾದರೂ ಊನುಗೊಂಡೀತು ಎಂದು ಅವಳಿಗೆ ಹೆದರಿಕೆ. ಆಕೆ ಇದನ್ನು ಯೋಚಿಸಿ ಮುಂದಕ್ಕೆ ಕಾಲಿಟ್ಟಳೋ ಇಲ್ಲವೊ ಅವನ ಹಿಡಿಗಾತ್ರದ ಕಲ್ಲು 'ಬರ‍್ರನೆ' ಹೋಗಿ ಅವಳ ತಲೆಯ ಹಿಂದಿನ ಭಾಗಕ್ಕೆ ನೇರವಾಗಿ ಬಿತ್ತು. ಹಾ, ಶಿವನೇ ಎಂಥ ಪೆಟ್ಟು. ಗಂಗವ್ವ ಹಾಗೆಯೆ ನೆಲಕ್ಕುರುಳಿದಳು. 'ಅಯ್ಯೋ ಸತ್ತೆನೊ ಅಪ್ಪ' ಎಂದು ಕೂಗಿದಳು ಕರುಣಾಜನಕವಾಗಿ. ಲಕ್ಷ್ಮಿ ಉಸಿರುಕಟ್ಟಿ ಒಂದೇಸವನೆ ಚೀರತೊಡಗಿದಳು. ಗೌಡರು ಲೆಕ್ಕದ ಪುಸ್ತಕ ಒಗೆದು ಬಂದು ಮಗಳನ್ನು ಎತ್ತಿಕೊಂಡರು. ಯಾರ ಕೋಪಕ್ಕೆ ಯಾರು ಗುರಿ? ದೇವರ ದಯದಿಂದ ಅವಳಿಗೆ ಪೆಟ್ಟೇನೂ ಹತ್ತಿದಂತೆ ತೋರಲಿಲ್ಲ.

ಪಾಪ ಗಂಗವ್ವನ ತಲೆಯಿಂದ ರಕ್ತ ಚಿಮ್ಮತೊಡಗಿತ್ತು. ಏನು ಹೇಳಬೇಕು?

ಅವಳ ಪರಿಪುಷ್ಟವಾದ ಕೇಶರಾಶಿ ತೊಯ್ದು ನೆಲದ ಮೇಲೆಯೂ ಅಲ್ಲೊಂದು ಇಲ್ಲೊಂದು ಹನಿ ತೊಟ್ಟಿಕ್ಕಿತ್ತು. ಅಯ್ಯೋ ಪುಣ್ಯಾತ್ಮ.

ಇಂದಿರಮ್ಮನವರು ನೀರು ತಟ್ಟಿ ಒದ್ದೆ ಕಟ್ಟುತ್ತಿದ್ದರು. ರಾಮಚಂದ್ರಪ್ಪ ತನ್ನ ಸಾಹಸಕ್ಕೆ ತಾನೇ ಮೆಚ್ಚಿ ಗಹಗಹಿಸಿ ನಗತೊಡಗಿದ್ದ. ಅದನ್ನು ಕಂಡ ಮೇಲಂತೂ ಗೌಡರ ಕೋಪ ನೆತ್ತಿಗೇರಿ ಹೋಯಿತು. ಬಾಯಿಗೆ ಬಂದ ಹಾಗೆ ಆಡಿಬಿಟ್ಟರು. ನಿಜ, ಆಡಬೇಕಾದ ಸಂದರ್ಭ. ಆದರೆ ಅವನೇನು ಕಡಿಮೆಯೆ ? ಆಡಬಾರದ ಹೊಲಸನ್ನೆಲ್ಲ ತೂರಿಬಿಟ್ಟ. ಒಂದನ್ನೂ ಉಳಿಸಲಿಲ್ಲ. ತನ್ನ ಹೆಂಡತಿಯನ್ನು ಗೌಡರು ಯಾಕೆ ವೋಲಿಟ್ಟು ಮಾತಾಡುವರೆಂಬುದು ಆತನಿಗೆ ಚೆನ್ನಾಗಿ ಗೊತ್ತಂತೆ. ಏಕವಚನದಲ್ಲಿ ಸಂಬೋಧನೆ, ಇನ್ನೂ ಏನೇನೊ ತುಚ್ಛ. ನೀತಿವಂತ ಜನ ಕೇಳದ ಮಾತು.

ಗೌಡರು ಅದನ್ನು ಸಹಿಸಲಾಗದಿದ್ದರೂ ಅವರು ಸುಮ್ಮನಾಗಿಬಿಟ್ಟರು. ಪ್ರಜ್ಞಾವಂತ ಜನರೊಡನೇನೊ ಮಾತು ಸರಿ. ಆದರೆ ಕುಡುಕನೊಂದಿಗೆ ಏನು ? ಒದರುತ್ತಾನೆ, ಒದರಲಿ. ನಾಯಿ ಬೊಗಳಿದ ಮಾತ್ರಕ್ಕೆ ಆನೆಯ ಮಾನ ಇಳಿದುಹೋಗಲಿಲ್ಲ. ಈ ಹಾಳು ಜನ, ಹಾಳು ಸಹವಾಸ ಯಾವುದೂ ಬೇಡವೇ ಬೇಡ. ಅವರು ಇದ್ದ ಗೊಡವೆಯೇನು? ಸತ್ತ ಗೊಡವೆಯೇನು? ಹೀಗೆಂದುಕೊಂಡು ತನ್ನ ಮನೆಯಲ್ಲಿ ಎಂದಿಗೂ ಕಾಲಿಡಕೂಡದೆಂದು ಅವಳಿಗೆ ಹೇಳಿ ಗೌಡರು ಗಂಗವ್ವನನ್ನು ಹೊರಕ್ಕೆ ಕಳಿಸಿಬಿಟ್ಟರು.

ಮನೆಗೆ ಹೋಗುವುದೊಂದೆ ತಡ, ಹೊಡೆತ, ಒದೆತ, ತಿವಿತ. ಗಂಗವ್ವನ ಮೇಲೆ ಮಾಡಬೇಕಾದ ಜೀವಹಿಂಸೆಯೆಲ್ಲ ಮುಗಿದುಹೋದುವು. ಅವಳನ್ನು ಹೊಡೆದು ಹೊಡೆದು ರಾಮಚಂದ್ರಪ್ಪನ ಕೈ ಮಂಜುಗಟ್ಟಿದವು. ಅಯ್ಯೊ ಮಾರಿ, ಒಮ್ಮೆಲೆ ನುಂಗಬಾರದೆ? ದಿನದಿನವೂ ಸಾವಿನ ರುಚಿಯನ್ನು ರುಚಿ ನೋಡಲೇಬೇಕೆ ?

ರಾಮಚಂದ್ರಪ್ಪ ಗಂಗವ್ವ ಇಂದಿನಿಂದ ಗಂಡ ಹೆಂಡಿರಲ್ಲ. ಯಾವನೊ ಕುಡುಕನ ಮಾತು ರಾಮಚಂದ್ರಪ್ಪನಿಗೆ ಸತ್ಯವಾಗಿ ತೋರಿತು. ಹೆಂಡತಿ ಅನೀತಿಗಿಳಿದರೆ ಗಂಡನು ಅದನ್ನು ನೋಡಿಯೂ ಸುಮ್ಮನೆ ಸಹಿಸಬೇಕೆ ? ಛೆ, ಅದಾಗದು. ಇನ್ನು ಗಂಗವ್ವನೂ ಅವನೂ ದೂರ. ಎಲ್ಲಿವವರೊ ಏನೊ. ಒಬ್ಬೊಬ್ಬರೊಬ್ಬರ ಮುಖಾವಲೋಕನವೇ ಇಲ್ಲ. ಅವನಿಗೆ ಆಕೆಯ ದರ್ಶನ ಏಳು ಏಳು ಜನ್ಮಕ್ಕೂ ಬೇಡವಂತೆ. ನೋಡಬೇಕು, ಯಾವ ಮಾತು ಸತ್ಯವೊ? ಅಂತೂ ಗದಾಪರ್ವ ಕೊನೆಗೊಮ್ಮೆ ಮುಗಿಯಿತು.

ಆ ಮೇಲೆ ಗಂಗವ್ವನಿಗೆ ಎಂಟು ದಿನಗಳ ವರೆಗೆ ಮೈಮೇಲೆ ಸರಿಯಾದ ಪ್ರಜ್ಞೆ ಇರಲಿಲ್ಲ. ೧೦೪–೧೦೫ ಅಂಶಗಳವರೆಗೆ ಉರಿ, ಅಂಗಾಂಗವೆಲ್ಲ ಬೆಂಕಿ, ಮೈ ಕೈ ಎಲ್ಲಾ ನೋವು, ತಲೆ ಅದಂತೂ ಮರಗಟ್ಟಿ ಹೋಗಿದೆ. ಸ್ವಲ್ಪ ಅತ್ತಿತ್ತ ಕತ್ತು ಹೊರಳಿಸಿದರೂ ಅಸಾಧ್ಯ ವೇದನೆ. ಅದನ್ನೆಲ್ಲ ಆ ಭಗವಂತನೇ ಬಲ್ಲ. ಎದ್ದ ಮೇಲೆ ಅವಳಿಗೆ ತನ್ನ

ಯೋಚನೆಯಿಲ್ಲ. ಮಲ್ಲಿಗೆಯ ನೆನಪು. ರಾಮಚಂದ್ರಪ್ಪನ ಆ ದಿನದ ಅವತಾರ, ಆನಂತರದ ಘಟನೆ, ಆ ದುರಂತದ ಕೊನೆ, ಅದರ ಯೋಚನೆ.

ಅಯ್ಯೊ, ಪುಟ್ಟಮಲ್ಲಿಗೆ, ಪಾಪ, ಈ ಎಂಟು ದಿವಸ ಅನ್ನ ಯಾರು ಕೊಟ್ಟರು ಅವಳಿಗೆ? ಇಷ್ಟರಲ್ಲಿ ಅವಳ ಗತಿಯೇನಾಗಿದೆ ? ಈ ದಿನವಾದರೂ ಎಲ್ಲಿಂದ ತರಬೇಕು? ಏನು ಮಾಡಬೇಕು ? ಅವಳಿಗಂತೂ ತುಂಬ ನಿಃಶ್ಶಕ್ತಿ. ಎಲ್ಲಿಯಾದರೂ ಕೆಲಸಕ್ಕೆ ಹೋಗುವ ಒಗರು ಉಳಿದಿಲ್ಲ. ಮನೆಯಲ್ಲಿ ಇರುವುದಾದರೂ ಏನಿದೆ? ಇಂದಿರಮ್ಮನವರ ಮನೆಯ ತಂಗುಳವೂ ತಪ್ಪಿಹೋಯಿತು. ಇದಕ್ಕೆ ದಾರಿಯೇನು ಎಂದುಆಕೆ ಬೇಸತ್ತು ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟಳು. ತನ್ನ ಕೂಸಿಗೆ ಒಂದು ತುತ್ತು ಅನ್ನವನ್ನು ಇಕ್ಕುವ ಭಾಗ್ಯ ತಾಯಿಗೆ ಇಲ್ಲವಾದರೆ ಅವಳನ್ನು ತಾಯಿಯೆಂದು ಕರೆಯುವುದು ಹೇಗೆ ? ಅವಳಿಗೆ ಮಲ್ಲಿಗೆಯ ಯೋಚನೆಯೊಂದೇ. ಎಂಟು ದಿನಗಳವರೆಗೂ ಉರಿಯ ಕುಲಿಮೆಯಲ್ಲಿ ಬೆಂದು, ಅನ್ನಾನ್ನ ಎಂದು ಹಸಿದು ಹಾವಾಗಿ ಹೋದ ತನ್ನ ಹೊಟ್ಟೆಯ ಗಮನವೆ ಇಲ್ಲ ಅವಳಿಗೆ.

ಯಾರೊ ಬೀದಿಯಲ್ಲಿ ಮಾತಾಡುತ್ತ ಹೋದ ಮಾತು ಗಂಗವ್ವನ ಕಿವಿಗೆ ಬಿತ್ತು. 'ಅಯ್ಯೊ ಭಗವಂತಾ ! ಕುಡುಕ ರಾಮಚಂದ್ರ ಕಳ್ಳನಂತೆ. ನನ್ನ ಗಂಡನಾಗಿ ಇನ್ನೂ ಎಷ್ಟು ಒಟ್ಟಿರುವೆ ಈ ಅಪಕೀರ್ತಿ ? ಸಾಕು ಮಾಡಪ್ಪಾ ಈ ವನವಾಸ' ಎಂದು ಗಂಗವ್ವ ಹಾಸಿಗೆಯಲ್ಲಿ ಉರುಳಾಡಿ ತನ್ನ ದುಃಖ ಶಮನವಾಗುವವರೆಗೆ ಅತ್ತುಬಿಟ್ಟಳು. ಅವಳ ಕಣ್ಣೀರಿಗೆ ಯಾರು ಉತ್ತರ ಹೇಳಬೇಕು?

೫

ಗಂಗವ್ವನಿಗೆ ಜೀವನದಲ್ಲಿ ರುಚಿಯಿಲ್ಲ. ಅದು ಎಂದೋ ಹಾರಿಹೋಯಿತು. ಅವಳೀಗ ಬದುಕಿರುವುದು ಪುಟ್ಟಮಲ್ಲಿಗೆಗೋಸುಗ. ಆಕೆಯ ಜೋಕೆ ಜತನ ಮಾಡುವವರಾರು ಇವಳನ್ನುಳಿದು? ಅನ್ನ ಎಲ್ಲಿ ಅವಳಿಗೆ ಈಕೆ ಹೋದರೆ ? ಗಂಗವ್ವನ ಮಗಳು ಬೀದಿಯ ಭಿಕಾರಿಯಾಗಬೇಕೆ ? ಅದರ ಯೋಚನೆ ಗಂಗವ್ವನ ಎದೆ ಸೀಳಿಹೋಗುವುದು. ಸಿಕ್ಕವರು ಚೆಲ್ಲಿದ ಎಂಜಲಿನ ಮೇಲೆ ಕಚ್ಚಾಡಬೇಕು. ಅಯ್ಯೊ ಪರಮಾತ್ಮ.

ತಾನು ಕಣ್ಣುಮುಚ್ಚುವ ಮುನ್ನ ತನ್ನ ಗಂಡ ನಾಲ್ಕು ಮಂದಿಯತೆ ಬದುಕನ್ನು ಮಾಡಿಕೊಂಡು ಹೋಗುವುದನ್ನು ನೋಡಿದಾಗ ತನ್ನ ಬಾಳು ಸಾರ್ಥಕ, ತಾನು ಜೀವಿಸಿದ್ದು ಪ್ರಯೋಜನ ಎಂದು ಗಂಗವ್ವನ ಎದೆಯಾಳದ ಹಂಬಲಿಕೆ; ಅಷ್ಟು ಮಾತ್ರ ನೆರವೇರಿಸಿದರೆ ಸಾಕು, ಅವಳಿಗನ್ನೇನೂ ಬೇಡ. ಬಡವಿಯ ಸೊಲ್ಲು ಲಕ್ಷದಲ್ಲಿರಲಿ. ಈ ಸಣ್ಣ ಬೇಡಿಕೆಯನ್ನಾದರೂ ಮನ್ನಿಸು ಭಗವಂತಾ ಎಂದು ಗಂಗವ್ವ ಹಗಲಿರುಳು ಕನವರಿಸುವಳು. ಅವಳ ಕನವರಿಕೆ ಸತ್ಯವಾದೀತೆ?

ಅವಳಿಗೆ ಈಗ ಶೇಡಜಿಯೊಬ್ಬನ ಮನೆಯಲ್ಲಿ ಕೆಲಸ. ಪುಣ್ಯಾತ್ಮ ಕಷ್ಟಕಾಲದಲ್ಲಿ ನೆರವಾದ. ಗಂಗವ್ವ ಎಂದಾದರೂ ಮರೆಯಬಹುದೆ? ಇಲ್ಲ, ಖಂಡಿತ ಇಲ್ಲ. ಗಂಗವ್ವನ ಬಾಳಿನಲ್ಲಿ ಈಗ ಏನೊ ಬೆಳ್ಳಿಯ ಗೆರೆ ಹೊಳೆದಂತಾಗಿದೆ. ಹಗಲೆಲ್ಲ ಮೈಮುರಿದುಕೊಳ್ಳುವ ಅವಶ್ಯಕತೆ ಅವಳಿಗಿಲ್ಲ. ಎಲ್ಲವೂ ಸುಲಭ, ಸರಳ. ತಾಸೆರದು ತಾಸಿನ ಕೆಲಸ, ಅಷ್ಟೇ. ಮನೆಯಲ್ಲಿ ಒಬ್ಬರನ್ನು ಬಿಟ್ಟು ಮತ್ತೊಬ್ಬರಿಲ್ಲ. ಇರುವವನೊಬ್ಬನೆ, ಶೇಡಜಿ. ಆತ ತನ್ನ ಮನೆಮಂದಿಯನ್ನೆಲ್ಲ ಸೀಮೆಗೆ ಕಳಿಸಿಕೊಟ್ಟಿದ್ದಾನೆ. ಅವರು ತಿರುಗಿ ಬರುವವರೆಗೆ ತೊಂದರೆಯೇನೂ ಇಲ್ಲ. ಹೊಟ್ಟೆತುಂಬ ಊಟ, ಜೊತೆಗೆ ಹತ್ತು ರೂಪಾಯಿ. ಅಲ್ಲದೆ ಎರಡು ತಿಂಗಳ ಹಣ ಮುಂಗಡ ಬೇರೆ! ಸಾಲದೇನು ಅವಳಿಗೆ ?

ಹಣ ಅಡವು ಕೊಟ್ಟವರು ಕೆಲವು ದಿನದ ಮೇಲೆ ಮನೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಗಂಗವ್ವನಿಗೆ ನಿಲ್ಲಲು ನೆರಳಾಗಿದ್ದ ಮನೆಯೂ ಕೈತಪ್ಪಿ ಹೋಯಿತು. ಅವಳಿಗೆ ತನ್ನವರು ಬಿಟ್ಟವರು ಎನ್ನುವವರು ಯಾರಿದ್ದಾರೆ ? ಅವಳ ಪಾಲಿಗೆ ಪ್ರಪಂಚವೆ ವೈರಿ. ಶೇಡಜಿ ದಯಾನಿಧಿ. ಆಪದ್ಬಂಧು! ತನ್ನ ಮನೆಯಲ್ಲಿಯೆ ಇದ್ದುಬಿಡು ಎಂದು ಗಂಗವ್ವನಿಗೆ ಆಹ್ವಾನ ಕೊಟ್ಟ. ಆದರೆ ಗಂಗವ್ವನಿಗೇಕೊ ಆ ಸೂಚನೆ ಸರಿದೋರಲಿಲ್ಲ. ಮನೆಯಲ್ಲಿ ಬೇರೆ ಹೆಣ್ಣುಮಕ್ಕಳಿಲ್ಲ. ಇರುವವನೊಬ್ಬನೆ. ಆತ ಗಂಡಸು ಎಷ್ಟೇ ನೀತಿವಂತ, ಎಷ್ಟೇ ನ್ಯಾಯಪಕ್ಷಪಾತಿಯಾದರೂ ! ಅದಕ್ಕೆಂತಲೇ ಆಕೆ ತಲೆ ಕೊಡವಿಬಿಟ್ಟಳು. ಅವಳಿಗೆ ಬೇಡವಾದರೆ ಜುಲುಮೆಯೇಕೆ ಎಂದು ಶೇಡಜಿ ಅಷ್ಟಕ್ಕೆ ಸುಮ್ಮನಾದ. ನ್ಯಾಯವಾದ ಮಾತು.

ಅಲ್ಲಿ ಇಲ್ಲಿ ಸಣ್ಣ ಬಾಡಿಗೆಯ ಮನೆ ಸಿಗಬಹುದೇನೋ ಎಂದು ಗಂಗವ್ವ ಹುಡುಕಿ ನೋಡಿದಳು. ಆದರೆ ಅಂಥ ಮನೆ ಎಲ್ಲಿಯೂ ತೆರವಿರಲಿಲ್ಲ. ಹೀಗಾಗಿ ಗಂಗವ್ವ ನಿರುಪಾಯಳಾದಳು. ಅಂತೂ ಅವಳು ಕೊನೆಗೆ ಶೇಡಜಿಯ ಮನೆಯನ್ನೇ ಆಶ್ರಯಿಸಬೇಕಾಗಿ ಬಂತು. 'ಕಾಲಾಯ ತಸ್ಮೈ ನಮಃ'

ಸರಿಯಾದ ವೈದ್ಯೋಪಚಾರ ಒದಗಿದುದರಿಂದ ಮಲ್ಲಿಗೆಯ ಕಾಲೇನೋ ಹೊಂದಿಕೊಂಡಿತು. ಆದರೆ ವಿಧಿ! ಕಾಮಿಣಿಯಂತೆ ತೋರುತ್ತಿದ್ದ ಅವಳ ಬಾಲ್ಯದ ಅನಾರೋಗ್ಯ ಕ್ಷಯವೆಂದು ಕೊನೆಯ ಗಳಿಗೆಗೆ ಪೃಥಃಕ್ಕರಣವಾಗಿ ಬಂತು. ಗಂಗವ್ವನನ್ನು ಒಂಟಿಯಾಗಿ ಬಿಟ್ಟು ಪುಟ್ಟ ಮಲ್ಲಿಗೆ, ತನ್ನ ಬೇನೆಯ ಸೆರೆಯಿಂದ ಬಿಡುಗಡೆ ಹೊಂದಿ ಕೈ ಬೀಸಿ ನಡೆನಡೆದಳು.

ಗಂಗವ್ವನಿಗೆ ದಿಕ್ಕು ತೋಚದಾಯಿತು. ಎರಡು ವಾರ ಆಕೆ ಹಾಸಿಗೆ ಹಿಡಿದು ಮಲಗಿಬಿಟ್ಟಳು. 'ಆಹಾ ಏನು ನಿನ್ನ ಜೀವನ!' ಎಂದು ಅವಳು ಮಲಗಿದ ಕೋಣೆಯ ಮೂಲೆಮೂಲೆಯಿಂದ ತಾತ್ಸಾರದ ಮಾತು ಕುತ್ಸಿಕ ಟೀಕೆ ಕೇಳಿಬರುವಂತೆ ಅವಳಿಗೆ

ಭಾಸವಾಯಿತು. ಎಷ್ಟು ಯೋಚಿಸಿದರೂ ಏನೊಂದೂ ಇತ್ಯರ್ಥವಾಗಲಿಲ್ಲ. ಅವಳ ಬಯಕೆಯ ಎರಡು ಬಳ್ಳಿಗಳಲ್ಲಿ ಒಂದು ಕಡಿದು ಹೋಯಿತು. ಪುನಃ ಕೂಡಿ ಬರುವ ಹಾಗಿಲ್ಲ. ಇನ್ನು ಉಳಿದಿರುವುದು ಏನಾಗುವದೋ ನೋಡಬೇಕು, ನಿಜ. ಆದರೆ ಅದಕ್ಕಾಗಿ ಅಲ್ಲಿಯವರೆಗೆ ಜೀವ ಹಿಡಿದುಕೊಂಡಿರಬೇಕೆ ? ಆ ಬಳ್ಳಿ ಪ್ರಯೋಜನಕ್ಕೆ ಬಂದೀತೆ ಇಲ್ಲವೆ ಎಂಬುದೇ ಅನಿಶ್ಚಿತ. ಹೀಗೆಂದು ಗಂಗವ್ವ ಕೆಲ ವೇಳೆ ತರ್ಕಿಸುವಳು. ಸಂಶಯಪಡುವಳು.

ಗಂಡನಂತೂ ಇವಳನ್ನು ಎಂದೋ ತ್ಯಜಿಸಿದ್ದಾನೆ. ಅವನು ಏಳೇಳು ಜನ್ಮಕ್ಕೂ ಇವಳನ್ನು ಕಣ್ಣೆತ್ತಿ ನೋಡತಕ್ಕವಲ್ಲ. ಹಾಗಾದರೆ ಅವನ ಬಗ್ಗೆ ಇವಳಿಗೇಕೆ ಇಷ್ಟೊಂದು ಅಭಿಮಾನ ? ಗಂಗವ್ವ ಮುಗ್ಧೆ, ಅಶಿಕ್ಷಿತೆ. ಅದಕ್ಕೆ ಉತ್ತರ ಹೇಳಬಲ್ಲಳೆ? ಗಂಡನನ್ನುಳ್ಳ ಹೆಣ್ಣಿನ ಬಾಳು ಸಾರ್ಥಕ. ಇಲ್ಲವಾದರೆ ಅವಳ ಗತಿ ?

ಇಲ್ಲಿಯವರೆಗೂ ಗಂಗವ್ವ ಹೇಗೋ ಇದ್ದಾಳೆ. ಇನ್ನು ತನ್ನ ಗಂಡ ಬಿಡುಗಡೆ ಹೊಂದಿ ಬಂದು ಸಾಮಾಜಿಕನಾಗಿ ಬಾಳುವುದನ್ನು ನೋಡುವವರೆಗಾದರೂ ಬದುಕಿದ್ದರಾಯಿತು. ಗಂಡ ಆಗ ನೋಡದಿದ್ದರೂ ಬಿಡಲಿ. ದೂರದಿಂದಲೇ ಅವನ ಬಾಳು ಸಾರ್ಥಕವಾದುದನ್ನು ನೋಡಿದರೆ ಸಾಕು. ಅಂದಿಗೆ ತನ್ನ ಬಾಳು ಸಫಲ. ನಿರ್ದಯ, ನೀಚ, ಪತಿತ, ಕುಡುಕ, ಕಳ್ಳ ಎಂಬ ಅಪಹಾಸ್ಯ ತೊಲಗಿ ತನ್ನ ಗಂಡ ಮನುಷ್ಯನಾಗಿ ಮೆರೆಯುವ ದಿನ ತನ್ನ ಜೀವನ ಯಾತ್ರೆ ಕೊನೆಯನ್ನು ಕಾಣಲಿ ಎಂದು ಗಂಗವ್ವನ ಕಳಕಳಿ.

ಈ ಆಸೆ ಕನಸುಗಳಲ್ಲಿಯೆ ಗಂಗವ್ವನ ದಿನ ಕಳೆಮಹೋಗತೊಡಗಿದವು. ಬರಬರುತ್ತ ಶೇಡಜಿಯ ಮಾತುಕತೆಗಳಲ್ಲಿ ರೀತಿ ನಡತೆಗಳಲ್ಲಿ ಅವಳಿಗೆ ಆಗ ಸಂಶಯ ತೋರತೊಡಗಿತು. ಶೇಡಜಿ ತುಂಬಾ ಬುದ್ಧಿವಂತ. ಇದನ್ನು ಅವನು ಶೀಘ್ರವಾಗಿ ಅರಿತುಕೊಂಡ. ಮನೆಜನರ ಮನೆಮಾತಿಗೆ ಹೀಗೆ ಸಂಶಯಪಡಬಾರದು ಎಂದ ಶೇಡಜಿ ಸಮಾಧಾನವಾಗಿ.

ಅಷ್ಟರಲ್ಲಿ ದೀಪಾವಳಿ ಬಂತು. ಅಂದು ಶೇಡಜಿಯ ಮನೆಯಲ್ಲಿ ವಿಶೇಷ ಪೂಜೆ. ಎಲ್ಲವೂ ಬಹಳ ವೈಭವದಿಂದ ವಿಜೃಂಭಣೆಯಿಂದ ನೆರವೇರಿತು. ಅರಿವೆಯ ವ್ಯಾಪಾರದಲ್ಲಿ ಅನ್ಯಾಯವಾಗಿ ತಿಂದ ಲಾಭದ ಆಡಂಬರದ ಪ್ರದರ್ಶನ ಮೆರೆಯಿತು. ಏನೇ ಆಗಲಿ, ಗಂಗವ್ವನಿಗೆ ಮಾತ್ರ ಪೂಜೆಯ ಸೀರೆ ಕಾಣಿಕೆಯಾಗಿ ಬಂತು.

ಗಂಗವ್ವನದು ಗೌಡರ ಮನೆಯಲ್ಲಿದ್ದ ದಳಿತ ದೇಹವಲ್ಲ, ಇಂದು ಇಪ್ಪತ್ತೈದು ವರುಷ ತುಂಬಿದ ದೇಹ. ಆಹಾ, ಏನು ಮೋಹಿಸುವ ಗಾಡಿ, ಆ ಮೋಹದ ಮಾಟ. ಅವಳ ಅಂಗಾಂಗದಲ್ಲಿ ಯೌವ್ವನ ಹೊರಸೂಸಿದೆ. ಈಗ ಬಿಂಕದ ಸಿಂಗಾರಿ ಆಕೆ.

ಕಾರ್ಮೋಡ ಒಟ್ಟತೊಡಗಿದ್ದವು. ಶೇಡಜಿಯ ಮನಸ್ಸಿನಲ್ಲಿ ದುರ್ವ್ಯಾಪಾರದ ಯೋಚನೆ ಮಿಂಚಿಹೋಯಿತು. ಗಂಗವ್ವ 'ಬೇಡ' ಎಂದಳು. ಶೇಡಜಿ ಕೇಳಲಿಲ್ಲ.

ಗರತಿಯೆಂಬ ಮಾನದಿಂದ ಮರ್ಯಾದೆಗೊಂಡು 'ಗಂಗವ್ವ' ಎಂದು ಬಾಯಿತುಂಬ ಕರೆಯಿಸಿಕೊಳ್ಳುತ್ತಿದ್ದ ಗಂಗವ್ವ ಕ್ಷಣಾರ್ಧದಲ್ಲಿ 'ಗಂಗೆ'ಯಾದಳು. ಶೇಡಜಿಯ ಋಣದಿಂದ ವಿಮುಕ್ತಳಾದಳು. ಅಂತೂ ಅನ್ನಕ್ಕಾಗಿ ಮಾರಿಹೋಯಿತು ಅವಳ ದೇಹ. ಹಾ, ಎಂಥ ವಿಧಿವಿಲಾಸ.

ಒಮ್ಮೆ ನಡೆದದ್ದು ಹಾಗೆಯೆ ಮುಂದುವರೆಯಿತು. ಈಗ ಗಂಗವ್ವ ಕೆಲಸದ ತೊತ್ತಲ್ಲ– ಮನೆಯೊಡತಿ.

ತಾನು ನಡೆಸಿರುವ ಕಾರ್ಯ ಅನುಚಿತ ಎಂದು ಆಗಾಗ ಅವಳಿಗೆ ತೋರುವುದು. ಸರಿ ತೋರದೇನು? ಹೆಣ್ಣು ಜೀವ ಎಷ್ಟು ಚಂಚಲ! ಒಮ್ಮೆ ಸೋತಮೇಲೆ ಪುನಃ ಸೋಲಿನ ಚಿಂತೆಯೆ? ಹೀಗೆಂದು ಅವಳು ಅದನ್ನು ಮರೆಯಲು ಯತ್ನಿಸುವಳು. ಆದರೆ ತಾನು ಬದುಕಿದ್ದು ಹಾದರಕ್ಕೇ? ಎಂಬ ಮಾತು ಹೊಳೆದಾಗ ಮಾತ್ರ ಅವಳಿಗೆ ಅಸಹ್ಯ ವ್ಯಥೆಯಾಗುವುದು. ಮಾಡುವುದೇನು ? ಬಂದುದನ್ನು ಅನುಭವಿಸಲೇಬೇಕು. ಅವರವರ ಕರ್ಮ ಅವರವರ ಬೆನ್ನಿಗೆ.

ಹೀಗೆಯೆ ದೇಹ ವಿಕ್ರಯಿಸುತ್ತ ಗಂಗವ್ವನ ದಿನ ಸಾಗಿ ಹೋದವು. ಮೂರು ವರ್ಷ ಕಾಲ ಸಣ್ಣ ಪ್ರಮಾಣವೇನೂ ಅಲ್ಲ. ಇಂಥ ಉದ್ದ ವೇಳೆ ಎಂಥ ಬೇಗ ಕಳೆದುಹೋಯಿತು.

ಒಂದು ದಿನ ಬೆಳಿಗ್ಗೆ ಗಂಗವ್ವ ತನ್ನ ಮಾನವನ್ನು ತೂರಿಕೊಂಡ ಈ ಮನೆಯಂಗಳದಲ್ಲಿ ನಿಂತಾಗ ಯಾವನೊ ಒಬ್ಬ– ಕುಡುಕನಿರಬೇಕು, ಅತ್ತಿತ್ತ ತೊನೆದಾಡುತ್ತ ಬೀದಿಯಲ್ಲಿ ಎದುರಿಗೆ ಬರುತ್ತಿದ್ದ. ಗಂಗವ್ವನ ಸ್ಮೃತಿ ಮೂರು ವರುಷದ ಹಿಂದಿನ ಕಹಿ ನೆನಹುಗಳನ್ನು ಮನಸ್ಸಿನಲ್ಲಿಯೆ ನಿರೀಕ್ಷಿಸತೊಡಗಿತು. ಅಬ್ಬಾ, ಎಂಥ ಕಟು ಅನುಭವಗಳು. ಆದರೆ ಆ ಮುಳ್ಳುಹಾಸಿಗೆಯಲ್ಲಿ ಕಂಪು ಇಂದು ತನ್ನ ಜೀವನದಲ್ಲಿ ಇಲ್ಲ. ಅವಳ ಜೀವನದ ಗುರಿಯೇನು, ಸೂಳೆಗಾರಿಕೆಯೇ? ಆಕೆ ಬದುಕಿರುವುದು ಯಾರಿಗಾಗಿ ? ಶೇಡಜಿಯ ತುಚ್ಛ ಕಾಮಲಾಲಸೆಯನ್ನು ತಣಿಸುವುದಕ್ಕಾಗಿಯೆ? ಇದ್ದಕ್ಕಿದ್ದಂತೆ ಗಂಗವ್ವನ ತಲೆ ಗಿರ್ರನೆ ತಿರುಗತೊಡಗಿತು. ಕೆಳಕ್ಕೆ ಕುಳಿತು ಚೇತರಿಸಿಕೊಂಡು ಆಕೆ ಪುನಃ ಮೇಲಕ್ಕೆದ್ದಳು. ಅವಳಿಗೆ ನಿಲ್ಲಲಾಗಲಿಲ್ಲ. 'ಅಯ್ಯೊ ನನ್ನ ಮನೆ' ಎಂದು ಆಕೆ ಮಾರಿಹೋದ ತಮ್ಮ ಮುಂಚಿನ ಮನೆಗೆ ಓಡಿದಳು.

ಅಲ್ಲಿ ಯಾವನೊ ಒಬ್ಬ ದೀನಮುಖ ಮಾಡಿಕೊಂಡು ಕುಳಿತಿದ್ದ. ಕರುಣಾಜನಕ ದೃಶ್ಯ. ಅವನನ್ನು ಕಂಡರೆ ಅಂತಃಕರಣ – ಅದು ಎಂಥದೇ ಇರಲಿ ಕರಗಬೇಕು. ಯಾವನವನು? ಓಹೊ, ಆತನೇ ? ಹೌದು ರಾಮಚಂದ್ರಪ್ಪ ಬಿಡುಗಡೆಯಾಗಿ ಮೂರು ದಿನಗಳಾದವು. ಅಂದಿನಿಂದಲೂ ಬೆಳಗು ಸಂಜೆಯೆನ್ನದೇ ಆ ಮನೆಯ ಬಾಗಿಲಲ್ಲಿ

ಗಂಗವ್ವನಿಗಾಗಿ ಕಾದು ಕುಳಿತುಕೊಂಡಿದ್ದಾನೆ.

ರಾಮಚಂದ್ರಪ್ಪನನ್ನು ಕಂಡೊಡನೆಯೆ ಗಂಗವ್ವನ ದುಃಖದ ಕಡಲು ಒಡೆದಂತಾಯಿತು. ರಾಮಚಂದ್ರಪ್ಪನಂತೂ ಚಿಕ್ಕಮಗುವಿನಂತೆ ಅತ್ತುಬಿಟ್ಟ. ಇಬ್ಬರ ಕಣ್ಣೀರು ಒಂದಾಗಿ ಹರಿದವು.

"ನನ್ನ ತಪ್ಪು ಮನ್ನಿಸು, ಮರೆತುಬಿಡು ಗಂಗಾ, ನಿನ್ನ ಸ್ಮರಣೆ ಬಿಡಬೇಡ. ಇದೊ, ನಿನ್ನ ಕರುಣೆಗೆ ಪಾತ್ರನಾಗಿ ಪರುಶುದ್ಧನಾಗಿ ಬಂದಿದ್ದೇನೆ. ಸೆರೆಸಿಂದಿಯಲ್ಲಿ ಮೈತೊಳದ ಚರ್ಮ ಇದೊ ಕಿತ್ತುಹೋಗಿದೆ ನೋಡು! ನಾನು ಹೊಸ ಮನುಷ್ಯನಾಗಿ ಬಂದಿದ್ದೇನೆ. ಹೋಗಲಿ, ಆ ಕಾಲ ಮರೆತುಬಿಡು ಹೊಸ ಸಂಸಾರ ಹೊಸ ರೀತಿಯಲ್ಲಿ, ಬಾ" ಎಂದು ರಾಮಚಂದ್ರಪ್ಪ ಅವಳೆಡೆಗೆ ಕೈ ನೀಡಿದ.

ಗಂಗವ್ವ ಉನ್ಮಾದಳಂತೆ ಹುಚ್ಚಿಯಂತೆ ಓಡಿಬಿಟ್ಟಳು. ಅವಳು ಕೇಳಿದ ಪ್ರತಿಯೊಂದು ನುಡಿಯೂ ಅವಳಿಗೆ ಸಿಡಿಲು. ಅಯ್ಯೊ! ತನ್ನ ಪಾಪಕ್ಕೇನು ಪ್ರಾಯಶ್ಚಿತ್ತ ಅವಳಿಗೆ ರಾಮಚಂದ್ರಪ್ಪನಿಗೆ ವಿವೇಕ ಬರುವವರೆಗೆ ತಾನು ಕಾಯಬಾರದಿತ್ತೆ ? ಥೆ, ಎಂಥ ಅವಿವೇಕ, ತನ್ನ ಹಾಳು ಮಲಿನ ದೇಹವನ್ನು ನಿರ್ಮಲವಾಗಿ ಬಂದ, ಗೃಹಸ್ಥನಾಗಿ ಬಂದ ರಾಮಚಂದ್ರಪ್ಪನಿಗೆ ಒಪ್ಪಿಸುವದೆ? ಹೃದಯ ಒಪ್ಪೀತೆ? ಅದನ್ನೆಲ್ಲ ನೆನೆದು ಗಂಗವ್ವನ ತಲೆ ವಿಭ್ರಮಿಸಿಹೋಯಿತು. ಮನೆಗೆ ನುಗ್ಗಿ ಅವಳು ಬಾಗಿಲನ್ನು ಮುಚ್ಚಿಕೊಂಡುಬಿಟ್ಟಳು.

ರಾಮಚಂದ್ರಪ್ಪ ಬಾಗಿಲವರೆಗೆ ಬಂದು ಕದವನ್ನು ತಟ್ಟಿದ. ದೈನ್ಯವಾಗಿ ಅಂಗಲಾಚಿದ. ಆದರೆ ಕದ ತೆರೆಯಲಿಲ್ಲ. ಅವನಿಗೆ ಪ್ರವೇಶ ದೊರೆಯಲಿಲ್ಲ. ಶೇಡಜಿ ಬಂದು "ನಡೆಯೊ ಹುಚ್ಚ ಆಚೆಗೆ" ಎಂದು ಬೆದರಿಸಿ ಅವನನ್ನು ಅಲ್ಲಿಂದ ಓಡಿಸಿಬಿಟ್ಟ. ಶೇಡಜಿಯ ಮಾತನ್ನು ಕೇಳಿ ಗಂಗವ್ವ ಕಿವಿ ಮುಚ್ಚಿಕೊಂಡು ನೀರವವಾಗಿ ಬಿಕ್ಕಿಬಿಕ್ಕಿ ಅತ್ತಳು.

ಇಂದು ಗಂಗವ್ವನಿಲ್ಲ. ಆಕೆ ಆ ದಿನವೆ ಗಂಗೆಯನ್ನು ಸೇರಿಹೋದಳು. ರಾಮಚಂದ್ರಪ್ಪ ಮಾತ್ರ ಈಗಲೂ ಇದ್ದಾನೆ. ಅವನೇನೊ ಬಯಸಿದ, ರಾಮಚಂದ್ರಪ್ಪನಾಗಬೇಕೆಂದು. ಆದರೆ ವಿಧಿ ಅವನಿಗಾಗಿ ಬರೆದ ಬರೆಹ ತೀರ ಬೇರೆಯಾಗಿತ್ತು.

ಹುಚ್ಚನಿಗೆ ಒಂದು ತುತ್ತು ಎಂದು ಯಾರಾದರೂ ಕನಿಕರಿಸಿ ಒಂದು ತುತ್ತು ಹಾಕಿಸಿದರೆ ಅವನ ಹೊಟ್ಟೆ ಒಂದು ತುತ್ತು ಅನ್ನ ಕಾಣಬೇಕು. ಇಲ್ಲವಾದರೆ ಅವನು ಹಸಿವೆಯಿಂದ ಬಳಲಬೇಕು. ಉಪವಾಸ ಸಾಯಬೇಕು. ಬಡವರ ಬಗ್ಗರ ತುತ್ತಿನ ಚೀಲವನ್ನು ತುಂಬುವ ಅನ್ನದೇವರು ಮಾತ್ರ ಇನ್ನೂ ಬರಲಿಲ್ಲ.

ಎಂದು ಬರುವನೊ ನನ್ನ ದೊರೆಯೆ ?

* * * *

# ರೆಪ್ಪೆಯ ಭಾರ !

"Happiness is but occasional episode in the general drama of pain."

-Thomas Hardy

ಸ್ವಂತ ಮನೆಯಾದರೆ ಸರಿ.

ಬಾಡಿಗೆ ತೆರಬೇಕಾದುದಿಲ್ಲ. ಉಳಿತಾಯದ ಕೆಲಸ.

ಇನ್ನು ಪರಸ್ಥಳದಲ್ಲಿದ್ದುಕೊಂಡು ಬಾಡಿಗೆ ಮನೆಯಲ್ಲಿ ವಾಸಮಾಡಿ ಅದೂ ತಿಂಗಳ ಅಂತ್ಯಕ್ಕೆ ಬರುವ ಮೂವತ್ತು ರೂಪಾಯಿಗಳಲ್ಲಿ ತಾನು, ತನ್ನ ಹೆಂಡತಿ, ತನ್ನ ನಾಲ್ಕು ಮಕ್ಕಳು ಜೀವ ಹಿಡಿದುಕೊಂಡಿರುವ ಬಗೆ ಹೇಗೆ ?... ಅವನಿಗೆ ನೀಗಲಾರದ ಸಮಸ್ಯೆ ಇದು.

ನೋಡಿದರೆ ಏರಿಕೆಯ ದಿನಮಾನ. ಎಲ್ಲವೂ ತುಟ್ಟಿ.

ಅಲ್ಲದೆ ಹಿಂದಿನ ಸಾಲದ ಬಡ್ಡಿ ಒಂದೆರಡು ರೂಪಾಯಿ ತೆರಬೇಕೇನೊ.

ಅಂತೂ ಗಳಿಗೆಗೊಂದು ತಾಪತ್ರಯ.

ಲೋಕಪ್ಪ ತನ್ನ ಸಂಕಟ ಯಾರ ಮುಂದೆ ತೋಡಿಕೊಳ್ಳಬೇಕು?

ಊರಲ್ಲಿ ಮನೆಯವರೆಲ್ಲ ಇವನ ಮೇಲೆ ಬೆಂಕಿ ಬೆಂಕಿ. ತನ್ನ ಅಂದಾದುಂದಿ ಖರ್ಚನ್ನು ಕಡಿಮೆ ಮಾಡಿ ತಿಂಗಳಿಗೆ ನಾಲ್ಕು ರೂಪಾಯಿ ಉಳಿಸಿ ಮನೆಗೆ ಕಳಿಸಿಕೊಡಬಾರದೆ ಎಂದು ಲೋಕಪ್ಪನ ಮೇಲೆ ಅವರ ಆರೋಪ.

ಲೋಕಪ್ಪ ಮಾತ್ರ ಇದಾವುದನ್ನೂ ಲಕ್ಷ್ಯಕ್ಕೆ ತಂದುಕೊಳ್ಳುತ್ತಿರಲಿಲ್ಲ. ಮೀಸೆಯೆ ಭಾರವಾದ ಮನುಷ್ಯನಿಗೆ ಹೆಡಿಗೆ ರುಮಾಲದ ಗೊಡವೆ ಏಕೆ ?

ಎಂಟು–ಹತ್ತು ವರ್ಷದ ವಾಸದಿಂದಲೊ ಏನೊ ಹಿರೆಕೆರೂರು ಅವನಿಗೆ ಪರವೂರೆಂದು ತೋರಲಿಲ್ಲ. ಎಲ್ಲ ರೂಢಿಯಾಯಿತು. ಅಲ್ಲಿಯ ಜನವೆಲ್ಲ ಅವನಿಗೆ ಪರಿಚಯವಾಯಿತು. ಹೆಚ್ಚಾಗಿ ಬಳಿಕೆಯಾಯಿತು. ಹಾಗೆಂದರೇ ಸರಿ. ಲೋಕಪ್ಪನ ಸಂಸಾರದ ಜೀವನ ಅಲ್ಲಿಯ ಜನದ ಬದುಕಿನೊಂದಿಗೆ ಸಮರಸವಾಗಿ ಹೋಯಿತು. ಅಲ್ಲಿಯವನೆಂದೆ ಆ ಜನ ಅವನನ್ನು ಆದರದಿಂದ ಕಾಣಹತ್ತಿದರು. ಸ್ಥಳಿಕನ ಗೌರವ ಮನ್ನಣೆ ಆತನಿಗೆ ಲಭಿಸಿದವು. ಆ ಊರು ಹುಟ್ಟಿದೂರಿನಂತೆ ಪ್ರಿಯವಾಯಿತು ಅವನಿಗೆ.

ಹೊರಗೆ ಹೋದರೆ ಜನಪ್ರೀತಿ. ಮನೆಗೆ ಬಂದರೆ ಹೆಂಡತಿಯ ನಿರ್ವ್ಯಾಜ ಪ್ರೇಮ. ಬಾಳಿನಲ್ಲಿಯ ಈ ತೃಪ್ತಿ ಲೋಕಪ್ಪನ ಸಂಕಷ್ಟಗಳಿಗೆ ತೆರೆ ಹಾಕಿದ್ದವು. ಆಗಾಗ ಕುಂದುಕೊರತೆ ಹಣಿಕೆ ಹಾಕಿದರೂ ಅವು ಹೇಗೋ ಮರೆಯಾಗಿ ಹೋಗುತ್ತಿದ್ದವು.

ಇದಕ್ಕೆಲ್ಲ ಮುಖ್ಯ ಕಾರಣ ಸಾವಕ್ಕನೆಂದು ನಿಷ್ಪಕ್ಷಪಾತವಾಗಿ ಹೇಳಬಹುದು. ಅವಳ ಜಾಣ್ಮೆ, ಹಿಡಿತ, ಮುತುವರ್ಜಿ ಇಲ್ಲದೆ ಹೋಗಿದ್ದರೆ ಲೋಕಪ್ಪನ ಸಂಸಾರದ ಹಡಗು ಬುಡಮೇಲು. ಅಂತೂ ಲೋಕಪ್ಪನ ಸುಖ ದುಃಖಕ್ಕೆ ಆತು ಬಂದ ಹೆಣ್ಣು ಆಕೆ.

ಅವಳು ಮನೆತನ ಸಾಗಿಸುವ ಕ್ರಮ ಬಹಳ ಜಿನುಗು. ತೀರ ನಾಜೂಕು. ಅಷ್ಟಿಲ್ಲದೆ ಹೋದರೆ ಸಂಸಾರದ ರಥ ಸಾಗುವುದು ಹೇಗೆ ? ಎರಡು ತುತ್ತುನಲ್ಲಿ ಒಂದು ತುತ್ತು ಕಾಯ್ದಿಡುವ ಗುಣ ಅವಳದು.

ಆಕೆ ಅಲ್ಪಸ್ವಲ್ಪ ಹೊಲಿಗೆಯ ಕೆಲಸವನ್ನೂ ಮಾಡುತ್ತಾಳೆ. ತಿಂಗಳ ವೆಚ್ಚಕ್ಕೆ ಅವಳದೂ ೨–೩ರೂಪಾಯಿ ಕಾಣಿಕೆ ಸೇರಬೇಕು. ಲೋಕಪ್ಪನಿಗೆ ಮಾತ್ರ ಆ ವಿಷಯ ಗೊತ್ತಿಲ್ಲ. ಹೆಂಡತಿಗೆ ನೀರು ಜಗ್ಗಿಕೊಟ್ಟು, ಬೆಳಗಿನ ತಿಂಡಿ ಏನಾದರೂ ಆಗಿದ್ದರೆ ಮುಗಿಸಿಕೊಂಡು ಅವನು ರಸ್ತೆ ಕಾಮಗಾರಿ ನೋಡಿಕೊಂಡು ಬರಲು ಹೋದನೆಂದರೆ ತಿರುಗಿ ಬರುವುದು ಮಧ್ಯಾಹ್ನ ಒಂದು ಗಂಟೆಗೊ ಎರಡು ಗಂಟೆಗೊ. ಆ ವೇಳೆಯಲ್ಲಿ ಸಾವಕ್ಕ ಅಡಿಗೆಗಿಟ್ಟುಕೊಂಡು ತನ್ನ ಹೊಲಿಗೆ ಸಾಗಿಸಬೇಕು. ಒಲೆ ಉಕ್ಕಿದರೆ ಆರಿದರೆ ನಡುನಡುವೆ ಆಗಾಗ ನೋಡಿಕೊಳ್ಳಲು ಸೀತೆ ಇದ್ದಾಳೆ. ಅವಳಿಗೂ ಈಗ ಒಂಭತ್ತು ಮುಗಿದು ಹತ್ತನೆಯ ವಯಸ್ಸು ಇದ್ದಿರಬಹುದು, ಅಷ್ಟೆ.

ಸಾವಕ್ಕ, ಆಗೊಂದು ಈಗೊಂದು ಉಳಿಸಿಕೊಂಡು ಹನ್ನೆರಡು ರೂಪಾಯಿ ಕೂಡಿಹಾಕಿ ಗಂಡನಿಗೆ 'ದುಂಬಾಲು' ಬಿದ್ದು ಸಾಧುವಾದ ಒಂದು ಹೊಟ್ಟೆಯ ಆಕಳನ್ನು ತರಿಸಿಕೊಂಡಳು. ಅಂದಿನಿಂದ ಅದರ ಚಾಕರಿ ಮೊದಲಾಯಿತು. ಹಾಲನ್ನು ಉಂಡು ವಾರಕ್ಕೆ ಒಂದೆರಡು ರೂಪಾಯಿ ಸಂಪಾದಿಸುವ ಕನಸನ್ನು ಕಾಣಹತ್ತಿದಳು ಸಾವಕ್ಕ.

೨

ಲೋಕಪ್ಪನಿಗಾದರೊ ಪ್ರಾಣಸಂಕಟ.

ತನ್ನ ಅಡಚಣೆಯನ್ನು ಹೇಳಿಕೊಳ್ಳುವ ಕಾಗದ ಊರಿನಿಂದ ಬರುವುದು ತಪ್ಪಲಿಲ್ಲ– ಅವನಿಗೆ.

ಏನಾದರೂ ಮಾಡಿ ಹದಿನೈದು ರೂಪಾಯಿಗಳನ್ನು ಇನ್ನೆಂಟು ದಿನಗಳಲ್ಲಿ ಕಳಿಸಲೇಬೇಕೆಂದು ಹಿರಿಯಣ್ಣನ ವರಾತು. ಕಳಿಸಲಿಲ್ಲವೆಂದರೆ ಮುಂದೇನೊ. ಅವನಂತೂ ಒಂದು ನಮೂನೆಯ ಮನುಷ್ಯ. ಪಾಪ, ಕಳಿಸಬಾರದೆಂದು ಹಟವೇನು? ಇವನ ಕೈಯ್ಯಲಾದರೂ ಏನಿದೆ ? ದಾರ ಹರಿದರೆ ಕೂಡಿಸುವುದಕ್ಕೂ ಒಂದು ಕಾಸಿಲ್ಲ.

ಲೋಕಪ್ಪ ಯೋಚಿಸಿಯೆ ಯೋಚಿಸಿದ. ಯಾವುದೊಂದೂ ಇತ್ಯರ್ಥವಾಗಲಿಲ್ಲ. ಅವನ ಮನಸ್ಸಿನ ನೆಮ್ಮದಿ ಕಡಿದುಹೋಯಿತು.

'ಆಕಳು ಹೇಗಾದರೂ ಈದಿದೆ. ಗಿಣ್ಣ ಮಾಡೋಣ್ರಿ' ಎನ್ನುತ್ತ ಸಾವಕ್ಕ ಚಹ ಹಿಡಿದುಕೊಂಡು ಬಂದಳು.

'ಏನಾದರೂ ಮಾಡು ಹೋಗು. ನಿನ್ನ ಮನಸ್ಸಿಗೆ ತಿಳಿದದ್ದು' ಎಂದು ನಿರುತ್ಸಾಹದ ಮಾತನ್ನಾಡಿ ಚಹವನ್ನು ಸವಿದು ನಿರ್ವಿಣ್ಣನಾಗಿ ಕುಳಿತ. ಸಾವಕ್ಕನ ಉತ್ಸಾಹಕ್ಕೆ ತಣ್ಣೀರನ್ನೆರಚಿದಂತಾಯಿತು. ಇಷ್ಟೇಕೆ ಬೇಸರ್ರಿ?' ಎನ್ನುತ್ತ ಆಕೆ ಕಪ್ಪು–ಬಸಿಯನ್ನು ತೆಗೆದುಕೊಂಡು ಒಳಗೆ ಹೋದಳು.

ಚಿಕ್ಕ ಮಗಳು ಚಿನ್ನಾ 'ಹಿಹೀ ಅಪ್ಪಾ' ಎಂದು ನಗುತ್ತ ಲೋಕಪ್ಪನ ತೊಡೆಯನ್ನೇರತೊಡಗಿದಳು.

'ಸರಿಯೆ ನಿನ್ದೇನು?' ಎನ್ನುತ್ತ ಸರಿಸಿ ಅವನು ಕಾಲಲ್ಲಿ ಮೆಟ್ಟನ್ನು ಹಾಕಿಕೊಂಡು ಮನೆಯಿಂದ ಹೊರಟ.

ಎಲ್ಲಿಯಾದರೂ ಅಷ್ಟು ಹಣ ಕೈಗಡ ತರಬೇಕೆಂದು ಅಂತೂ ಅವನು ಕೊನೆಗೊಮ್ಮೆ ತನ್ನ ಮನಸ್ಸನ್ನು ಒಪ್ಪಿಸಿದ. ಅದೇನೊ ಸರಿ! ಆದರೆ ಎಲ್ಲಿ ಹೋಗಬೇಕು? ಯಾರನ್ನು ಕೇಳಬೇಕು? ಇದೊಂದು ದೊಡ್ಡ ಸಮಸ್ಯೆ ಅವನಿಗೆ. ಹೋಗಿ ಕೇಳಿದರೆ ಯಾರಾದರೂ ಕೊಟ್ಟಾರೆಯೇ? ಕೊಡಲಿಲ್ಲವೆಂದರೆ ಮುಂದೇನು ಮಾಡಬೇಕು?

ಈ ವಿಚಾರ ಗೊಂದಲದಲ್ಲಿ ಸಿಕ್ಕಿಕೊಂಡ ಲೋಕಪ್ಪ ತಾನು ಯಾರಲ್ಲಿ ಹಣ ಕೇಳಬೇಕೆಂದಿದ್ದನೊ ಅವನ ಬಳಿಗೆ ಹೋದ.

'ಓಹೋ, ಬರ್ರಿ ಬರ್ರಿ, ಏನು ಅಪರೂಪಕ್ಕೆ ಬಂದಿರಿ? ಎಂದರವರು.

'ಏನೂ ಇಲ್ಲ, ಸುಮ್ಮನೆ ಸಹಜವಾಗಿ ಬಂದಿದ್ದೆ' ಎಂದು ಹೇಳಿ ಅವನ ಜೊತೆಯಲ್ಲಿ ಎಲೆಯಡಿಕೆ ಹಾಕಿಕೊಂಡು ಲೋಕಪ್ಪ ಮನೆಯ ದಾರಿ ಹಿಡಿದ.

ಅವರೆದುರು ತಾನು ಬಂದ ಕಾರ್ಯದ ಪ್ರಸ್ತಾಪವೆತ್ತಲೆ ಇಲ್ಲ ಅವನು. ಅವರನ್ನು ಕಂಡಮೇಲೆ ಹೇಗೆ ಪ್ರಾರಂಬಿಸಬೇಕು ಮುಂತಾದುವನ್ನೆಲ್ಲ ಬಾಯಲ್ಲಿ ಮೊದಲು ಹೊಂದಿಸಿಕೊಂಡು ಹೋಗಿದ್ದನೇನೊ, ನಿಜ. ಆದರೆ ಅವನನ್ನು ಕಾಣುತ್ತಲೂ ಆ ವಿಚಾರ ಅವನ ಬಾಯಿಬಿಟ್ಟು ಹೊರಗೆ ಬರಲೆ ಇಲ್ಲ. ಸಾಲ ಕೇಳುವುದೆಂದರೆ ಅವನ ನಾಲಿಗೆಗೆ ಬಹಳ ದುಮ್ಮಾನ. ಹಣ ಕೇಳದೆಯಿದ್ದಾಗ ಇರುವ ಆದರ, ಹಣ ಕೇಳಿದ ಮೇಲೆ ಉಳಿಯಲಾರದೆಂದು ಅವನು ತಿಳಿದುಕೊಂಡಿದ್ದ. ಅದಕ್ಕೆಂತಲೆ ಅವನು ಆ ವಿಚಾರ ಬಿಟ್ಟು ಸೀದಾ ಮನೆಗೆ ಬಂದು ಊರಿಗೆ ಕಾಗದ ಬರೆದು ಹಾಕಿದ ಏನು ಮಾಡಿದ್ರೂ ಅಲ್ಲಿ ಹಣ ಹುಟ್ಟುವುದು ಅಸಾಧ್ಯವೆಂದು ಅವನು ತಮ್ಮ ಅಣ್ಣನವರಿಗೆ ತಿಳಿಸಿದ.

ಎರಡು ಮೂರು ದಿನ ಲೋಕಪ್ಪ ನಿಶ್ಚಿಂತವಾಗಿದ್ದ. ಆದರೆ ಅವರು ಇಷ್ಟಕ್ಕೆ ಬಿಡುವ ಕುಳಗಳಲ್ಲ. ಹಿಡಿವದ್ದನ್ನು ಬಿಡದ ಚೇಡನ ಜಾತಿ ಅವರದು. ಮತ್ತೆ ಅವರ 'ಚೋರು' ಬಂತು. ಸ್ವತಃ ಆಳು ಬಂದು ಸಂದೇಶ ಮುಟ್ಟಿಸಿ ಹೋದ.

ಲೋಕಪ್ಪನ ಹೃದಯದ ಕುಲುಮೆಯಲ್ಲಿ ಮತ್ತೆ ಕಲಮಲವೆದ್ದಿತು.

'ಹೀಗೆ ಚಿಂತೆ ಮಾಡಿದರೇನ್ರಿ ?' ಎಂದು ಸಾವಕ್ಕ ಬಂದು ಗಂಡನನ್ನು ವಿಚಾರಿಸಿದಳು. 'ಹೇಳಬಾರದೆ?' ಎಂದು ಆಕೆ ಆತನನ್ನು ಪೀಡಿಸಿದಳು.

ಲೋಕಪ್ಪ ಅವಳೆದುರು ಎಲ್ಲವನ್ನೂ ಉಸುರಿಕೊಂಡ.

'ಏನು ಮಾಡಲೇ ? ನನಗೆ ಧರ್ಮಸಂಕಟ ಅತ್ತ ಅವರ ಸಂಬಂಧವನ್ನೂ ಹರಿದುಕೊಳ್ಳಲಾರೆ. ಇತ್ತ ನನ್ನಷ್ಟಕ್ಕೆ ನಾನು ಇರಬೇಕೆಂದರೂ ಸಾಧ್ಯವಿಲ್ಲ. ಏನಾದರೂ ಒಡಹುಟ್ಟಿದ ಕರುಳು ಅವರು' ಎಂದು ಅವನು ಹೇಳುತ್ತಲೂ ಅವನ ಕಣ್ಣಿನಿಂದ ಕಂಬನಿ ಹೊರಚೆಲ್ಲಿದವು.

ಅಲ್ಲಿ ಊರಿನಲ್ಲಾಗಲೆ ಇಷ್ಟರಲ್ಲಿ ಇವರ ಸಹಸ್ರ ನಾಮಾವಳಿ ಪ್ರಾರಂಭವಾಗಿತ್ತು.

'ಇನ್ನೊಬ್ಬರ ಅನುವು–ಆಪತ್ತಿನ ಚಿಂತೆಯೇಕೆ ಅವರಿಗೆ, ತಿಂದು ಮೆರೆಯುತ್ತಾರೆ–ಮೆರೆಯಲಿ. ಇದು ಎಷ್ಟು ದಿನ ನಡೆದೀತೊ ನಾವೂ ನೋಡುತ್ತೇವೆ' ಎಂದು ಅವನ ಹಿರಿಯ ಅಣ್ಣನವರೆ ಗದ್ದಲ ಮಾಡಿದರಂತೆ.

ಇಷ್ಟು ದಿನಗಳವರೆಗೆ 'ಅವರೊಬ್ಬರ' ಮೇಲಿನ ಭಯದಿಂದ ತಮ್ಮ ಹೊಟ್ಟೆಯಕಿಚ್ಚನ್ನು ಮುಚ್ಚಿಕೊಂಡಿದ್ದ ಸಾವಕ್ಕನ ನಾದಿನಿ ನೆಗೆಣ್ಣೆಯವರಿಗೆ ಈಗ ಅದರ ಉಚಿತ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟಂತಾಯಿತು.

ಸಾವಕ್ಕ ಅಂತೂ ಕೊನೆಗೊಮ್ಮೆ ಗಟ್ಟಿ ಮನಸ್ಸು ಮಾಡಿದಳು. ತನಗೆ ಹೊಳೆದ ಒಂದು ದಾರಿಯನ್ನು ಲೋಕಪ್ಪನಿಗೆ ಸೂಚಿಸಿದಳು. ಅದನ್ನು ಕೇಳಿ ಅವನ ಹೃದಯ ಬಾಯಿಗೇ ಬಂದಿತ್ತು.

'ಎಂಥ ತ್ಯಾಗವೆ ಇದು?' ಎಂದ ಅವನು.

ತಿಂಗಳುಗಟ್ಟಲೆ ಆರೈಕೆ ಮಾಡಿ, ಅದರ ಹೈನ ನಾಲ್ಕು ದಿನ ಕೂಡ ಪೂರ್ತಿ ಉಣ್ಣದೆ ಸಾವಕ್ಕ ತನ್ನ ಆಕಳನ್ನು ಮಾರಿಬಿಡಲು ಸಮ್ಮತಿಯನ್ನಿತ್ತಳು.

ಹೀಗೆ ಸಾವಕ್ಕನ ದುಡಿಮೆಯ ಫಲ ಮಾರಿಹೋಯಿತು. ವಾರಕ್ಕೆ ಒಂದೆರಡು ರೂಪಾಯಿ ಸಂಪಾದಿಸಬಹುದೆಂದು ಆಕೆ ಕಟ್ಟಿಕೊಂಡಿದ್ದ ಕನಸು ಒಡೆದು ಪುಡಿಪುಡಿಯಾಗಿ ಹೋಯಿತು!

೩

ಬಳಿಯಲ್ಲಿ ಹಣ ಇಟ್ಟುಕೊಂಡೂ ಇಷ್ಟೊಂದು ಸೋಗು ಹಾಕಿದನಲ್ಲ ಎಂದು

ಹಿರಿಯ ಅಣ್ಣನವರು ಹಣ ಬಂದಮೇಲೆ ವ್ಯಾಖ್ಯೆ ನುಡಿದರು.

'ಇದೆಲ್ಲ ಅವಳು ಊದಿದ ಮಂತ್ರ.' ಎಂದು ಹೆಣ್ಣಿನ ಪಡೆ 'ಅವರ' ಮಾತಿನ ಹಿಂದೆಯೆ ದನಿಯೆತ್ತಿತು.

ತವರುಮನೆಯಿಂದ ಕರೆಯಲು ತಮ್ಮ ಬಂದಿದ್ದ– ವರುಷಕ್ಕೊಮ್ಮೆ ನಡೆಯುವ ತೇರಿನುತ್ಸವಕ್ಕೆಂದು. ತನ್ನ ಬಾಲ್ಯದ ಗೆಳತಿಯರು ಬಂಧುಬಳಗ ಮುಂತಾದವರನ್ನೆಲ್ಲ ನೋಡಿಕೊಂಡು ಬಂದಂತಾಯಿತೆಂದು ಬಗೆದು, ಉತ್ಸವದ ನೆವ ಮುಂದೆ ಮಾಡಿಕೊಂಡು ಸಾವಕ್ಕ ತೌರೂರಿಗೆ ನಡೆದಳು.

ರಥೋತ್ಸವದ ನಂತರ ಎಂಟು ದಿನಗಳವರೆಗೆ ಆಕೆ ಅಲ್ಲಿ ನಿಂತದ್ದೂ ಆಯಿತು. ಆಮೇಲೆ ಅವಳು ಮತ್ತೆ ಪಯಣಕ್ಕೆ ಅಣಿಯಾಗಿ ನಿಂತಳು. ಅವಳ ತಾಯಿಯವರೇನೊ ಜುಲುಮೆ ಮಾಡಿದರಂತೆ – ಒಂದೆರಡು ದಿನ ಉಳಿದುಹೋಗೆಂದು. ಗಂಡ ದಿನದಿನವೂ ಬೆಳಗೂ ಸಂಜೆ ಕೈ ಸುಟ್ಟುಕೊಳ್ಳುವುದನ್ನು ತಿಳಿದೂ ತಿಳಿದೂ ಅವಳು ಹೇಗೆ ನಿಂತಾಳು? ಅವಳ ಮನಸ್ಸು ಎಷ್ಟೂ ಒಪ್ಪಲಿಲ್ಲ.

'ಹೇಗಿದ್ದರೂ ಇಲ್ಲೇ ಬಂದೀ. ಮನೆಗೆ ಬಂದುಹೋಗಲಿಲ್ಲ ಅಂದಾರು. ನಿಮ್ಮ ಊರಿಗೆ ಹೊಕ್ಕು ಹೋಗು' ಎಂದು ಅವಳಿಗೆ ಹೇಳಿ ಸಾವಕ್ಕನ ತಾಯಿ ಆಕೆಯನ್ನು ಬೀಳ್ಕೊಟ್ಟಳು.

ಆಕೆ ಊರಿಗೆ ಹೋದಾಗಲೂ ಅವರ ಮನೆಯವರ ಪೈಕಿ ಯಾರೂ ಅವಳೊಡನೆ ಸರಿಯಾಗಿ ಮಾತನಾಡಲಿಲ್ಲ. ಅವಳುಟ್ಟ ಇಳಕಲ್ಲ ತೋಪಿನ ಸೀರೆಯ ಮೇಲೆಯೆ ಎಲ್ಲರದೂ ಕಣ್ಣು. 'ಏನು ಡೌಲವ್ವಾ ಇವಳದು' ಎಂದು ಅವರೆಲ್ಲ ತುಂಬ ಬಾಯಿ ಮೇಲೆ ಕೈಯಿಟ್ಟುಕೊಂಡರು. ಆ ಸೀರೆ ಅವಳು ತರಿಸಿಕೊಂಡದ್ದೆಂದೇ ಅವರ ಭಾವನೆ. ಅಕ್ಕನ ಮೇಲಿನ ಪ್ರೀತಿಗಾಗಿ ಅವರ ತಮ್ಮ ಉಡಿಸಿದ್ದೆಂದು ಅವರಿಗೆ ಹೇಗೆ ತಿಳಿದೀತು?

ಸಾವಕ್ಕ ಅಲ್ಲಿಗೆ ಬಂದುಹೋದಂದಿನಿಂದ ಅವಳ ಮೇಲೆ ಅವರು ಕಾರುತ್ತಿದ್ದ ಮಾತ್ಸರ್ಯ ಇನ್ನೂ ಹೆಚ್ಚಾಯಿತು. ಸರಿ, ಮಾಡಬೇಕೇನು? ಸಾವಕ್ಕ ಅಲ್ಲಿಗೆ ಹೋಗಿದ್ದರೂ ಒಂದು ಮಾತು, ಬಿಟ್ಟರೂ ಒಂದು ಮಾತು. ಅಂತೂ ಏನಾದರೂ ಒಂದು ಬಂದೇ ಬರುತ್ತಿತ್ತು ಎಂದಮೇಲೆ ಅವುಗಳಲ್ಲಿ ಯಾವುದಾದರೂ ಒಂದನ್ನು ಮೈಮೇಲೆ ಹೊತ್ತುಕೊಳ್ಳಲು ಸಿದ್ಧವಾಗಬೇಕು. ಅಸೂಯೆಗೆ ಅನಾದರವೆ ಮದ್ದು ಎಂದುಕೊಂಡು ಸುಮ್ಮನಾಗಬೇಕು.

ಆಕೆ ತಮ್ಮ ಕೆಲಸದ ಊರಿಗೆ ಬಂದು ಗಂಡನನ್ನು ಸೇರಿಕೊಂಡ ಮೇಲೆ ಅವರು ಅಲ್ಲಿ ಬಹಳ ದಿನ ನಿಲ್ಲುವಂತಾಗಲಿಲ್ಲ. ಲೋಕಪ್ಪನಿಗೆ ಆ ಊರಿನಿಂದ ಬೇರೆಯ ಸ್ಥಳಕ್ಕೆ ವರ್ಗವಾಯಿತು.

ಕೆಲವರಿಗೆ ವರ್ಗಾವರ್ಗಿಯೆಂದರೆ ಮುಳ್ಳು ಹಾಸಿಗೆಯ ಮೇಲೆ ಮಲಗಿದಂತೆ! ಪಾಪ,

ಕಡಿಮೆ ಸಂಬಳದ ನೌಕರರ ಹಾಡು ಯಾವಾಗಲೂ ಹೀಗೆಯೆ. ಏನೊ ಒಂದು ಸ್ಥಳದಲ್ಲಿ ಹೊಂದಿಕೊಂಡೆವು ಎನ್ನು ಹೊತ್ತಿಗೆ ಅವರು ಪುನಃ ಮುಂದಿನ ಊರಿನ ಯೋಚನೆ ಮಾಡಬೇಕು. ಸ್ಥಳದಿಂದ ಸ್ಥಳಕ್ಕೆ ಮನೆಯನ್ನು ಸಾಗಿಸುವ ಹಣದ ಚಿಂತೆ ಬೇರೆ ಅವರಿಗೆ.

ತಿಂಗಳ ನಡುವೆಯೆ ವರ್ಗವಾದರೆ ಲೋಕಪ್ಪನೇನು ಮಾಡಬೇಕು? ಅವನೇನು ಕಿಸೆ ತುಂಬಿದ ಮನುಷ್ಯನೆ ? ಊರಲ್ಲಿ ನೋಡಿದರೆ ಇನ್ನೂ ಚೂರು ಚಾರು ಕೊಡಕೊಳ್ಳಿ ಇದೆ. ಮುಂದಿನ ಊರಿಗೆ ಹೋದರೆ ಹೊಸ ಆರಂಭ ಹೂಡಬೇಕು. ಹೊಸ ಪರಿಚಯ ಮಾಡಿಕೊಳ್ಳಬೇಕು. ಹೊಸ ಆವರಣ ಕಟ್ಟಿಕೊಳ್ಳಬೇಕು.

ಲೋಕಪ್ಪನಿಗೆ ಇದೆಲ್ಲ ಯೋಚನೆಗಿಟ್ಟುಹೋಯಿತು. ಪಾರಾಗುವ ದಾರಿ ಏನಾದರೂ ಕಾಣಬೇಕಾದರೆ ಅವನು ಮತ್ತೂ ಸಾವಕ್ಕನ ನೆರವನ್ನು ಸಂಪಾದಿಸಬೇಕು. ತನ್ನದೆಂದು ಉಳಿದುಕೊಂಡಿದ್ದ ಒಂದೆ ಒಂದು ಬಂಗಾರದ ವಸ್ತು, ತನ್ನ ಮಮತೆಯ ಒಡವೆ, ಏಕಾವಳಿ ಸರವನ್ನು ಆಕೆ ಕೊರಳಿಂದ ತೆಗೆದು ಗಂಡನ ಕೈಯಲ್ಲಿತ್ತಳು.

ಮಾರಿದರೆ ಪುನಃ ಮಾಡಿಸುವುದು ಸಾಧ್ಯವಾಗಲಾರದೆಂದು ಒತ್ತೆಯಿತ್ತು ಹಣ ತರುವುದೇ ಸರಿಯೆಂದೂ ನಾಲ್ಕೈದು ತಿಂಗಳಲ್ಲಿ ಅದರ ಹಣ ಭರ್ತಿ ಮಾಡಿ ತಿರುಗಿ ಬಿಡಿಸಿಕೊಂಡು ತರಬೇಕೆಂದೂ ಗಂಡಹೆಂಡರಿಬ್ಬರೂ ಮಂತ್ರಾಲೋಚನೆ ಮಾಡಿ ಒಂದು ನಿರ್ದಿಷ್ಟವಾದ ನಿರ್ಧಾರಕ್ಕೆ ಬಂದರು.

ಅಂತೂ ಕೊನೆಗಾದರೂ ಹೊಸ ಊರಿನ ಹೊಸ ಜನರ ಮಧ್ಯದಲ್ಲಿ ಲೋಕಪ್ಪ ತನ್ನ ಸಂಸಾರದ ಒಲೆಯನ್ನು ಹೂಡಿದ !

೪

ಆ ಏಕಾವಳಿ ಸರವನ್ನು ಒತ್ತೆಯಿಟ್ಟ ಸುದ್ದಿ ಹೇಗೋ ಅಣ್ಣಾನವರ ಕಿವಿಯನ್ನು ಮುಟ್ಟಿತು. ಅವರಿಗೆ ಸುವರ್ಣದ ಸಂಧಿ ಸಿಕ್ಕಂತಾಯಿತು. ಹೊರಟುಬಿಟ್ಟರು. ಏನೊ ಮಸಲತ್ತು ಮಾಡಿ ಲೋಕಪ್ಪ ಕಳಿಸಿಕೊಟ್ಟಿದ್ದಾನೆ ಎಂದು ಮಂಕುಬೂದಿ ಚೆಲ್ಲಿ ಆ ಒತ್ತಿಯನ್ನು ಮುರುಗಡೆಯನ್ನು ಮಾಡಿಕೊಂಡರು.

'ಪಾಪ, ಅಣ್ಣಾ. ಸುಳ್ಳೇತಕ್ಕೆ ಹೇಳಿಯಾನು?' ಎಂದು ನಂಬಿ ಆ ಜನ ಉಳಿದ ಹೆಚ್ಚಿನ ಹಣವನ್ನು ಅವರ ಕೈಗೆ ತೆತ್ತು ಸುಮ್ಮನೆ ಕುಳಿತರು.

ಹಂಸಭಾವಿ ಎಂದರೆ ಮಲೆನಾಡಿನ ಸೆರಗು ಎಂದು ಹೇಳುತ್ತಾರೆ. ಅದೇನು ಸೆರಗೂ ಅಲ್ಲ, ಚುಂಗೂ ಅಲ್ಲ; ಪೂರ್ತಿ ಮಲೆನಾಡೇ. ಆ ಮಾತು ಒಪ್ಪಿಗೆಯಿಲ್ಲದಿದ್ದರೆ ಮಲೆನಾಡನ್ನು ಸೂಚಿಸುವ ಯಂತ್ರ ಇದೆಯಲ್ಲ–ಚಳಿಜ್ವರ–ಬೇಕಾದರೆ ಅದರ ಮುಖಾಂತರ ಕಂಡುಕೊಳ್ಳಬಹುದು. ಆಗ ಸಂಶಯ ನಿವಾರಣೆಯಾದೀತು.

ಲೋಕಪ್ಪನಿಗೆ ಅಲ್ಲಿಯ ಆ ಶೀತದ ಹವೆ ಹಿಡಿಯಲಿಲ್ಲ. ದಿನ ತಪ್ಪಿ ದಿನ ಉರಿ

ಬಂದು ಕಾಯತೊಡಗಿದ್ದವು. ಒಂದು ದಿನ ಕೆಲಸಕ್ಕೆ ಹೋಗಬೇಕು. ಒಂದು ದಿನ ಮೂಲೆಯನ್ನು ಹಿಡಿದು ಮಲಗಬೇಕು. ಒಂದು ದಿನ ಬಿಟ್ಟು ಒಂದು ದಿನ ಉರಿ ಕಾಯ್ದರೂ ಶಕ್ತಿ ಉಡುಗದೆ ಇದ್ದೀತೇನು? ಲೋಕಪ್ಪ ಬಹಳ ನಿತ್ರಾಣನಾದ. ಅಲ್ಪಸ್ವಲ್ಪ ಔಷಧೋಪಚಾರ ನಡೆದ ಮೇಲೆ ಅವನಿಗೆ ಏನೊ ಸ್ವಲ್ಪ ಗುಣ ಕಂಡಂತೆ ತೋರಿತು. ಕಾಯಿಲೆ ವಾಸಿಯಾದರೂ ಕಾಹಿಲೆಯ ಪ್ರಭಾ ಅಡಗಬೇಕಾದರೆ ಕಾಹಿಲೆಯ ಎರಡು ಮೂರು ಪಟ್ಟು ಅವಧಿಯಾದರೂ ಬೇಕು. ಲೋಕಪ್ಪನಿಗೆ ಗುಣವಾಯಿತು ಎನ್ನುವ ಹೊತ್ತಿಗೆ ಒಂದೊಂದೆ ಹುಡುಗರಿಗೆ ಆ ಪಿಡುಗು ತಗುಲಿತು.

ಸಾವಕ್ಕ ಎಲ್ಲರ ಉಪಚಾರ ಯೋಗಕ್ಷೇಮ ನೋಡಿಕೊಂಡು ಬಹಳ ಸುಸ್ತಾಗಿ ಹೋದಳು. ಅವಳ ಸರತಿಯೇನೂ ತಪ್ಪಲಿಲ್ಲ. ಚಳಿಜ್ವರದ ಪ್ರಸಾದ ಅವಳಿಗೂ ಲಭಿಸಿತು.

ಲೋಕಪ್ಪನ ಮೈಯಲ್ಲೇ ನಿತ್ರಾಣ. ಸಾವಕ್ಕನಂತೂ ಗಟ್ಟಿಯಾಗಿಯೇ ಮಲಗಿಬಿಟ್ಟಳು. ಹುಡುಗರಂತೂ ಉರಿಯ ಹೊಡೆತಕ್ಕೆ ಸಿಕ್ಕು ಸುಂದಾಗಿಹೋದವು. ಬೇನಿಗರ ಆರೈಕೆ ಅನುಪಾನ ನೋಡಿಕೊಳ್ಳುವವರು ಯಾರು?

ಊರಿಂದ ಯಾರನ್ನಾದರೂ ಕಳಿಸಿಕೊಡಬೇಕು ಎಂದು ಲೋಕಪ್ಪ ತಮ್ಮ ಅಣ್ಣನಿಗೆ ಕಾಗದ ಬರೆದು ಕೇಳಿಕೊಂಡ.

'ಓಹೋ ಈಗ ಬೇಕಾಯಿತೇನೋ ಸಾವು!' ಎಂದು ಆ ಹೆಣ್ಣು ತಲೆಗಳೆಲ್ಲ ಸೇರಿ ಸಾವಕ್ಕನ ಪಾಡನ್ನು ಕುರಿತು ಪರಿಹಾಸ್ಯ ಮಾಡಿ ನಕ್ಕವು.

ಸಾವಕ್ಕ–ಲೋಕಪ್ಪನವರ ಬಳಿಗೆ ಹೋಗಲು ಯಾರೊಬ್ಬರೂ ಸಿದ್ಧರಾಗಲಿಲ್ಲ.

ಬರಬರುತ್ತ ಸಾವಕ್ಕನ ಸ್ಥಿತಿ ಉಲ್ಬಣಗೊಳ್ಳತೊಡಗಿತು.

ಅವಳ ಆರೋಗ್ಯವನ್ನು ಕುರಿತು ಲೋಕಪ್ಪನಿಗೆ ಚಿಂತೆಯಿಟ್ಟಿತು.

'ಇಂಜೆಕ್ಷನ್ ಕೊಡಿಸಿರಿ, ಎಲ್ಲ ಸರಿಯಾಗ್ತದ' ಎಂದು ಕೂಡಿದ ಮಂದಿ ಅವನಿಗೆ ಸಲಹೆ ಹೇಳಿದರು. ಸಮಾಧಾನ ಮಾಡಿದರು. ಅದೆಲ್ಲ ಆ ದಿನದ ಮಟ್ಟಿಗೆ. ಕೇವಲ ಕ್ಷಣಿಕ ಶಾಂತಿ.

ಹದಿನೈದು ದಿನ ಅವನು ಕೆಲಸಕ್ಕೇ ಹೋಗಿಲ್ಲವೆಂದ ಮೇಲೆ ಸಂಬಳದ ಪ್ರಶ್ನೆಯೇ ಇಲ್ಲ. ಸೂಜಿ –ಮದ್ದು ಕೊಡಿಸಬೇಕೆಂಬ ಸೂಚನೆಯೇನೋ ಮಾನ್ಯ, ಸೂಜಿಮದ್ದಿಗೆ ಹಣವೆಲ್ಲಿಂದ ತರಬೇಕು? ಲೋಕಪ್ಪ ಹಾಸಿಗೆಯಲ್ಲಿ ಬಿದ್ದು ನೀರವವಾಗಿ ಕಣ್ಣೀರು ಕರೆದು ಹಾಸಿಗೆಯನ್ನು ತೋಯಿಸಿದ.

ಸಾವಕ್ಕ ಮಾತ್ರ ಅವನ ಪಕ್ಕದಲ್ಲಿ ಎಲವು ತೊಗಲಾಗಿ ಮಲಗಿಕೊಂಡಿದ್ದಳು. ನಿದ್ದೆ ಹತ್ತಿರಲಿಲ್ಲ ಅವಳಿಗೆ. ಲೋಕಪ್ಪನ ಕಡೆಗೇ ನೋಡುತ್ತಿದ್ದರೂ ಅವಳ ಕಣ್ಣಿನಲ್ಲಿ ತೇಜಸ್ಸೇ ಇರಲಿಲ್ಲ. ಉಳಿದ ನಾಲ್ಕು ಹುಡುಗರೂ ಸಾವಕ್ಕನ ಹಿಂದೆ ಗೂಡಿಸಿಕೊಂಡು

ಮಲಗಿದ್ದವು. ಚಳಿಯ ಗದ್ಗದಕ್ಕೆ ಸಿಕ್ಕು ಅವು ಆಕುಂಚನಗೊಂಡು ಹೋಗಿದ್ದವು.

ಲೋಕಪ್ಪನಿಗೆ ಏನೊ ನೆನಪಿಗೆ ಬಂದಿತು. ಮುಳುಗುವ ಮನುಷ್ಯನ ಆಸರಕ್ಕೆ ಒಂದು ಬೆಂಡು ಸಿಕ್ಕರೆ ಆನಂದ ಅವನದಾಯಿತು. ಬೇನಿಗರನ್ನು ಅವರ ಪಾಡಿಗೆ ಬಿಟ್ಟುಕೊಟ್ಟು ಅವನು ಒಂದು ರೂಪಾಯಿ ಎಲ್ಲಿಯೊ ಕೈಗಡ ಹುಟ್ಟಿಸಿಕೊಂಡು ಮಧ್ಯಾಹ್ನ ಮೋಟಾರಿನಲ್ಲಿ ಹೋದ. ಮತ್ತೆ ಸಂಜೆಗೆ ಮರಳಿದ. ಏಕಾವಳಿ ಯಾರ ಕೊರಳಲ್ಲಿ ಬಿತ್ತೊ! ಅವನ ಹೆಗಲು ಮುರಿದು ಬಿದ್ದಂತಾಯಿತು.

ಅಂತೂ ಅವನು ಮನೆಯನ್ನು ಹೇಗೊ ಹುಡುಕಿಕೊಂಡು ಬಂದ. ಯಾರೊ ಪುಣ್ಯಾತ್ಮರು ಬಂದು ಮನೆಯಲ್ಲಿ ದೀಪ ಹಚ್ಚಿಹೋಗಿದ್ದರು. ಕಣ್ಣೆತ್ತಿ ನೋಡಬೇಕೆನ್ನುತ್ತಾನೆ. ಅವನಿಗೆ ಏನೂ ಕಾಣಲೊಲ್ಲದು. ಅವನಿಗೆ ಅವನ ರೆಪ್ಪೆಯ ಭಾರ. ಸಾವಕ್ಕನಿಗೆ ಇಂಜೆಕ್ಷನ್ ಕೊಡಿಸುವ ಗತಿಯೂ ಅವನಿಗಿಲ್ಲ.

ಆ ರಾತ್ರಿ ಲೋಕಪ್ಪನಿಗೆ ವಿಪರೀತ ಜ್ವರ ಏರಿಬಂದಿತ್ತು. ಮುಟ್ಟಿ ನೋಡಿದರೆ ಕೈ ಕಾಯಬೇಕು.

೫

ಅವರಿಗೆ ಬಂದೊದಗಿದ ಈ ವಿಪತ್ಪರಂಪರೆಯನ್ನು ಕಂಡು ನೆರೆಯಲ್ಲಿ ವಾಸಿಸುತ್ತಿದ್ದ ರೈತನಿಗೆ ಅನ್ನ ರುಚಿಸದಾಯಿತು.

'ನೀವು ಇಲ್ಲಿದ್ರೆ ನಿಮ್ಮನ್ನು ಯಾರು ನೋಡ್ತಾರ್ರಿ? ಸುಮ್ಮನೆ ನಿಮ್ಮೂರಿಗೆ ನಡೆಯಿರಿ. ನಾನು ಗಾಡಿಕಟ್ಟಿ ಕಳಿಸಿಬರ್ತೇನೆ' ಎಂದ ಅವನು ಕರುಣೆಗೊಂಡು.

ಲೋಕಪ್ಪ ಆ ಮಾತಿಗೆ ಮೊದಮೊದಲು ಒಪ್ಪಲಿಲ್ಲ. ಅಲ್ಲಿ ಯಾರು ನೋಡುತ್ತಾರೆ ಅವನನ್ನು ? ಮೊದಲೆ ತಿರಸ್ಕರಿಸುತ್ತಿದ್ದ ಜನ ಈಗ ಏನೆಂದಾರು? ಅವನ ಹೆದರಿಕೆಯೇನೂ ಕಾಲ್ಪನಿಕವಲ್ಲ.

ಸಾವಕ್ಕನನ್ನು ಮೆತ್ತಗೆ ಮಲಗಿಸಿದ್ದಾಯಿತು.

ಹುಡುಗರನ್ನೂ ಹೊತ್ತುಕೊಂಡು ಲೋಕಪ್ಪನ ಊರಿನ ಮಾರ್ಗವಾಗಿ ಗಾಡಿ ಹೊರಟಿತು.

ಲೋಕಪ್ಪ ಸಾವಕ್ಕನನ್ನು ಎವೆಯಿಕ್ಕದೆ ನಿರೀಕ್ಷಿಸುತ್ತ ಕುಳಿತಿದ್ದ. ತನ್ನ ಆಕೃತಿಯ ಚಿಂತೆ ಅವನಿಗೆ ಆಗ ಮರೆತುಹೋಯಿತು! ಸಾವಕ್ಕನ ಆಕಾರವನ್ನು ಕಂಡು ಅವನ ಕಣ್ಣಿನಿಂದ ಅಶ್ರುಧಾರೆ ಇಳಿಯತೊಡಗಿತು. ಹಾಗೆಯೆ ಅವನು ತನ್ನ ಮಕ್ಕಳ ಕಡೆಗೂ ದೃಷ್ಟಿಯನ್ನು ಚೆಲ್ಲಿದ. ಎಲುವಿನ ಹಂದರ ಹೊತ್ತು ಅವು ಜೀವ ಹಿಡಿದುಕೊಂಡು ಹೇಗೊ ನಿಂತಿವೆ.

ತನ್ನ ಹೆಂಡತಿಯನ್ನು ನೋಡುತ್ತಿದ್ದಂತೆಯೆ ಲೋಕಪ್ಪನ ಮುಖದಲ್ಲಿ ಗೆಲುವಿನ ಛಾಯೆ ತೇಲಿತು.

ಸಾವಕ್ಕನ ಹಣೆಯ ಮೇಲೆ ಸೊಬಗು ಕಳಕಳಿಸಿತ್ತು. ಲೋಕಪ್ಪನ ಸಂತೋಷಕ್ಕಂತೂ ಇತಿಮಿತಿಯೇ ಇಲ್ಲ. ಅವನ ಅಚ್ಚರಿಗೆ ಆಕೆ ಬಾಯ್ದೆರೆದು ಕೇಳಿದಳು.

'ಎಲ್ಲಿಗೆ'? ಎಂದು.

'ಊರಿಗೆ' ಎಂದು ಲೋಕಪ್ಪ ಹೇಳಿದ ಅದಕ್ಕೆ 'ಹೂಂ' ಎಂದಳು ಸಾವಕ್ಕ.

ಆ ಉಸಿರಿನೊಂದಿಗೇ ಅವಳ ಜೀವ ಗಾಳಿಯಲ್ಲಿ ತೇಲಿಹೋಯಿತು.

ಲೋಕಪ್ಪ ಅವಳ ಮೈಕೈ ಮುಟ್ಟಿ ನೋಡಿದ. ಅವಳ ದೇಹವನ್ನು ಅಲುಗಿಸಿ ಮಾತನಾಡಿಸಿ ನೋಡಿದ. ಅವಳು ಮಿಸುಗಲಿಲ್ಲ. ಓಕೊಡಲಿಲ್ಲ.

'ಅಯ್ಯೊ' ಎಂದು ದನಿದೆಗೆದು ಅವಳ ಮೇಲೆ ಬಿದ್ದು ಲೋಕಪ್ಪ ಗಟ್ಟಿಯಾಗಿ ಅಳತೊಡಗಿದ ಎದೆ ಬಿರಿಯುವಂತೆ. ಕಲ್ಲುಗುಂಡು ಕರಗುವಂತೆ.

ಅವಳ ನಾಲ್ಕು ಮಕ್ಕಳೂ 'ಅವ್ವಾ ಅವ್ವಾ' ಎಂದು ಅವಳ ಸುತ್ತಲೂ ಕರುಣಾಜನಕವಾಗಿ ಹಲುಬತೊಡಗಿದವು.

ಗಾಡಿ ಆ ಗೋಳಿನ ಭಾರವನ್ನು ಹೊತ್ತು ಲೋಕಪ್ಪನ ಮನೆಯ ಬಾಗಿಲಿಗೆ ಬಂದು ನಿಂತಿತು. ಅವನ ಅಣ್ಣ ತಮ್ಮಂದಿರು ಯಾರು ಮನೆಯಲ್ಲಿದ್ದಂತೆ ತೋರಲಿಲ್ಲ. ಸಾವಕ್ಕನ ನಾದಿನಿ ನೆಗೆಣ್ಣಿಯರು ಕದದ ಮರೆಯಲ್ಲಿ ನಿಂತುಕೊಂಡೆ ಹಣಿಕಿ ನೋಡಿದರು.

ತನ್ನ ರೆಪ್ಪೆ ತನಗೆ ಭಾರವಾದ ಲೋಕಪ್ಪ ತನ್ನ ಹೆಂಡತಿಯ ಹೆಣವನ್ನು ತಾನೆ ಗಾಡಿಯಿಂದ ಇಳಿಸಿಕೊಂಡ.

* * * *

# ನೆಲದ ಮಗ

"ಮೊಗಲರಾಳ್ವಿಕೆಯೋ ಇಂಗ್ಲೀಷರೋ
ಎಲ್ಲರೂ ಜಿಗಣೆಗಳೆ ನೆತ್ತರಿಗೆ"

–ಕೆ.ವಿ.ಪುಟ್ಟಪ್ಪ

ಧಾನ್ಯ ವಸೂಲಿಯ ಕ್ರಮ ಜೋರು ಜುಲುಮೆಯಿಂದ ಪ್ರಾರಂಭವಾಗಿತ್ತು. ರೆವಿನ್ಯೂ ಅಧಿಕಾರಿಗಳ ಮುಖಚರ್ಯೆಯಲ್ಲಿ ಅದ್ಭುತ ಪರಿವರ್ತನೆ ಬಂದುಹೋಗಿತ್ತು.

ಮೊದಲೆ ಹೊಟ್ಟೆತುಂಬಿದ ಜನ ಅದು! ಸುಖ ವಸ್ತು!

ಇನ್ನು ಈ ಹೊಸ ಉಪಕ್ರಮದ ಪರಿಣಾಮವಾಗಿ ಅವರ ಜೀವನದಲ್ಲಿ ತುಂಬಬೇಕೆಂದಿದ್ದ ಆಸೆ ಪರಿಪೂರ್ಣಗೊಂಡು, ಶಿಖರ ಮುಟ್ಟಿಹೋಯಿತು. ದಪ್ಪಕ್ಕಿಯ ಬದಲು ಸಣ್ಣಕ್ಕಿಯ ಅನ್ನಕ್ಕೆ ಮೊದಲಾಯಿತು. ಚಿನ್ನೀಸಕ್ಕರೆಯಾಯಿತು. ಹಾಲು ಜೇನಾಯಿತು ಎಂದಮೇಲೆ ಇನ್ನೇನು ಕೇಳುವುದು ? ಮುಖದ ಮೇಲೆ ಸೂಕ್ಷ್ಮವಾಗಿ ಕಾಣಬಹುದಾಗಿದ್ದ ಸುಕ್ಕುಗಳು ಕೂಡ ತಮ್ಮಷ್ಟಕ್ಕೆ ತಾವೆ ಮುಚ್ಚಿಕೊಂಡುಬಿಟ್ಟವು.

ಅಂತೂ ಒಂದು ಮಾತಿನಲ್ಲಿ ಅವರ ಜೀವ ಉಬ್ಬಿತು; ದೇಹ ತೂಕ ತಪ್ಪಿತು!

ಇದೇ ಕಾಲ ಕಡೆತನಕ ನಡೆದುಕೊಂಡು ಹೋಗಲಿ ಎಂದು ಅವರಲ್ಲಿ ಎಷ್ಟು ಜನ ದೇವರಿಗೆ ಹರಕೆ ಹೊತ್ತಿರುವರೊ! ಎಷ್ಟು ಜನ ದೇವರಿಗೆ ಮುಡಿಪು ಕಟ್ಟಿರುವರೊ!

ಧಾನ್ಯ ವಸೂಲಿಯ ದಾಳಿ ತಮ್ಮ ಊರಿಗೂ ತಪ್ಪಿದ್ದಲ್ಲವೆಂದು ಚೆಂದಪ್ಪನಿಗೆ ಯಾರೊ ಸುದ್ದಿಯನ್ನು ಮುಟ್ಟಿಸಿದರು. ಅದನ್ನು ಕೇಳಿ ಅವನು ಗಹಗಹಿಸಿ ನಕ್ಕ. ಮೊಲಕ್ಕೆ ಕೋಡು ಮೂಡಿದ ಕತೆಯನ್ನು ಕೇಳಿದಂತಾಯಿತು ಅವನಿಗೆ!

ಆ ಸುದ್ದಿಯಲ್ಲಿ ಚೆಂದಪ್ಪನಿಗೆ ಎಷ್ಟು ಮಾತ್ರಕ್ಕೂ ನಂಬಿಗೆ ಹುಟ್ಟಲಿಲ್ಲ. "ಛೆ, ಎಲ್ಲಿಯಾದರೂ ಉಂಟೆ? ಬಿಡ್ರೀ!" ಎನ್ನುತ್ತ ಅವನು ತನ್ನ ಎತ್ತುಗಳನ್ನು ಬಂಜರು ಹಳ್ಳದ ಹಳುವಿನ ಕಡೆಗೆ ಹೊಡೆದುಕೊಂಡು ನಡೆದ. ಅವನ ಮೀಸೆಯಲ್ಲಿ ಒಂದು ಕೊಂಕು ನಗೆ ಕುಣಿದಿತ್ತು!

೨

ಚೆಂದಪ್ಪ ಆ ರೀತಿ ಭಾವಿಸಲಿಕ್ಕೆ ಕಾರಣಗಳಿಲ್ಲದಿಲ್ಲ!

ಎರಡು ಮೂರು ವರ್ಷ ಯಾವ ಪೈರು–ಪಚ್ಚೆಯನ್ನೂ ಕಾಣದೆ ಬಿಜಾಪುರ ಇಡಿ

ಜಿಲ್ಲೆಗೆ ಕಣ್ಣೀರ ಕೂಳನ್ನು ತಿಂದು ಬರಲಾಗದ ಸವಿಯನ್ನು ಯಥೇಷ್ಟವಾಗಿ ಸವಿದು, ಸೋತು ಹೋಗಿತ್ತು, ಸಣ್ಣಾಗಿಹೋಗಿತ್ತು.

ಇನ್ನು ಇಂಥದರಲ್ಲಿ ಚೆಂದಪ್ಪನ ಊರಿನ ಸಂಕಷ್ಟದ ಸೌಭಾಗ್ಯವನ್ನು ಹೇಳುವುದೇ ಬೇಡ. ಅದು ಅವರ ಪ್ರಾರಬ್ಧ ಕರ್ಮ ಎನ್ನಬಹುದು, ಬೇಕಾದರೆ! ನಾಡಿಗೆಲ್ಲ ಸುಭಿಕ್ಷವಾದ ವೇಳೆಯಲ್ಲಿ ಕೂಡ ಅಲ್ಲಿಯ ಜನಕ್ಕೆ ಎಂದಿಗೂ ಸರಿಯಾಗಿ ಎರಡು ಹೊತ್ತು ಊಟ ಮಾಡುವ ಸ್ಥಿತಿಯಿಲ್ಲ.

ಆ ಸೀಮೆಗೆ ಮಳೆ ನಿಲುವುಕುವುದೆ ದುಸ್ತರ!

ಚೆಂದಪ್ಪನಿರುವ ಹಳ್ಳಿಗೆ ಹತ್ತು ಮೈಲು ಕೆಳಗೆ ಮಲೆನಾಡ ನೀರನ್ನು ಕುಡಿದು ಬಂದು ಮೈತುಂಬಿ ಹರಿಯುತ್ತಾಳೆ ಕೃಷ್ಣೆ! ತನ್ನ ವೈಭವದ ಅಪೂರ್ವ ಶೋಭೆಯಲ್ಲಿ!

ಆದರೆ ಆ ಊರ ಜನ ಮಾತ್ರ ಹೊಟ್ಟೆತುಂಬ ಅನ್ನವಿಲ್ಲ.

ಕೃಷ್ಣೆಯ ಗಾತ್ರವನ್ನು ನೋಡಿ ಆ ಜನದ ದೇಹ ಹಿಗ್ಗಬೇಕು! ಅವರ ಹೊಟ್ಟೆಯ ತಗ್ಗು ತುಂಬಿಕೊಳ್ಳಬೇಕು!

ಮೂರು ನಾಲ್ಕು ವರುಷದ ದುರ್ಭಿಕ್ಷ ಮುಗಿದು ಜನ ಆಗ ಸ್ವಲ್ಪ ಗೆಲುವಾಗಿದ್ದರು. ಮುಂಗಾರಿಯ ಮಳೆ ಸಮಯಕ್ಕೆ ಒದಗದೆಬಿತ್ತಿದ ಕಾಳು ನೆಲದ ಪಾಲಾಗಿ ಹೋದರೂ ಹಿಂಗಾರಿಯ ಕೊಯ್ಲಿನ ಮೇಲೆ ಜನದ ಜೀವ ಜೇನು ಕಟ್ಟಿತ್ತು. ಎದೆಯೆತ್ತರ ಜೋಳದಲ್ಲಿ ಅವರ ಬಾಳಿನ ಸೂತ್ರ ಹುರಿಗಟ್ಟತೊಡಗಿತ್ತು! ಸಿಡಿಯುವ ತುಂಬಿದ ತೆನೆಯನ್ನು ಕಂಡು ಜನ "ಹೋ" ಎಂದು ಕುಣಿದಾಡಿತು. ಇನ್ನು ಹತ್ತು ಉತ್ಸವ. ಹಬ್ಬ ಹುಣ್ಣಿಮೆ, ಮದುವೆ, ನಿಬ್ಬಣ ಮಾಡಬಹುದೆಂದು ಇದುವರೆಗೆ ಮಲಗಿ ನಿದ್ರಿಸುತ್ತಿದ್ದ ಅವರ ಆಸೆಗಳೆಲ್ಲ ಎಚ್ಚರಗೊಂಡು ಎಣಿಕೆ ಹಾಕತೊಡಗಿದವು. ಮೂರು ವರುಷದ ಬರಗಾಲ ಮರೆತುಹೋಯಿತು.

ಆದರೆ ದೈವ ಕುರುಡು. ಕೊಟ್ಟೆ ಎಂದು ಆಸೆಹುಟ್ಟಿಸಿ ಮರುಕ್ಷಣ ಕಸಿದುಕೊಂಡುಬಿಡುವುದು!

ಅಂತೂ ಜೀವನ ಪಥ ಅನಿಶ್ಚಿತ!

ಇನ್ನು ಒಕ್ಕಲು ಮಾಡಬೇಕು. ಪೈರು ಹದಕ್ಕೆ ಬಂತು ಎನ್ನುವ ಹೊತ್ತಿಗೆ ಮಳೆ – ಎಲ್ಲಿ ಅಡಗಿತ್ತೊ ಏನೊ ಅದುವರೆಗೆ – ಒಂದೇ ಸವನೆ ಇಳಿಯತೊಡಗಿತು. ಐದಾರು ದಿನ ಹೊಳಪಾಗಲೇ ಇಲ್ಲ!

ಆ ಮಳೆಯ ನೀರಿನೊಂದಿಗೆ ಜನದ ಕಣ್ಣೀರೂ ಬೆರೆತುಕೊಂಡಿತು.

ಚೆಂದಪ್ಪನ ತಲೆಯ ಮೇಲೆ ಆಕಾಶವೆ ಕಳಚಿ ಬಿದ್ದಂತಾಯಿತು. ಮೂರು ನಾಲ್ಕು ವರ್ಷ ಗಂಜಿಯ ಮೇಲೆ ತೇಲಿಕೊಂಡು ಬಂದ ತನ್ನ ಸಂಸಾರ ಆಗ ಮುಳುಗಿ ನೀರು

ಪಾಲಾಗಿ ಹೋಗುವಂತೆ ತೋರಿತು ಅವನಿಗೆ! ಎರಡು ಕಡೆಯ ಹಳ್ಳಗಳೂ ಬಂದು ಮಿಲನವಾಗುವ ಸಂದುಕಟ್ಟಿನ ಹೊಲ ಆತನದು ! ಬೆಳೆ ನಲಿಯುತ್ತಿತ್ತು. ಎರಡು ಕಡೆಯ ಹಳ್ಳಗಳೂ ದಿನದಿನಕ್ಕೆ ಒಂದೊಂದು ಚೆಂದವಾಗಿ ಮೇಲೇರಿ ಬರುತ್ತಿದ್ದವು. ಮಳೆ ಬಿಟ್ಟೂ ಬಿಡದೆ ಹಾಗೇ ನಿಷ್ಕರುಣವಾಗಿ ಸುರಿಯುತ್ತಿತ್ತು. ಹಳ್ಳದ ನೀರು ಏರಿ ಬಂದಂತೆ ಒಂದೊಂದು ಭಾಗ ಮುಳುಗಿ ಕಾಣದಂತಾಗುತ್ತಿತ್ತು.

ಮಳೆಯೆನ್ನದೆ ಹಗಲು ರಾತ್ರಿಯೆನ್ನದೆ ಚೆಂದಪ್ಪ ಅಲ್ಲಿಯೆ ಕಾಯುತ್ತ ನಿಂತುಕೊಳ್ಳುವನು. ಹಳ್ಳ ಯಾವ ಹೊತ್ತಿಗೆ ನಿಂತೀತೊ ಎಂದು ನೀರು ಹರಿದು ಬರುವ ದಿಕ್ಕಿನಲ್ಲಿ ನೋಟ ಹರಿಯುವವರೆಗೆ ತನ್ನ ದೃಷ್ಟಿಯನ್ನೋಡಿಸುವನು. ಮಳೆ ಯಾವ ಯಾವ ಹೊತ್ತಿಗೆ ನಿಂತೀತೋ ಎಂದು ಕುತೂಹಲಗೊಂಡು ಅವನು ಮುಗಿಲಿಗೆ ತನ್ನ ಕಣ್ಣಿನ ನಿಚ್ಚಣಿಕೆ ಹಾಕಿ ನೋಡುವನು.

ಶೈತ್ಯ ದೊರೆಯುತ್ತಿದ್ದರೂ ಚೆಂದಪ್ಪನ ಹೊಟ್ಟೆಯ ಉರಿ ನಂದಲಿಲ್ಲ! ತೆನೆ ಒಂದೊಂದಾಗಿ ಮುಳುಗಿದಂತೆ ತಿನ್ನುವ ತುತ್ತನ್ನು ಕಸಿದುಕೊಂಡು ವೇದನೆ, ಜೀವನಾಡಿಯನ್ನು ಒಂದೊಂದಾಗಿ ಕತ್ತರಿಸಿದ ಪ್ರಾಣಸಂಕಟ, ಚೆಂದಪ್ಪನಿಗೆ!

ಈ ಹಿಂದೆ ಐದು ಚೀಲ ಕಾಳನ್ನು ಕೈಗಡ ತಂದು ತಿಂದದ್ದಾಗಿದೆ. ಅವರಿಗೆ ಸಲ್ಲಬೇಕಾದ ಆ ಸಾಲವನ್ನು ಈಗ ಮುಟ್ಟಿಸಬೇಕು. ಇನ್ನು ಮುಂದಿನ ಸುಗ್ಗಿ ಬರುವವರೆಗೆ ತನ್ನ ಮನೆಯ ಒಂಭತ್ತು ಜೀವ ಬದುಕಿ ಜೀವ ಹಿಡಿದುಕೊಂಡಿರಬೇಕು. ಕಟ್ಟಿಕೊಂಡ ಜನವನ್ನು ಕಡಿಮುಹಾಕಲಿಕ್ಕೆ ಬರಬಹುದಾದರೆ ನಿಶ್ಚಿಂತವಾಗಿರಬಹುದಿತ್ತು! ಆದರೆ ಅದು ಹೇಗೆ ಸಾಧ್ಯ?

ಅದೆಲ್ಲ ನೆನಪು ಮಾಡುತ್ತ ಬಂದಂತೆ ಚೆಂದಪ್ಪನ ಕೈಕಾಲೇ ಹೋದಂತಾದವು. ಮೊದಲೆ ಶಿಥಿಲವಾಗಿದ್ದ ಅವನ ಬಗ್ಗೆ ದಿಕ್ಕುಗೆಟ್ಟುಹೋಯಿತು.

ಮಳೆ ಅಂತೂ ಕಡೆಗಾದರೂ ಒಮ್ಮೆ ನಿಂತಿತು!

ಕೈಗೆ ಸಿಕ್ಕಷ್ಟನ್ನು ಬಾಚಿಕೊಂಡು ಬರಲು ಜನ ಹೊಲಕ್ಕಿಳಿಯಿತು ಆ ಕೆಸರಿನಲ್ಲಿಯೆ! ಕೆಲವರಿಗೆ ಮುಂದಿನ ಗಂಜಿಗಾಯಿತು. ಇನ್ನು ಕೆಲವರಿಗೆ ಆರೊಂಬತ್ತು ತಿಂಗಳು ಸಾಲುವಷ್ಟು! ಒಟ್ಟಿನಲ್ಲಿ ಮಾತ್ರ ಜನಕ್ಕೆ ಅರೆಹೊಟ್ಟೆ ಮತ್ತೂ ತಪ್ಪಲಿಲ್ಲ. ಕೊನೆಗೂ ತಪ್ಪಲಿಲ್ಲ!

ಚೆಂದಪ್ಪ ತನ್ನ ತಂದೆ ತಾಯನ್ನು. ಹೆಂಡಿರು ಮಕ್ಕಳನ್ನು ಕಟ್ಟಿಕೊಂಡು ಭಗೀರಥ ಪ್ರಯತ್ನ ಮಾಡಿದನೆಂತಲೆ ಹತ್ತು ಚೀಲ ಕಾಳು ಹಾಗೂ ಹೀಗೂ ಕೂಡಿ ಬಂದವು!

ಇಂಥ ಬೆಳೆ ಬಂದ ಹೊತ್ತು ಸರಕಾರ ಧಾನ್ಯದ ಒತ್ತಾಯದ ಖರೀದಿ ನಡೆಸುತ್ತದೆಯೆಂದು ಹೇಳಿದರೆ ಚೆಂದಪ್ಪ ನಂಬುವುದು ಹೇಗೆ ಸಾಧ್ಯ? ಅದಕ್ಕೆಂತಲೆ ಅವನು ಆಗ ನಕ್ಕದ್ದು.

ಇನ್ನುಳಿದ ರೈತ ಜನರ ಭಾವನೆಯು ಅವನಂತೆಯೆ!

ಮೂರು ನಾಲ್ಕು ವರ್ಷ ಜನ ಸಾಯುತ್ತಿದ್ದರೂ, ಬದುಕಿದ್ದೀರಾ ಎಂದು ಉಪಚಾರಕ್ಕಾದರೂ ಕೇಳುವುದನ್ನು ಮರೆತು ಮಲಗಿ ನಿದ್ರಿಸುತ್ತಿದ್ದ ಸರಕಾರ, ಈಗ ಒಮ್ಮೆಲೆ ಚುರುಕಾಗಿ ಧಾನ್ಯ ಸಂಗ್ರಹ ನಡೆಸಿದರೆ ಸುಳ್ಳಿರಬಹುದು ಎಂದು ಆ ಜನ ತರ್ಕಿಸುವುದೇನೂ ತಪ್ಪಲ್ಲ!

೩

ಧಾನ್ಯ ವಸೂಲಿಯ ಸುದ್ದಿ ಬಂದ ಮೂರು ನಾಲ್ಕು ದಿನದ ಮೇಲೆ ಚೆಂದಪ್ಪನ ಹಳ್ಳಿಗೆ ಅಧಿಕಾರಿಗಳು ಒಮ್ಮೆ ಬಂದು ಹೋದರು. ಉಳಿದ ಜನರೇನೋ ತುಂಬಾ ಅಂಜಿಕೊಂಡಿದ್ದರು. ಚೆಂದಪ್ಪ ಮಾತ್ರ ಏನೊಂದೂ ಅಂಜಿಕೊಳ್ಳಲಿಲ್ಲ. "ಹೆಚ್ಚಿಗೆ ಬೆಳೆದ ಗೌಡ, ಕುಲಕರ್ಣಿ, ಶೆಟ್ಟಿಗೆ ಆ ಹೆದರಿಕೆ! ನನಗೇನಂತೆ, ಬರಿಗೈಯ ದಾಸಯ್ಯನಿಗೆ?" ಎಂದು ಅವನು ಧೈರ್ಯವಾಗಿದ್ದ.

ಹತ್ತು ಚೀಲ ಕಾಳಿನಲ್ಲಿ ಕೈಗಡ ಕೊಟ್ಟವರಿಗೆ ಅವರ ಪಾಲು ಸಲ್ಲಿಸಿ ಉಳಿದ ಐದು ಚೀಲ ಕಾಳನ್ನು ಎದುರಿಗಿಟ್ಟುಕೊಂಡು ಮುಂದಿನ ಹಾದಿಯೇನು ಎಂದು ಚಿಂತಿಸುತ್ತ ಚೆಂದಪ್ಪನಾದಿಯಾಗಿ ಮನೆಯ ಒಂಬತ್ತು ಜನವೂ ಕುಳಿತುಕೊಂಡಿದ್ದರು.

ಆಗ ಯಾರೊ ಬಂದು ಹೇಳಿದರು "ಮತ್ತೆ ಅಧಿಕಾರಿಗಳು ಬಂದಿದ್ದಾರೆ" ಎಂದು. ಚೆಂದಪ್ಪ ಅದಕ್ಕೇನೂ ಲಕ್ಷ ಕೊಡಲಿಲ್ಲ.

ಚೆಂದಪ್ಪನ ತಂದೆ ಯಜಮಾನರು ಬಹಳ ಚಿಂತೆಗೊಳಗಾಗಿದ್ದರು ಎಂದು ತೋರುತ್ತದೆ.

"ಇದು, ನೋಡೊ ಚೆಂದು!" ಎಂದು ಅವರು ಹುಡುಗರ ಕಡೆಗೆ ಬೆರಳುಮಾಡಿ ತೋರಿಸಿದರು. ಎಲ್ಲರ ಮೈಮೇಲಿನ ಅರಿವೆ ಅಂಚಡಿಗಳೂ ಹರಿದು ಚಿಂದಿಚಿಂದಿಯಾಗಿ ಹೋಗಿದ್ದವು.

"ನಮ್ಮದೇನಪ್ಪ ಹೆಂಗಾದರೂ ನಡೆದೀತು. ಇವಳಿಗೆ ಇರಲಿಕ್ಕೆ ಹೀಗೆ ಬಂದೀತೇನಪ್ಪ?" ಎಂದು ತನ್ನ ಸೊಸೆಯ ಮೈಮುಚ್ಚನ್ನು ಕುರಿತು ಚೆಂದಪ್ಪನ ತಾಯಿ ಕಣ್ಣೀರು ತೋಡಿದಳು.

"ಇನ್ನು ನೀನೂ ನಾಲ್ಕು ಮಂದಿಯೊಟ್ಟಿಗೆ ಹೊರಗೆ ಇರುವವನು; ನಿನಗಾದರೂ ಒಂದು ಧೋತರ ಬೇಡವೇನೋ?" ಎಂದು ಚೆಂದಪ್ಪನ ತಂದೆ ಸೂಚಿಸುತ್ತ "ಹೇಗೊ ಚೆಂದೂ, ಅದು ಕಣ್ಣೀ ಕಿತ್ತುಕೊಂಡೈತಿ, ಅದನ್ನು ಬಿಗಿದುಹಾಕಿ ಬಾ" ಎಂದರು ಒಮ್ಮೆಲೆ.

ಚೆಂದಪ್ಪ ಎದ್ದು ಹೋಗಿ ಹರಿದುಕೊಂಡಿದ್ದ ಆ ಎತ್ತನ್ನು ಅದರ ಗೂಟಕ್ಕೆ ಬಿಗಿದು ಬಂದು ಕುಳಿತುಕೊಂಡನು. ಅವನ ತಂದೆ ಮತ್ತೆ ಹೇಳಿದರು.

"ಇದೇನೊ ಬಲವಾಗಿದೆ–ಇನ್ನೂ ಪ್ರಾಯ. ಇದರ ಜೊತೆಗೆ ಆ ಹಳೆ ಎತ್ತು ತಡಿದೀತೆನೊ? ಈ ವರ್ಷ ಮಳೆಗಾಲಕ್ಕೆ ಅದು ನೆಲ ಹಿಡಿದು ಬಿಡೋದೆ ಖಾತ್ರಿ. ಇದಕ್ಕೇನು ಮಾಡಬೇಕು? ಎತ್ತಿಲ್ಲದೆ ರೈತನ ಬದುಕು ನಡೆಯೋದಾದರೂ ಹ್ಯಾಂಗ?"

ಅದನ್ನು ಕೇಳುತ್ತ ಚೆಂದಪ್ಪನ ಕಣ್ಣಿನಿಂದ ದುಃಖ ತುಂಬಿ ಹರಿಯಿತು. ತನ್ನ ತಂದೆಯ ಸಂಶಯ ಅವನಿಗೆ ನಿಶ್ಚಯವೆನಿಸಿಹೋಗಿತ್ತು.

"ನಮ್ಮ ಮನೆ ದೇವರು ಬನಶಂಕರಿ. ಎಣ್ಣೆ–ಬತ್ತಿ, ಹಣ್ಣುಕಾಯಿ ಕಾಣದೆ ನಾಲ್ಕು ವರ್ಷ ಆಗಿಹೋದೆವು. ನಮ್ಮ ಮೇಲೆ ಮುನಿದುಕೊಂಡಾಳೊ ಏನೊ. ಅವಳಿಗೇನಾದರೂ ಶಾಂತಿ ಮಾಡಬೇಕಲ್ಲೊ, ಚೆಂದೂ, ತೆರಿಗೀನಾದರೂ ಬಿಟ್ಟಾರೇನಪ್ಪಾ?" ಎಂದು ಚೆಂದಪ್ಪನ ಮುದುಕ ತಂದೆ ಅವನನ್ನು ಮತ್ತೆ ಕೇಳಿದರು.

ಕಳಕಳಿ ಅವರ ಕಂಠದಲ್ಲಿ ಹುದುಗಿತ್ತು.

ಚೆಂದಪ್ಪ ಒಂದು ನಿಟ್ಟುಸಿರು ಹಾಕಿ ಹೇಳಿದ.

"ಬೆಳೆ ಬಂದೀತೊ ಇಲ್ಲವೊ, ಅವರಿಗೇಕಪ್ಪ ಆ ಚಿಂತೆ? ಮಳೆಯಂತೂ ಆಗಿದೆ. ಕಂದಾಯ ಹೇಗೆ ಬಿಟ್ಟಾರು?"

ಮುದುಕನ ವೃದ್ಧ ಮುಖದ ಮೇಲೆ ಒಂದೆರಡು ತೊಟ್ಟು ಕಣ್ಣೀರು ಮಿನುಗಿದವು.

"ಎಲ್ಲಿಂದ ತರಬೇಕೊ, ರೈತ? ಇನ್ನು ಕಳವಿಗೆ ಹೋದರೆ ಸೈ."

"ಕಳವು ಮಾಡಿದರೆ ಕೇಳ್ತಾರೇನಪ್ಪ? ಹೊಲ ಮನೆ ಮಾರಿ ಕೊಡಬೇಕು. ಜೀವ ಒತ್ತಿಯಿಟ್ಟು ಕೊಡಬೇಕು" ಎಂದ ಚೆಂದಪ್ಪ.

"ಇದೊಂದೂ ನನಗೆ ತಿಳೀದಪ್ಪಾ, ಚೆಂದೂ ಸಾಕು, ನೋಡಲಾರೆ ಕಣ್ಮುಚ್ಚಬೇಕು" ಎಂದು ಯಜಮಾನರು ತಮ್ಮ ಮುಖದ ಮೇಲೆ ಕೈಯೆಳೆದುಕೊಂಡರು.

ಕಾರಣ ಅವರಿಗೆ ಗೊತ್ತಾಗದಿದ್ದರೂ, ದೊಡ್ಡವರೆಲ್ಲ ಕಣ್ಣೀರು ಹಾಕುತ್ತಿರುವುದನ್ನು ಕಂಡು ಹುಡುಗರೆಲ್ಲ "ಗೊಳೊ" ಎಂದವು.

ಆ ಹೊತ್ತಿಗೆ "ಚೆಂದಪ್ಪಾ" ಎಂದು ಯಾರೊ ಕೂಗಿದರು. ಚೆಂದಪ್ಪ ಎದ್ದು ಹೊರಗೆ ಹೋದ.

ಗ್ರಾಮ ಚಾವಡಿಯ ತುಂಬ ಜನ ಸೇರಿತ್ತು.

"ಶೆಟ್ಟಿ ಸಾವಕಾರರನ್ನು, ಕಾಳು ಕಡಿ ಒಟ್ಟಿದ ಒಕ್ಕಲು ಕುಳಗಳನ್ನು ಬಿಟ್ಟು, ನನ್ನ ಕೊಡು ಅಂದರೆ ನಾನೇನು ಕೊಟ್ಟೇನ್ರಿ?" – ಎಂದ ಚೆಂದಪ್ಪ.

"ಇದರಲ್ಲಿ ಅಂಥವರು ಇಂಥವರು ಅಂತ ಏನೂ ಹೆಚ್ಚು ಕಡಿಮೆ ಇಲ್ಲ. ತಿಳಿಯಿತೇನು?" ಎಂದು ಅಧಿಕಾರಿಗಳು.

ಒಬ್ಬೊಬ್ಬರಾಗಿ ಎಲ್ಲ ಜನರಿಗೂ 'ತಾಕೀತು' ಮುಟ್ಟಿತು.

ಅಧಿಕಾರಿಗಳು ತಮ್ಮ ವಸೂಲಿ ಕೆಲಸಕ್ಕೆ ಆರಂಭ ಮಾಡಿದರು.

ವಸೂಲಿ ಅರ್ಧ ನಡೆದಾಗಲೆ ಜನ ಅಲ್ಲಲ್ಲಿ ಗುಂಪುಗೂಡಿ "ಗುಜು ಗುಜು" ಎಂದು ತಮ್ಮ ಅಸಂತೋಷ ವ್ಯಕ್ತಮಾಡುತ್ತಿದ್ದರು. ಬಹಿರಂಗವಾಗಿ ಹೇಳುವ ಧೈರ್ಯ ಯಾರೊಬ್ಬರಿಗೂ ಇಲ್ಲ. ಅವರವರ ಮನೆ ನಂಬರು ಪ್ರಕಾರ ವಸೂಲಿ ನಡೆಯುವಂತೆ–ಹಾಗಾದರೆ ನಡುವೆ ಶಾನುಭೋಗರ ಮನೆ ಜಾರಿಸಿಬಿಟ್ಟರಲ್ಲ. ಅದೇಕೆ? ಆ ದೇಶಪಾಂಡೆಯವರ ಮನೆಗೂ ಹೋಗಲಿಲ್ಲವಂತೆ. ಈ ಶೆಟ್ಟಿಯ ಮನೆಗೂ ಕಾಲಿಕ್ಕಲಿಲ್ಲವಂತೆ. ನೋಡಿದರೆ ಈ ವರ್ಷ ಇದ್ದದರಲ್ಲಿ ಗೌಡನದೆ ಸರಿಯಾದ ಬೆಳೆ. ಅವನ ಸುದ್ದಿಯನ್ನಂತೂ ಎತ್ತಲೆ ಇಲ್ಲವಂತೆ.

ಹೀಗೆ ಜನ ತಮಗೆ ತಿಳಿದಂತೆ ಆಡಿಕೊಂಡರು.

ಅದೇನು ವಸೂಲಿಗೆ ಬಂದ ಮನೆಯ ಮುಂದೆ ಒಂದೊಂದು ಜಾತ್ರೆ.

"ನನ್ನ ಮನೆಯಲ್ಲಿ ಏನೂ ಇಲ್ರಿ," ಎಂದ ಚೆಂದಪ್ಪ.

"ಇಲ್ಲವಾದರೆ ಕೊಡಲೆಬೇಡ. ಒಳಗೆಲ್ಲ ತೋರಿಸು ನಡೆ" ಎಂದರು ಅಧಿಕಾರಿಗಳು.

ಚೆಂದಪ್ಪ ಅವರನ್ನು ಕರೆದುಕೊಂಡು ತನ್ನ ಮನೆಯೊಳಗೆ ನಡೆದ. ಹೋದೊಡನೆಯೆ ಐದು ಚೀಲ –ತುಂಬಿದ ಐದು ಚೀಲ –ಅವರ ಕಣ್ಣಿಗೆ ಬಿದ್ದವು.

"ಸುಳ್ಳು ಹೇಳ್ತಿಯಾ ಬೇಕೂಫ್? ನಮ್ಮ ಕಣ್ಣಿಗೆ ಖಾರ ಉಗ್ಗಬೇಕು ಅಂತಿಯಾ/ ಬದ್ಮಾಷ್, ಸರಕಾರಕ್ಕೆ ಮೋಸ ಮಾಡಬೇಕು ಅಂತೀಯೇನೋ?" ಎಂದು ಅಧಿಕಾರಿ ತನ್ನ ಕೈಯೊಳಗಿನ ಬೆತ್ತದಿಂದ ಚೆಂದಪ್ಪನಿಗೆ ನಾಲ್ಕು ಏಟುಗಳನ್ನು ಹಾಕಿ, ಬೂಟುಗಾಲಿನಿಂದ ಅವನನ್ನು ನಿರ್ದಾಕ್ಷಿಣ್ಯವಾಗಿ ಒದ್ದುಬಿಟ್ಟ.

ಅದನ್ನು ನೋಡಿ ಅವರ ತಂದೆ "ಅಯ್ಯೊ ಚೆಂದೂ" ಎಂದು ಕೂಗಿದರು. ಮನೆ ಜನರೂ ಅವರ ಜೊತೆಯಲ್ಲಿ ಹುಯ್ಯುಕೊಂಡರು.

"ಮುದುಕ ಮುಂಡೆಮಗನೆ, ಗದ್ದಲ ಮಾಡಲಿಕ್ಕೆ ಏನಾಗಿದೆಯೊ ನಿನಗೆ?" ಎಂದು ಅಧಿಕಾರಿ ಅವರಿಗೂ ಒಂದೆರಡೇಟು ಕೊಟ್ಟನು.

ಅವನ ದರ್ಪದ ಮೇಲೆಯೆ ಸರಕಾರ ಬದುಕಬೇಕಾಗಿದೆಯೇನೋ, ಯಾರು ಬಲ್ಲರು?

"ಬಡವರ ಹೊಟ್ಟೆಯ ಮೇಲೆ ಹೊಡೆಯಬೇಡಿರಿ. ನಿಮ್ಮ ಕಾಲಿಗೆ ಬೀಳ್ತೆನೆ. ಇನ್ನಿಷ್ಟು ಚೀಲಾದರೂ ನಾವು ಒಂದು ವರ್ಷ ಬದುಕೋದು ಕಷ್ಟ. ಈ ಐದರಲ್ಲಿ ಅರ್ಧ ಕೊಟ್ಟು ನಾವು ಬಾಳುವೆ ಹೆಂಗ ಮಾಡಬೇಕ್ರಿ?"

"ನೀನು ಇದ್ದ ಗೊಡವೆ ಸತ್ತ ಗೊಡವೆ ನಮಗೇನಂತೆ ? ಅರ್ಧ ಕೊಡಲೇಬೇಕು. ಅದು ಯಾರಪ್ಪನಿಗೂ ಬಿಟ್ಟಿದ್ದಲ್ಲ. ಸರಕಾರಿ ಕಾಯಿದೆ."

“ಹೆಂಗಾದರೂ ಮಾಡಿ ದೊಡ್ಡ ಮನಸ್ಸು ಮಾಡ್ರೀಯಪ್ಪಾ” ಎಂದ. ಆದರೂ ಅಧಿಕಾರಿಗೆ ಕರುಣೆ ಹುಟ್ಟಲಿಲ್ಲ.

“ಉಂಹೂ, ಅದೇನೂ ಕೇಳೊಹಾಗಿಲ್ಲ.” ಎಂದುಬಿಟ್ಟ.

ಇನ್ನು ಹೇಳಿ ಕೇಳಿ ಪ್ರಯೋಜನವಿಲ್ಲವೆಂದು ಚೆಂದಪ್ಪ ಮನಸ್ಸನ್ನು ಕಲ್ಲುಮಾಡಿದ. ಐದು ಚೀಲ ಜೋಳವನ್ನು ಅವರ ಮುಂದೆ ಸುರಿದು ನಿಂತು, “ನಾವು ಈ ಒಂಬತ್ತು ಮಂದಿ ಇದರ ಮೇಲೆನೂ ಬದಕಬೇಕಾಗಿಲ್ಲ; ಅರ್ಧವನ್ನೇಕೆ ಎಲ್ಲವನ್ನೂ ಅಳೆದುಕೊಂಡುಬಿಡಿರಿ” ಎನ್ನುತ್ತ ಹಿತ್ತಲಿನ ಕೋಣೆಗೆ ಅವನು ಧಾವಿಸಿದ.

ಅಧಿಕಾರಿ ತನ್ನ ಸಿಬ್ಬಂದಿಯೊಂದಿಗೆ ಹಾಗೆಯೆ ನಿಂತನು. ಅಳತೆ ಮಾಡಿಕೊಡಲು ಸೇರನ್ನು ತರಲು ಇಷ್ಟು ಹೊತ್ತು ಹಿಡಿಯಬೇಕೆ? ನಿಂತು ನಿಂತು ಅಧಿಕಾರಿಗೆ ಕೋಪ ಬಂದುಹೋಯಿತು.

“ನಿಮಗೆಲ್ಲ ತಕ್ಕ ಶಾಸ್ತಿ ಮಾಡಿಸ್ತೇನೆ. ನಮ್ಮ ಜನ ಎಂದು ಸುಮ್ಮನೆ ಬಿಟ್ಟರೆ ನೀವು ಕೊಬ್ಬಿ ಹೋಗಿದೀರಿ. ಎಲ್ಲಿ ಹೋದನೊ ಎಳಕೊಂಡು ಬರ್ರಿ ಅವನ್ನ. ಏನು ಇನ್ನೂ ಅಳದು ಕೊಡತಾನೊ ಇಲ್ಲೊ.

ಆಳುಗಳು ಹೋಗಿ ತಿರುಗಿ ಬಂದು ಹೇಳಿದರು. ಕೂಗಿದರೂ ಉಸಿರೆತ್ತುವುದಿಲ್ಲವಂತೆ ಕದ ತಟ್ಟಿದರೂ ಓಗೊಳ್ಳುವುದಿಲ್ಲವಂತೆ. ಸುಮ್ಮನೆ ಗೊರಕೆ ಹೊಡೆಯುತ್ತ ಮಲಗಿದ್ದಾನಂತೆ. ಅಧಿಕಾರಿಗೆ ರೇಗಿತು. ಕೋಪ ನೆತ್ತಿಗೇರಿತು.

“ನಾವು ಇಲ್ಲಿ ನಿಂತುಕೊಂಡಿರುವುದು ಗೊತ್ತಿಲ್ಲವೇನು, ಮಗನಿಗೆ ? ಪಾಪ, ಇವನಿಗಾಗಿಯೇ ನಾವಿರುವುದು. ಬಾಜೀರಾಯ ನಿದ್ದೆ ಮಾಡಿ ಬರಲಿ. ಅವನು ಎದ್ದು ಬರುವವರೆಗೂ ನಾವು “ಜೀ” ಎಂದು ಕಾದಿರುತ್ತೇವೆ. ಏನು ನೋಡ್ತೀರಿ ಹೋಗ್ರೊ. ಕದ ಮುರಿದು ಎಳತರ್ರಿ” ಎಂದು ಆಜ್ಞೆ ಚಲಾಯಿಸಿ ಅಧಿಕಾರಿ ಅವರ ಹಿಂದೆ ಹೋದನು.

ಗೊರಕೆಯ ಸಪ್ಪಳ ನಡೆದೆ ಇತ್ತು.

ಕದ ಮುರಿಯುವ ಪ್ರಯತ್ನ ನಡೆದರೂ ಅವನು ಮಾತ್ರ ಎದ್ದು ಬರಲಿಲ್ಲ.

ಬಾಗಿಲು ಮುರಿದು ಒಳಗೆ ಹೋಗಿ ನೋಡಿದಾಗ ಚೆಂದಪ್ಪ ಜಂತೆಗೆ ನೇತು ಬಿದ್ದಿದ್ದ.

ನೇಣು ಕತ್ತರಿಸಿ ಮಾಡುವ ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲ. ಅನ್ನವಿಲ್ಲದೆ ಬದುಕಿ ಮನೆಯ ಮಂದಿ ದಿನದಿನವೂ ಸಾವಿನ ದವಡೆಯನ್ನು ಸೇರುವುದನ್ನು ನೋಡುವ ಭೀತಿ ಅವನನ್ನು ಜೀವನದಿಂದ ಪಲಾಯನ ಹೇಳಿಸಿತ್ತು.

* * * *

# ಸಾವಿನ ಮೇಜವಾನಿ

"Well then, just tell me yourself how, in your opinion, it would be best of all for me to die? So that it may happen most-most honourably, I mean? Tell me that."

-DOSTOEVSK

ಅದೋ, ಮತ್ತೆ!

ನಾನು ಆ ಸ್ಥಳಕ್ಕೆ ಬರುತ್ತಲೂ ದಿನಾಲು ಅದೇ ಅದೇ – ನಿಟ್ಟುಸಿರು! ಈಗ ಐದಾರು ತಿಂಗಳಿಂದಲೂ ಅದನ್ನು ಒಂದೇ ಸಮನೆ ಕೇಳುತ್ತಲಿದ್ದೇನೆ... ಬಿಡುಗಡೆಯಿಲ್ಲದಂತೆ!

ಬಹುಶಃ ಏನಿದ್ದಿರಬಹುದಾಗಿದ್ದೀತು?

ದಿನವೂ ಅದೇ ಯೋಚನೆ ನನಗೆ! ಅದನ್ನು ಕಂಡು ಹಿಡಿಯಬೇಕೆಂಬ ಕುತೂಹಲ ಬಹಳ ದಿನಗಳಿಂದ– ಬಹಳ ದಿನಗಳಿಂದ ಇದೆ.... ಆದರೆ? ಪುನಃ ಪುನಃ ನನ್ನನ್ನು ಕಾಡುತ್ತಿರುವುದು ಅದೇ ಪ್ರಶ್ನೆ!

ಆಫೀಸಿನ ಮುಳ್ಳುಬೇಲಿಯನ್ನು ದಾಟಿ ನಾನು ಈಚೆಗೆ ಹೊರಡಬೇಕಾದರೆ ಆಗಲೆ ರಾತ್ರಿ ಹನ್ನೊಂದು ಗಂಟೆಯಾಗಿರುತ್ತದೆ. ಆಗ ಅದನ್ನೆಲ್ಲ ವಿಚಾರಿಸುತ್ತ ನಿಲ್ಲುವ ಸಮಾಧಾನ ಉಳಿದಿರುವುದಿಲ್ಲ ನನಗೆ. ಬಳಲಿದ ಮನಸ್ಸೂ, ಸೋತ ದೇಹವೂ ತೂಕಡಿಕೆ ಹಾಕುವ ಕಾಲ ಅದು.

ಒಂದು ವೇಳೆ ಅಲ್ಲಿ ನಿಂತು ಅದನ್ನೆಲ್ಲ ಗೊತ್ತುಹಚ್ಚಬೇಕೆಂಬ ಹವ್ಯಾಸವನ್ನಿಟ್ಟುಕೊಂಡರೆ ಏನಿಲ್ಲೆಂದರೂ ಕನಿಷ್ಟಪಕ್ಷಕ್ಕೆ ಅರ್ಧ ಗಂಟೆಯಾದರೂ ಹಿಡಿದೀತು. ಆದರೆ ನಾನು ಹೊತ್ತನ್ನು ಆ ರೀತಿಯಾಗಿ ದುಂದು ವ್ಯಯ ಮಾಡಲು ಬರುವಂತಿಲ್ಲ... ಎಷ್ಟು ಮಾತ್ರವೂ ಬರುವಂತಿಲ್ಲ. ಆ ಮಾತನ್ನು ನಾನು ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ– ಒಪ್ಪಿಕೊಳ್ಳದೆ ವಿಧಿಯಿಲ್ಲ. ಮನೆಯಲ್ಲಿ ಹೆಂಡತಿಯೊಬ್ಬಳೆ ಊಟ ಎದುರಿಗಿಟ್ಟುಕೊಂಡು ನನಗಾಗಿ ಕಾದುಕೊಂಡಿರುತ್ತಾಳೆ. ಅವಳ ಮನಸ್ಸನ್ನು ಬಳಲಿಸಬಾರದು. ನಾನು.... ಗೃಹಸ್ಥ ಧರ್ಮವೆ ಹಾಗೆ. ಮದುವೆಯಾದ ಮನುಷ್ಯ ಎಂದಿಗೂ ... ಎಂದೆಂದಿಗೂ ಮರೆಯಲಾಗದು ತನ್ನ ಜವಾಬ್ದಾರಿಯನ್ನು.

ಹೀಗಾಗಿ ಆ ನಿಟ್ಟುಸಿರು ಪ್ರಪಂಚವನ್ನೆಲ್ಲ ಅರಿತುಕೊಳ್ಳಬೇಕೆಂಬ ಜಿಜ್ಞಾಸೆಯುಳ್ಳ ನನ್ನಂಥವನಿಗೆ ಕೂಡ ಇದುವರೆಗೆ ಅರ್ಥವಾಗದೆ ಉಳಿದುಕೊಂಡಿದೆ. ಹನ್ನೊಂದು ಗಂಟೆಗೆ ಮುಂಚೆ ನಮ್ಮ ಆಫೀಸು ಬಿಡುವಂತಿಲ್ಲ. ಹನ್ನೊಂದು ಗಂಟೆಯ ನಂತರ ನಾನು ಮನೆಗೆ ಸೇರುವುದನ್ನು ಬೇರೆ ತಪ್ಪಿಸುವಂತಿಲ್ಲ. ಎಂದಮೇಲೆ ಆ ನಿಟ್ಟುಸಿರಿನ ಕಾರಣ ನನಗೆ ಮನವರಿಕೆಯಾಗುವ ಬಗೆ ಹೇಗೆ ? ಒಂದೊಂದೂ ಪೂರ್ವ ಪಶ್ಚಿಮ.... ಇನ್ನು ಕೂಡುವ ದಾರಿ ಯಾವುದು ?

ಏನಾದರೂ ನಮ್ಮ ವೇಳಾಪತ್ರಿಕೆಯಲ್ಲಿ, ಕಾರ್ಯಕ್ರಮದ ಪಟ್ಟಿಯಲ್ಲಿ ಬದಲಾವಣೆ ನಡೆದರೆ ಮಾತ್ರ ಅದು ಸಾಧ್ಯವಾಗಬಹುದು. ಇಲ್ಲವಾದರೆ ಬಿಡಿಸಲಾಗದ ಒಂದು ಮಹಾ ಸಮಸ್ಯೆ ಆ ನಿಟ್ಟುಸಿರು.... ಅಂತಃಕರಣವನ್ನು ತಳಮಳಗೊಳಿಸುವ ಆ ಬಿಸುಸುಯ್ಯು.

ಅಯ್ಯೊ, ಕಿವಿದೆಗೆದರೆ ಸಾಕು.

ಅದೊ– ಮತ್ತೆ ಆ ಯಾತನೆ ..... ಯಮಯಾತನೆ.

೨

ಉಂ, ಏನು ಉರಿವುರಿ ಆ ವರ್ಷ.

ಅಂತೂ ಬಿಸಿಲ ಕುಲಿಮೆಯಿಂದ ಒಮ್ಮೆ ಬದುಕಿ ಬಂದಳು ಭೂಮಿತಾಯಿ ಎನ್ನಬಹುದು.

ಮಳೆ ಹಾಗೇ ನಿಷ್ಕರುಣವಾಗಿ ಸುರಿಯತೊಡಗಿತ್ತು.

ಒಂದು ಕೈಯಲ್ಲಿ ಕೊಡೆಯನ್ನು ಹಿಡಿದು, ಇನ್ನೊಂದು ಕೈಯಿಂದ ಬಟ್ಟೆಬರೆಯನ್ನು ಸಾವರಿಸಿಕೊಂಡು ನಾನು ಅವರಸವರವಾಗಿ ಮನೆಯ ದಾರಿ ಹಿಡಿದಿದ್ದೆ.

ಗಾಳಿ ಹಿಗ್ಗಾಮುಗ್ಗಾಗಿ ಬೀಸುತ್ತ ಕಣ್ಣುಮುಚ್ಚಾಲೆಯಾಡುತ್ತಿತ್ತು. ನುಗ್ಗಿ ನುಗ್ಗಿ ಬರುತ್ತಿದ್ದ ಆ ಮಳೆಯ ತುಂತುರು ಹನಿಯಲ್ಲಿ ಮಿಂದು ನನ್ನ ಉಡಿಗೆತೊಡುಗೆ ಒದ್ದೆಯಾಗಿದ್ದವು. ಕತ್ತಲುಗವಿದ ಆ ಬೀದಿಯ ರೊಜ್ಜಿನಲ್ಲಿ ಲೊಚಲೊಚನೆ ಕಾಲನ್ನೆಳೆದುಕೊಂಡು ನಾನು ಒಂದು ಗತಿಯಿಂದ ಮುಂದುವರೆದಿದ್ದೆ. ಪಾದರಕ್ಷೆಗಳಂತೂ ಯಥಾಪ್ರಕಾರ ಬೆನ್ನಿನವರೆಗೂ ಓಕುಳಿಯನ್ನು ಸಿಂಪಡಿಸುವ ತಮ್ಮ ಪವಿತ್ರ ಕಾರ್ಯದಲ್ಲಿ ನಿರತವಾಗಿದ್ದವು.... ಹೋಳಿ ಹುಣ್ಣಿಮೆಯ ಬಣ್ಣವನ್ನು ತಪ್ಪಿಸಿ ಬಂದುದಕ್ಕೆ ಅದು ಪ್ರಾಯಶ್ಚಿತ್ತವೊ ಏನೊ – ಯಾರು ಬಲ್ಲರು ?

ನಮ್ಮ ಆಫೀಸಿನಲ್ಲಿ ಆಗಬೇಕಾಗಿದ್ದ ಹೆಚ್ಚು ಕಡಿಮೆಗಳು, ಸುಧಾರಣೆಗಳು ತಮ್ಮಷ್ಟಕ್ಕೆ ತಾವೆ ನನ್ನ ಮನಸ್ಸಿನಿಂದ ಜಾರಿಹೋದವು. ನನ್ನ ಯೋಚನೆಯ ಎಳೆ ಒಮ್ಮಿಂದೊಮ್ಮೆಲೆ ಕತ್ತರಿಸಿ ಹೋದಂತಾಯಿತು. ಅವು ಏನೊ!...."ಝಣಲ್" ಎಂದು ನನ್ನ ಎದುರಿನಲ್ಲಿಯೆ ಬಂದು ಚೆಲ್ಲಾಪಿಲ್ಲಿಯಾಗಿಬಿದ್ದವು. ಹಣ ಹಣ ಎಂದು ಪ್ರಪಂಚಕ್ಕೆ

ಪ್ರಪಂಚವೆ ಹುಚ್ಚೆದ್ದು ಕುಣಿಯುತ್ತಿರುವಾಗ ಅದೇ ಹಣವನ್ನು ಬೀದಿಗೆಸೆಯುವವರೂ ಇದ್ದಾರೆ ಎಂಬ ಮಾತನ್ನು ನಂಬುವುದಕ್ಕಾಗಲಿಲ್ಲ. ನನ್ನ ಕಣ್ಣುಗಳಿಗೆ .... ಪ್ರತ್ಯಕ್ಷ ಪ್ರಮಾಣಸಿದ್ಧವಾಗಿದ್ದರೂ! ನಾನು ಬೆರಗುಹೊಡೆದು ಹಾಗೆಯೆ ನಿಂತುಕೊಂಡಿದ್ದೆ.

"ಧಡಕ್ಕನೆ" ಕದವನ್ನು ಮುಚ್ಚಿದ ಸಪ್ಪಳವಾಯಿತು. ಹ್ಹಿ ಹ್ಹಿ.... ಹ್ಹಿ ಎಂದು ನಗುತ್ತ ಯಾವನೊ ಒಬ್ಬ ಅದೇ ಮನೆಯ ಬಾಗಿಲು ಕಡೆಯಿಂದ ನನ್ನ ಬಳಿಗೆ ಧಾವಿಸಿಕೊಂಡು ಬಂದು ಅಲ್ಲಿ ಚೆದುರಿಬಿದ್ದಿದ್ದ ರೊಕ್ಕವನ್ನು ಕತ್ತಲೆಯಲ್ಲಿಯೆ ಆಯ್ದುಕೊಳ್ಳತೊಡಗಿದ.

ನನಗೆ ಅದನ್ನೆಲ್ಲ ನೋಡಿ ದಿಗ್ಭ್ರಮೆಯಾಯಿತು. ನನ್ನ ಕುತೂಹಲ ನನ್ನನ್ನು ಅಷ್ಟಕ್ಕೇ ಸುಮ್ಮನಿರಗೊಡಲಿಲ್ಲ. ಮುಂದಕ್ಕೆ ಬಾಗಿ ಅವನನ್ನು ಮಾತನಾಡಿಸಿದೆ. ಮತ್ತೆ ಮಾತನಾಡಿಸಿದೆ.. ಒಂದು, ಎರಡು, ಮೂರು ಸಲ! ಆದರೆ ಅವನೇನೂ ತನ್ನ ಮೌನದಿಂದ ಮಿಸುಗಲಿಲ್ಲ. ಜುಂಮೆನ್ನಲಿಲ್ಲ. ತನ್ನ ಲಹರಿಯಲ್ಲಿಯೆ ತನ್ಮಯನಾಗಿ ಹೋಗಿದ್ದ.

ನನ್ನ ಮಾತು ಅವನಿಗೆ ಕೇಳಿರಲಾರದೆಂದು ನಾನು ಸಂಶಯಪಟ್ಟು "ಏನಪ್ಪ?" ಎಂದು ಪುನಃ ಕರೆದೆ ಅವನನ್ನು. ಆಗ ಅವನು ಅದೆ ನಿದ್ದೆಯಿಂದ ಎಚ್ಚತ್ತವನಂತೆ "ಆಂ" ಎಂದ.

"ದೀಪವನ್ನಾದರೂ ತಂದು ಹುಡುಕಬಾರದೆ?" ಎಂದು ನಾನು ಅವನಿಗೆ ಹೇಳಿದೆ. ನನ್ನ ಮಾತನ್ನು ಕೇಳಿ ಅವನು ಒಂದು ಹುಚ್ಚುನಗೆಯನ್ನು ಬೀರಿದ, ಅಷ್ಟೆ.

"ಇದೇನು, ನನ್ನ ಮಾತಿಗೆ ನಗುತ್ತೀಯಲ್ಲ?" ಎಂದು ನಾನು ಅವನನ್ನು ಕೆಣಕಿ ನುಡಿದೆ. "ನಗದೇ, ಇನ್ನೇನು ಮಾಡಬೇಕು?" ಅವನು ಪುನಃ ನಗುತ್ತಲೆ ಹೇಳತೊಡಗಿದ. "ಅಸಲು ಹಣ ಕೈಗೆ ಬಂದಮೇಲೆ ಬಡ್ಡಿಗೇನಂತೆ –ಸಿಕ್ಕಷ್ಟು ಸಿಗಲಿ."

ಅಸಲು ಬಡ್ಡಿ .... ಅವನ ಮಾತು ನನಗೆ ಏನೊಂದೂ ಅರ್ಥವಾಗಲಿಲ್ಲ. ನಾನು ಸುಮ್ಮನೆ ನಮ್ಮ ಮನೆಯ ಹಾದಿಯನ್ನು ಹಿಡಿದೆ. ಆದರೆ ಎಂದಿಗಿಂತ ಭೀಷಣವಾದ ದಾರುಣವಾದ ನಿಟ್ಟುಸಿರು ನನ್ನ ಕಿವಿಯನ್ನು ಹೊಕ್ಕು ಅಂತಃಕರಣಕ್ಕೆ ತಾಗಿತು.. ಎಂಥ ಚಿತ್ತವೇಧಕ ನರಳಿಕೆ ಹುದುಗಿದೆ ಆ ನಿಟ್ಟುಸಿರಿನಲ್ಲಿ? ಅದನ್ನು ಕೇಳಬಾರದೆಂದು ನಾನು ಎಷ್ಟೆ ನಿಶ್ಚಯಿಸಿದ್ದರೂ ಅದನ್ನು ಕೇಳುವುದು ಬೇರೆ ಮತ್ತೂ ತಪ್ಪಲಿಲ್ಲ. ಕೊನೆಗೂ ತಪ್ಪಲಿಲ್ಲ. ನನ್ನ ನಡಿಗೆಯನ್ನು ಇನ್ನೂ ಸ್ವಲ್ಪ ಒತ್ತರಿಸಿ ನಾನು ಹಾಗೇ ಮುಂದಕ್ಕೆ ಸಾಗಿದೆ.

ಉರುಳಿಬಿದ್ದ ರೊಕ್ಕಕ್ಕಾಗಿ ಅವನಿನ್ನೂ ಅಲ್ಲಿಯೆ ಬಗ್ಗಿಕೊಂಡು ಆ ಕೊಳಚೆಯಲ್ಲಿ ಕೈಯಾಡಿಸುತ್ತಲೆ ಇದ್ದ.

೩

ಮರುದಿನವಂತೂ ನನಗೆ ಆಫೀಸಿನಲ್ಲಿ ಯಾವ ಕೆಲಸವೂ ಇರಲಿಲ್ಲ. ಯಂತ್ರ

ಕೆಟ್ಟುಹೋಗಿ ನಮ್ಮ ಕಾರ್ಖಾನೆ ನಡೆಯಲಾರದಂತಾಗಿತ್ತು. ಕೊಳಲಿನ ಕಣ್ಣು ಕಟ್ಟಿಹೋಗಿದ್ದರೆ ಯಾವ ರಾಗ ಊದಬೇಕು?

ಆ ಹೊತ್ತು ನಾನು ಆಫೀಸು ಬಿಟ್ಟಾಗ ಇನ್ನೂ ರಾತ್ರಿ ಒಂಭ'ತ್ತು ಗಂಟೆಯಾಗಿರಲಿಲ್ಲವೆಂದು ತೋರುತ್ತದೆ. ನಿಟ್ಟುಸಿರನ್ನು ಶೋಧಿಸಬೇಕೆಂಬ ನನ್ನ ಕುತೂಹಲ ಎಂದಿಗಿಂತಲೂ ಸ್ವಲ್ಪ ಹೆಚ್ಚಾಗಿಯೆ ಜಾಗೃತವಾಗಿತ್ತು.

ಆ ಮನೆಯನ್ನಂತೂ ನಾನು ಹೇಗೋ ಹಿಂದಿನ ದಿನವೆ ಕಂಡುಕೊಂಡಿದ್ದೆ. ನನ್ನ ಉತ್ಸುಕತೆ ನನ್ನನ್ನು ಲಗುಬಗೆಯಿಂದ ಎಳೆದುಕೊಂಡು ಹೋಯಿತು. ಆ ಮನೆಯ ಬಳಿಗೆ... ಕದ ತೆರೆದಿತ್ತು ಹಿಂದು ಮುಂದು ಯೋಚಿಸದೇ ಧೈರ್ಯಮಾಡಿ ನಾನು ಒಳಗೆ ಹೆಜ್ಜೆಯನ್ನಿಟ್ಟೆ. ಹೀಗೆ ಹೆಜ್ಜೆಯನ್ನಿಟ್ಟದ್ದೇ ತಡ ಮುಖದಲ್ಲಿ ಒಂದು ಹುಸಿನಗೆಯನ್ನು ಕುಣಿಸುತ್ತ ಒಬ್ಬ ಹೆಣ್ಣು ನನ್ನೆದುರು ಬಂದು ನಿಂತಳು.... ಬಣ್ಣದ ಬೀಸಣಿಕೆಯಂತೆ.

ಅದಕ್ಕೆ ಹಿಂದಿನ ದಿನ ಆ ಮಳೆಯಲ್ಲಿ ನೆನೆದು ಹೋಗಿದ್ದರೂ ನಡುಗಿರಲಿಲ್ಲ ನಾನು. ನನ್ನ ಎದೆ "ಧಸ್ಸೆಂದು" ಆ ಕ್ಷಣವೆ ಕುಸಿದುಹೋಯಿತು. ಎಲ್ಲಿದ್ದೇನೆಂಬುದು ನನಗೆ ಪೂರ್ತಿ ಮನವರಿಕೆಯಾಯಿತು. ಅಲ್ಲಿಂದ ಓಡಬೇಕೆಂದುಕೊಂಡೆ ನಾನು. ಆದರೆ ಕಾಲು ಕೀಳುವದೆ ನನ್ನಿಂದಾಗಲಿಲ್ಲ. ಸುಮ್ಮನೆ ತಬ್ಬಿಬ್ಬಾಗಿ ನಿಂತುಬಿಟ್ಟೆ.

ಆಕೆ ಬಳಕುತ್ತ "ಬರ್ರಿ" ಎಂದಳು ವೈಯಾರದಿಂದ.

ನನ್ನ ಶಕ್ತಿ ಉಡುಗಿಹೋದಂತಾಗಿ ಅಪ್ರತಿಭವಾಗಿ ನಿಂತುಬಿಟ್ಟೆ ನಾನು. ನನ್ನ ಸ್ಥಿತಿಯನ್ನು ನೋಡಿ ಅವಳಿಗೆ ತುಂಬಾ ಸೋಜಿಗವೆನಿಸಿರಬೇಕು. ಅವಳು ಹೀಗೆಯೆ ಇನ್ನೂ ಸ್ವಲ್ಪ ಹೊತ್ತು ನಿಂತು ಬಾಗಿಲನ್ನು ಮುಚ್ಚಿಬರಲು ಮುಂದಾದಳು. ಆಗ ನನ್ನ ಮೈಯಲ್ಲಿ ಯಾವುದೊ ಒಂದು ಆವೇಶ ತುಂಬಿದಂತಾಯಿತು. "ಥೂ, ನೀನು .... ಸೂಳೆ" ಎನ್ನುತ್ತ ಅವಳನ್ನು ಹಾಯ್ದುಕೊಂಡು ನಾನು ಅಲ್ಲಿಂದ ರಭಸವಾಗಿ ಓಡಿಬಿಟ್ಟೆ. ಮನೆಯನ್ನು ಸೇರಿದಾಗ ನನ್ನ ಮೈಯೆಲ್ಲ ಬೆವರೊಡೆದಿತ್ತು.

"ಏನು, ಅಷ್ಟು ಅವಸರದಿಂದ ಬಂದಿರಲ್ಲ ಇವೊತ್ತು?" ಎಂದು ನಮ್ಮಾಕೆ ಕೇಳಿದ ಪ್ರಶ್ನೆಗೆ ನನ್ನಿಂದ ಸರಿಯಾಗಿ ಉತ್ತರ ಹೇಳುವುದಕ್ಕೂ ಆಗಲಿಲ್ಲ.

"ಒಂದು ದಿನವಾದರೂ ಬೇಗ ಬಂದು ನಿನ್ನ ನೋಡಬೇಕು, ಇಬ್ಬರೂ ಜೊತೆಯಲ್ಲಿ ಕುಳಿತು ಒಂದು ದಿನವಾದರೂ ಊಟ ಮಾಡಬೇಕು ಅಂತ ಮನಸ್ಸಾಯಿತು. – ಅದಕ್ಕೆ" ಎಂದೆ ನಾನು.

"ಇದ್ದರೂ ಇದ್ದೀತು, ಪಾಪ" ಎಂದು ಆಕೆ ಅಣಕಿಸುವ ರೀತಿಯಲ್ಲಿ ನಗುತ್ತ ಗೋಣು ತೂಗಿದಳು.

ನನ್ನ ಗುಟ್ಟು ಅವಳಿಗೂ ತಿಳಿದಿರಬಹುದೇನೊ – ಯಾರು ಬಲ್ಲರು ?

ಎರಡು ಮೂರು ದಿನಗಳವರೆಗೂ ನನ್ನ ಮನಸ್ಸು ತುಮುಲ ಕೋಲಾಹಲವಾಗಿತ್ತು.... ಸೂಳೆಗಾರಿಕೆಯನ್ನೂ ಅದಕ್ಕೆ ಕಾರಣವಾದ ಸಮಾಜದ ಲೋಪದೋಷಗಳನ್ನೂ ಆಲೋಚಿಸಿ ಆಲೋಚಿಸಿ ನಾನು ನಿರ್ವಿಣ್ಣನಾಗಿ ಹೋಗಿದ್ದೆ.

"ಅದು ಅವಳ ತಪ್ಪೇ?"

ಆ ಪ್ರಶ್ನೆಗೆ ಸರಿಯಾದ, ಸಮಂಜಸವಾದ ಉತ್ತರ ನನಗೆ ಕೊನೆಗೂ ದೊರೆಯಲಿಲ್ಲ.

ಸರ್ವಜನ ಸುಖಿ ಸಂತುಷ್ಟಿಯನ್ನು ಪಡೆದು ನೆಮ್ಮದಿಯಾಗಿ ಬಾಳಬೇಕು ಎಂದು ನಾವು ಸುಮ್ಮಸುಮ್ಮನೆ ಆಡಿಕೊಳ್ಳುತ್ತ ಕುಳಿತುಬಿಡುವುದು ಎಂಥ ಅಪಹಾಸ್ಯ. ಅಂತಃಕರಣ ತಳಮಳಗೊಳ್ಳುವ ನಿಟ್ಟುಸಿರು, ಬಿಸುಸುಯ್ಲು, ನರಳಿಕೆ, ಯಾತನೆ.... ಎಂದು ಮುಂತಾಗಿ ಎಷ್ಟು ವಿಶೇಷಣ ಹಚ್ಚಿ ಹೇಳಿದರೂ ಏನು ಬಂತು – ಒಂದು ಅಂಶದಷ್ಟಾದರೂ ಅದನ್ನು ನಿವಾರಣೆ ಮಾಡುವ ಮಾನವ ಹೃದಯ ಇಲ್ಲದಿದ್ದರೆ!

ಆ ದಿನದ ನನ್ನ ಪಲಾಯನ ವೃತ್ತಿಯನ್ನು ಕಂಡು ನನಗೇ ನಾಚಿಕೆಯಾಯಿತು. ನನ್ನನ್ನು ನಾನೆ ಹಳಿದುಕೊಂಡೆ, ಬೈದುಕೊಂಡೆ, ಆ ನಿಟ್ಟುಸಿರಿನ ಹಿಂದೆ ಹುದುಗಿದ್ದ ದಾರುಣ ವ್ಯಥೆಯನ್ನು ಕೇಳುವ ಔದಾರ್ಯವನ್ನು ತೋರಿಸದೆ ಓಡಿಬರುವಷ್ಟು ಕ್ಷುದ್ರವಾಗಬೇಕೆ, ನನ್ನ ಮನಸ್ಸು?

ಮುನ್ನಾರಾತ್ರಿ ನಿರ್ಧರಿಸಿದಂತೆ ನಾನು ಮರುದಿನ ಅಲ್ಲಿಗೆ ಹೋದೆ. ಎಂದಿನಂತೆ ದಿನವೂ ಬಾಗಿಲು ಮುಚ್ಚಿಯೆ ಇತ್ತು ನಾನು ಕದವನ್ನು ಮೆಲ್ಲಗೆ ತಟ್ಟಿದೆ. ಸ್ವಲ್ಪಹೊತ್ತಿನ ಮೇಲೆ ಪ್ರವೇಶ ದೊರೆಯಿತು ನನಗೆ!

ಆದರೆ ?

ಅವಳು ನನ್ನನ್ನು ಕಂಡೊಡನೆಯೆ ಹಿಂದಿನ ದಿನದಂತೆ ಹುಸಿನಗೆಯನ್ನು ನಗಲಿಲ್ಲ. ನನ್ನೆಡೆಗೆ ತೃಷಿತ ದೃಷ್ಟಿಯನ್ನು ಬೀರಲಿಲ್ಲ. ಕಲ್ಲುಪುತ್ಥಳಿಯಂತೆ ಸುಮ್ಮನೆ ನಿಂತಲ್ಲಿಯೆ ನಿಂತುಬಿಟ್ಟಿದ್ದಳು. ಅದನ್ನು ಕಂಡು ನನಗೆ ಬಹಳ ಸಂಕೋಚವೆನಿಸಿತು. ಯಾರ ಮನಸ್ಸಾದರೂ ಸಂಕೋಚಗೊಳ್ಳಬಹುದಾದ ಸನ್ನಿವೇಶ ಅದು!

ನಾನು ಹಿಂದಕ್ಕೆ ಹೊರಳಿ ಹೋಗಿ ಬಾಗಿಲನ್ನು ಇಕ್ಕಿಕೊಂಡು ಬಂದೆ.

ಆಗಲೂ ಕೂಡ ಅವಳು ನಿಂತ ಸ್ಥಳದಿಂದ ಎಷ್ಟೆಷ್ಟೂ ಕದಲಿರಲಿಲ್ಲ. ನನಗೆ ಇನ್ನೂ ಹೆಚ್ಚಿನ ಸೋಜಿಗವಾಯಿತು.

ಅವಳ ಮುಂದುಗಡೆ ಮೆಲ್ಲಗೆ ಬಂದು ನಿಂತು ನಾನು ಮುಖದ ದೃಷ್ಟಿಯನ್ನು ಚೆಲ್ಲಿದೆ. ಕಣ್ಣೀರು ಅವಳ ಕೆನ್ನೆಗುಂಟ ದಳದಳನೆ ಇಳಿಯುತ್ತಿತ್ತು. ಏನನ್ನಾದರೂ ನೋಡಬಹುದು... ಆದರೆ ಕಣ್ಣೀರನ್ನು ನೋಡುವುದಕ್ಕಾಗುವುದಿಲ್ಲ!

ನಾನು ಸುಮ್ಮನೆ ಹೋಗಿ ಆ ಮೂಲೆಯಲ್ಲಿದ್ದ ಮುರುಕು ಕುರ್ಚಿಯಲ್ಲಿ

ಕುಳಿತುಕೊಂಡೆ. ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಪ್ರಕ್ಷುಬ್ಧ ಸಾಗರದಂತೆ

ತಿರುಗಿ ಮನೆಗೆ ಹೋದಾಗ ಆಗಲೆ ನಸುಕು ಹರಿದಿತ್ತು!

೪

"ಏನು, ರಾತ್ರಿಯೆಲ್ಲ ಬರಬಾರದೆ?" ಎಂದು ನಮ್ಮಾಕೆ ಕಣ್ಣು ಹೊಸೆಯುತ್ತಲೆ ಕೇಳಿದಳು... ನನ್ನ ಕಣ್ಣು ತೂಕಡಿಕೆ ಹಾಕುತ್ತಿದ್ದವು. ಮೈಯೆಲ್ಲ ಭಾರವಾಗಿತ್ತು ನನಗೆ!

"ಕೆಲಸ – ವಿಪರೀತ ಕೆಲಸ!" ಎನ್ನುತ್ತ ನಾನು ಹಾಸಿಗೆಯಲ್ಲಿ ಉರುಳಿಕೊಂಡೆ. ಅವಳು ಬಂದು ಶಾಲು ಹೊದಿಸಿ ಹೋದಳು. ಆದರೆ ನಿದ್ರೆ ಮಾತ್ರ ಬರಲಿಲ್ಲ. ಅದಕ್ಕೆ ಬದಲಾಗಿ ಮನಸ್ಸಿನಲ್ಲಿ ನೂರಾರು ವಿಲಕ್ಷಣ ಚಿತ್ರಗಳ ಪ್ರದರ್ಶನಕ್ಕಾರಂಭವಾಗಿತ್ತು... ಉಸಿರೆಳೆಯುವುದಕ್ಕೂ ಅವಕಾಶವಿಲ್ಲದಂತೆ!

ಅಯ್ಯೋ, ಎಂಥ ಬಾಳನ್ನು ಬದುಕಬೇಕಾಗಿದೆ ಅವಳು! ಅದನ್ನು ನೆನೆದರೆ ಎದೆಯ ರಕ್ತ ಹೆಪ್ಪುಗಟ್ಟಿಹೋಗುವುದು. ದೈವಕ್ಕೆ ಹೃದಯವಿಲ್ಲ.... ದೇವರಿಗೆ ಕರುಣೆಯಿಲ್ಲ.... ಕಟುಕನಿಗಿಂತ ನಿರ್ದಯಿ ಕಾಲಪುರುಷ!

ಐದು ರಾತ್ರಿ ರಕ್ತಮಾಂಸದ ದೇಹವನ್ನು ಮಾರಿ ತನ್ನ ಮಾನವನ್ನು ಕ್ಷುಃಪದಾರ್ಥವೆಂಬಂತೆ ತೂರಿಕೊಂಡರೂ ಅವಳಿಗೆ ಪ್ರತಿಫಲ ಒಂದು ರೂಪಾಯಿ ಹದಿಮೂರು ಆಣೆಗಳು ಮಾತ್ರ! ಆ ಹಣವನ್ನು ಅವಳು ಬೀದಿಗೆಸೆಯದೆ ಇನ್ನೇನು ಮಾಡಬೇಕು? ತನ್ನ ದೇಹವನ್ನೇ ಜೂಜಾಟಕ್ಕಿಟ್ಟವಳಿಗೆ ಆ ಹಣ ಅದೇನು ಮಹಾ! ಥೂ, ಅವನೆಂಥ ನಿರ್ಲಜ್ಜ! ಮನುಷ್ಯನಲ್ಲ ಅವನು... ಪಶು! ತನ್ನ ಕಾಮವಾಸನೆಯನ್ನು ಹಿಂಗಿಸಿಕೊಂಡು ಅವಳ ಮುಖದ ಎದುರಿನಲ್ಲಿಯೆ ತಾನು ಕೊಟ್ಟ ಚಿಲ್ಲರೆಯನ್ನು ಆರಿಸಿಕೊಂಡನಲ್ಲ! ಅಸಲಿನ ಜೊತೆಗೆ ಬಡ್ಡಿಯಂತೆ ಅದು!

"ಚಂದ್ರಾ, ಎಂಥ ದುರವಸ್ಥೆಯೆ ನಿನ್ನದು!" ಎಂದುಕೊಳ್ಳುತ್ತ ನಾನು ಮಗ್ಗುಲಾಗಿ ಮಲಗಿಕೊಂಡೆ. ನನಗೆ ಗೊತ್ತಿಲ್ಲದಂತೆ ನನ್ನ ಕಣ್ಣು ಒದ್ದೆಯಾಗಿದ್ದವು.

ಚಂದ್ರಾ... ಚಂದ್ರಾ ಎಂಥ ಸವಿಯಾದ ಹೆಸರು ಅದು! ಆದರೆ ಆ ಹೆಸರಿನ ಜೊತೆಗೇ ವಿರೋಧ ಕಟ್ಟಿಕೊಂಡಿದ್ದಾಳೆ, ಚಂದ್ರಾ! ಅದು ಎಷ್ಟು ಮಾತ್ರಕ್ಕೂ ಸೇರಿಕೆಯಿಲ್ಲ. ಅವಳಿಗೆ! ಚಂದ್ರ...... ಸುಂದರನಾಗಿದ್ದಾನೆ ನಿಜ! ಆದರೆ ಎಂಥ ಕಲಂಕ ತುಂಬಿದೆ ಅವನ ಬಿಂಬದಲ್ಲಿ!

ಮೊದಮೊದಲೇನೋ ಅವಳ ಮದುವೆಯಾಗಿಲ್ಲವೆಂದೆ ನನ್ನ ಭಾವನೆಯಾಗಿತ್ತು. ನನ್ನ ತರ್ಕ ಸರಿಯಾಗಲಿಲ್ಲ. ಅವಳ ಬಾಯಿಂದ ಅವಳ ಕಥೆಯನ್ನು ಕೇಳಿದಾಗ ಒಂದು ಹೊಸ ಪ್ರಪಂಚವನ್ನೆ ಸುತ್ತಿ ಬಂದಂತಾಯಿತು. ನನಗೆ..... ಒಂದು ಅಗ್ನಿಪರೀಕ್ಷೆ ಅವಳ ಬಾಳು!

ಚಂದ್ರಾ ಜಳಕ ಮಾಡಿ ಮಡಿಯನ್ನುಂಟುಕೊಂಡು ಶುಚಿಯಾಗಿದ್ದಳು. ಅವಳ ನೀಲವಾದ ಆ ಕುಂತಳ ರಾಜಿ ಬೆನ್ನಿನ ಮೇಲೆ ಉದ್ದವಾಗಿ ಒರಗಿಕೊಂಡಿದ್ದವು. ಅವಳ ಮದುವೆಯ ಸವಿನೆನಪಿನ ಕಟು ಅನುಭವದ ದಿನ ಅದು. ಆ ಹೊತ್ತಿಗೆ ಒಂಭತ್ತು ವರ್ಷದ ಹಿಂದೆ ಚಂದ್ರಾ ಹಸೆಮಣೆಯ ಮೇಲೆ ಕುಳಿತಿದ್ದಳು. ಮದುವಣಗಿತ್ತಿಯಾಗಿ! ಆ ದಿನವನ್ನು ಅವಳು ಇನ್ನೂ ಮರೆತಿಲ್ಲ.... ವರ್ಷ ವರ್ಷವೂ ಆಚರಿಸುತ್ತಿದ್ದಾಳೆ ಅದನ್ನು ಶ್ರದ್ಧೆಯಿಂದ.

ಭಾಗ್ಯಶಾಲಿ... ಆದರೂ ಹತಭಾಗ್ಯೆ, ಚಂದ್ರಾ.

ಅವಳಿಗೆ ತಂದೆ ಇದ್ದಾನೆ. ತಾಯಿ ಇದ್ದಾಳೆ. ಅಣ್ಣತಮ್ಮಂದಿರಿದ್ದಾರೆ. ಕೂದಲಿಗೊಂದು ಬಳಗವಿದೆ ಅವಳಿಗೆ. ಹೂವಿನಂತೆ ಎತ್ತಿ ಆಡಿಸುವ ಕರುಳ ಸಂಬಂಧ ಅವಳ ಸುತ್ತಲೂ ಹೆಣೆದುಕೊಂಡಿದೆ. ಇಷ್ಟೊಂದು ಜನ ನೆಂಟರಿಷ್ಟರ ನಡುವಿದ್ದರೂ ಆಕೆ ಅನಾಥೆ, ಒಂಟಿ, ಪರದೇಶಿ. ಎಂಥ ದುರ್ದೈವ ಅವಳದು.

ಆಕೆಯ ತಾಯಿ ದೇವರಿಗೆ ಹರಕೆ ಹೊತ್ತು ವ್ರತನಿಯಮ ಹಿಡಿದು ಬಯಸಿ ಹಡೆದ ಮುದ್ದಿನ ಕುವರಿ ಅವಳು. ಅವಳಿಗೆ ಯಾವ ನೋವೂ ವ್ಯಥೆಯೂ ಉಂಟಾಗದಂತೆ ಆ ತಾಯಿ ಸಾಕಿ ಸಲುಹಿದಳು. ಇವಳ ಬೆಳಿಗೆ, ಏಳ್ಗೆ, ಕಲ್ಯಾಣದ ಮೇಲೆ ಆ ಮಾತೃಹೃದಯದ ಕಾವು ಕೂತಿತ್ತು. ಚಂದ್ರಾ ಆ ಮಮತೆಯ ತೋಳ ತೊಟ್ಟಿಲಲ್ಲಿ ಸೌಂದರ್ಯಮೋಹಿನಿಯಾಗಿ ಬೆಳೆದಳು... ಸುತ್ತಲಿನ ಹತ್ತೂ ಹಳ್ಳಿಗೆಲ್ಲ ಅವಳೊಬ್ಬಳೇ ಬಿನ್ನಾಣಗಿತ್ತಿ.

ಅವಳ ಚೆಲುವಿಗೆ ಆ ಮದನೂರಿನ ಹುಡುಗ ತಕ್ಕ ವರನಲ್ಲವೆಂದು ನಿಬ್ಬಣಕ್ಕೆ ಬಂದ ಜನ ಆಡಿಕೊಂಡರು.

ತನ್ನ ಮನೆಯ ಮುಂದೆ ಹಂದರ ಹಾಕಿ ಮದುವೆ ಮಾಡಿಕೊಟ್ಟು, ಅಳಿಯನನ್ನೂ ಮಗಳನ್ನೂ ಕಣ್ಣು–ಪ್ರೀತಿ ಹರಿಯುವವರೆಗೆ ನೋಡಿ, ಹಿರಿಹಿರಿ ಹಿಗ್ಗಿದಳು. ಆ ತಾಯಿ – ಚಂದ್ರಾನ ತಾಯಿ.

ಈಗ ಅದೆಲ್ಲವೂ ಒಂದು ಮಧುರವಾದ ಸಪ್ನದಂತೆ ಕಾಣುತ್ತದೆ ಎಂದು ಚಂದ್ರಾ ನನ್ನೆದುರು ಹೇಳುತ್ತಾಳೆ. ಹೇಳುವಾಗ ಅವಳ ಧ್ವನಿ ಕಂಪಿಸುತ್ತದೆ. ಕಣ್ಣುಗಳೆರಡೂ ಅಶ್ರು ಜಲಧಿಯಲ್ಲಿ ಮುಳುಗಿರುತ್ತವೆ.

ಹೌದು, ಚಂದ್ರಾನನ್ನು ಮದುವೆಯಾದ ಮೂರು ತಿಂಗಳಿನ ಮೇಲೆ ಗಂಡನ ಮನೆಗೆ ಕಳಿಸಿಕೊಟ್ಟರು. ಮಗಳು ಇನ್ನು ತನ್ನಿಂದ ಅಗಲಿ ಬೇರೆ ಹೋಗುತ್ತಾಳೆ ಎಂದು ಅವಳ ತಾಯಿ ಎಂಟು ದಿನಗಳಿಂದ ಊಟವನ್ನು ಕೂಡ ಸರಿಯಾಗಿ ಮಾಡಿರಲಿಲ್ಲವಂತೆ. ನಾಳೆ ಹೋಗುವುದೆಂದರೆ ಅದರ ಹಿಂದಿನ ರಾತ್ರಿ ತಾಯಿಮಕ್ಕಳಿಬ್ಬರೂ ತಬ್ಬಿಕೊಂಡು ಒಬ್ಬರೊಬ್ಬರ ತೋಳಿನಲ್ಲಿ ಬಿಕ್ಕಿದರು. ಬೆಳಿಗ್ಗೆ ಎದ್ದಾಗ ಇಬ್ಬರ ಕಣ್ಣುಗಳೂ ಊದಿಕೊಂಡಿದ್ದವು. ಚಂದ್ರಾ ಹೊರಟು ನಿಂತಾಗ ಅವಳ ತಾಯಿಗೆ ಉಕ್ಕಿ ಉಕ್ಕಿ ಬರುತ್ತಿದ್ದ ಆ ಕಣ್ಣೀರನ್ನು

ಹಿಂದಕ್ಕೊಡಿಸುವುದಾಗಲಿಲ್ಲ.

ಈಗ ಅದನ್ನೆಲ್ಲ, ಚಂದ್ರಾ, ತನ್ನ ಮನಸ್ಸಿನಲ್ಲಿ ಮೆಲುಕುಹಾಕುವಳು. ಅವಳು ಪತಿಯ ಗೃಹವನ್ನು ಸೇರಲು ಹೊರಟುನಿಂತ ಕಾಲಕ್ಕೆ ಗುರುಹಿರಿಯರು, ನೆಂಟರಿಷ್ಟರು ಏನೆಂದು ಹರಿಸಿದ್ದರು, ಅವಳನ್ನು?

"ಗೃಹಿಣಿಯಾಗಿ, ಮುತ್ತೈದೆಯಾಗಿ–ಬಾಳು"

ಅವರ ಆಶೀರ್ವಾದದ ನೆನಪು ಬಂದರೆ ಅವಳಿಗೆ ಸಾವಿರ ಚೇಳು ಕುಟುಕಿದ ಯಾತನೆ. ಇಷ್ಟೊಂದು ಜೀವಗಳನ್ನೆ ಎಳೆದೊಯ್ಯುತ್ತದೆ... ಸಾವು, ತನ್ನನ್ನೇಕೆ ನುಂಗಿಕೊಳ್ಳಬಾರದು? ಇನ್ನೂ ಯಾವ ನರಕವನ್ನು ಸವಿದುಬರಲು ತಾನು ಬದುಕಿರಬೇಕು?

ಹಗಲಿರುಳು ಇದೇ ಇದೇ ಕನವರಿಕೆ ಚಂದ್ರಾಳಿಗೆ!

ಅವಳಿಗೆ ಕಳಂಕ ಯಾಕೆ ಬಂತು? ಚಂದ್ರಾ ಎಂದು ಅವಳ ತಾಯಿ–ತಂದೆ ಲಲ್ಲೆಯಿಂದ ಮುದ್ದಾಡಿ ನಾಮಕರಣ ಮಾಡಿದ್ದು ತಪ್ಪಾಯಿತೇನು?

ಅವಳ ಗಂಡ ಹೇಮಣ್ಣನಂತೂ ಆಕೆಯನ್ನು ತನ್ನ ಕಣ್ಣುಗೊಂಬೆಯಂತೆ ಗಂಡನಿಗಿರಬಹುದಾದ ಸ್ನೇಹ, ಮಮತೆ, ಕರುಣೆಗಳಿಂದ ನೋಡಿಕೊಂಡ. ಜೀವನ ಮಧುಪರ್ಕವಾಗಿತ್ತು– ಈ ಹಾಲಿನ ಕಡಲಲ್ಲಿ ಹುಳಿ ಯಾವ ಕಡೆಯಿಂದ ಬಂದು ಬೆರೆತುಕೊಂಡಿತು ?

ಅಯ್ಯೊ, ಚಂದ್ರಾ.... ಅಭಿಮನ್ಯುವನ್ನು ಕೊಲ್ಲಲು ಎಷ್ಟೊಂದು ಚಕ್ರವ್ಯೂಹಗಳು. ಹೆಣ್ಣನ್ನು ಅಬಲೆಯೆಂದು ದೂಡಲು ಎಷ್ಟೊಂದು ಮೋಸ, ಎಷ್ಟೊಂದು ವಂಚನೆ, ಎಷ್ಟೊಂದು ಕ್ರೌರ್ಯ.

೫

ಮದನೂರಿನಲ್ಲಿ ಬಹಳ ನೆಮ್ಮದಿಯಾಗಿ ಬಾಳಿಕೊಂಡಿದ್ದಳು, ಚಂದ್ರಾ. ಮನೆಯಲ್ಲಿ ತನ್ನ ಜೊತೆಗೆ ಗಂಡ, ಅತ್ತೆ ಇಷ್ಟೆ ಜನ. ಆಕೆ ತುಂಬ ಸುಖಿ... ಖಂಡಿತವಾಗಿಯೂ ಪುಣ್ಯಮಾಡಿ ಬಂದಿದ್ದಾಳೆ ಅವಳು. ಅತ್ತೆ ಸೊಸೆಯನ್ನು ಒಳ್ಳೆ ಮುದ್ದುಮುದ್ದಾಗಿ ಕಂಡಳು. ಅವಳಿಗೆ ಮಗಳಿಗಿಂತ ಹೆಚ್ಚಾದ ಮಮತೆ ಸೊಸೆಯ ಮೇಲೆ. ಒಂದು ದೃಷ್ಟಿಯಲ್ಲಿ ನೋಡಿದರೆ ಆಕೆ ಚಂದ್ರಾನ ತಾಯಿಯೂ ಸರಿ. ಸ್ವತಃ ತಾಯಿಯೆ ಅತ್ತೆಯ ರೂಪದಲ್ಲಿ ಬಂದು ನಿಂತಿರುವಂತೆ ಅವಳಿಗೆ ಎಷ್ಟೋ ಸಲ ಭಾಸವಾಗಿದೆ.

ಆ ಮಾತನ್ನು ನನ್ನೆದುರು ಬಹಳ ವಿನಯ ಸೌಜನ್ಯ ಗೌರವಗಳಿಂದ ಆಡಿದ್ದಾಳೆ ಚಂದ್ರಾ. ಒಳ್ಳೆಯ ಜನ ಬಹಳ ದಿನ ಬದುಕುವುದಿಲ್ಲವಂತೆ. ತಮ್ಮ ಅತ್ತೆಯ ಜೀವನವನ್ನೂ ತನ್ನ ಜೀವನವನ್ನೂ ತುಲನೆ ಮಾಡಿಕೊಂಡು ಈ ಮಾತನ್ನು ಅವಳು ಈ ಹೊತ್ತಿಗೂ ಹೇಳುತ್ತಾಳೆ... ತಾನು ಈಗಾಗಲೆ ಬಹಳ ದಿನ ಬದುಕಿರುವಂತೆ ಅವಳ ಕಲ್ಪನೆ.

ಪಾಪ, ಬಟ್ಟೆಬರೆ ಸೆಳೆದುಕೊಂಡು ಬರಲು ಅವಳು ಬಾವಿಗಿಳಿದದ್ದೆ ತಪ್ಪಾಯಿತಂತೆ. ಯಾರಿಗೇನು ಜೋಲಿ ಹೋಗುವುದಿಲ್ಲವೆ ? .... ಕಾಲು ಜಾರುವುದಿಲ್ಲವೆ? ಆದರೆ ಅವಳ ಅತ್ತೆಯ ಜೀವನ ಬೇರೆ ಕಥೆಯನ್ನೇ ಹೇಳುತ್ತದೆ. ಆ ದಿನ ಕಾಲು ಜಾರಿದ್ದೇ ನೆವ ! ಆನಂತರ ಎರಡು ಮೂರು ದಿನ ತಲೆ ಸಿಡಿಯುವಷ್ಟು ಉರಿ ಕಾದವಂತೆ. ನಾಲ್ಕನೆಯ ದಿನ ಆ ಪುಣ್ಯಾತ್ಮೆ ಪ್ರಪಂಚದಿಂದಲೆ ಸಿಡಿದುಹೋದಳು.

ಹಾ ಹೂ ಅನ್ನುವುದರೊಳಗೆ ಬಂಧುಬಳಗ ಕವಿದುಕೊಂಡು ಬಂದಿತು. ಬಂದವರು ಬಂದಷ್ಟೆ ಶೀಘ್ರವಾಗಿ ತಿರುಗಿ ಹೋದರು.

ಚಂದ್ರಾಳ ತಾಯಿ ಮಾತ್ರ ಇನ್ನೂ ನಾಲ್ಕು ಒಪ್ಪೊತ್ತು ನಿಂತಳು. ಮಗಳ ಸಮಾಧಾನಕ್ಕಾಗಿ– ಅಳಿಯನ ದುಃಖ ಶಮನಕ್ಕಾಗಿ. ಆದರೆ ಆ ಅಳು–ದುಃಖ ಕೇಳುತ್ತ ಆಕೆ ಹೀಗೆಯೆ ಎಷ್ಟು ದಿನ ಕುಳಿತುಕೊಂಡಾಳು? ಅವಳಿಗೇನು ಅನುವು ಆಪತ್ತಿಗೆ ಕಡಿಮೆಯೆ?

ಮದನೂರಿನಲ್ಲಿ ಎರಡು ತಿಂಗಳ ಕಾಲ ನಿಂತು ಆಕೆ ತಮ್ಮ ಊರಿಗೆ ಹೊರಟು ನಿಂತಳು. ಮಗಳ ಅಗಲಿಕೆಯಿಂದ ಜರ್ಝರಿತವಾಗಿದ್ದ ಅವಳ ಹೃದಯ, ಅಳಿಯನ ಉನ್ಮಾದ ವರ್ತನೆಯನ್ನು ಕಂಡು ಇನ್ನೂ ಸೀದುಹೋಗಿತ್ತು.

"ಚಂದ್ರಾ, ನಿನ್ನ ಅವಸ್ಥೆ ಏನೇ?" ಎಂದು ಅವಳು ಗೋಗರೆದು ಕಣ್ಣೀರು ಹಾಕಿದಳಂತೆ ಆ ದಿವಸ.

"ಈಗ ನನ್ನ ಅವಸ್ಥೆ ಏನಾಗಿದೆ ನೋಡಿರಿ" ಎಂದು ಚಂದ್ರಾ ತನ್ನ ಕರುಣ ಕತೆಯನ್ನು ಅಂತಃಕರಣ ಕಲಮಲಗೊಳ್ಳುವಂತೆ ಹೇಳಿ ನನ್ನೆದುರು ಬಿದ್ದು ಬಿದ್ದು ಅಳುತ್ತಾಳೆ.

ಹೇಮಣ್ಣನ ಸ್ವಭಾವ ಒಮ್ಮೆಂದೊಮ್ಮೆಲೆ ಹಾಗೆ ವಿಚಿತ್ರವಾಗಿ ಪಲ್ಲಟವಾಗಲಿಕ್ಕೆ ಕಾರಣವೇನೊ. ನಿರ್ದಿಷ್ಟವಾಗಿ ಏನೊಂದೂ ತಿಳಿಯದು. ನಾನಾ ಜನ ನಾನಾ ತೆರನಾಗಿ ಹೇಳುತ್ತಾರೆ. ಒಬ್ಬರು ಕೊಡುವ ಕಾರಣ ಇನ್ನೊಬ್ಬರು ಹೇಳು ಕಾರಣಕ್ಕೆ ಎಲ್ಲಿಯೂ ಸಂಬಂಧವಾಗುವುದಿಲ್ಲ. ಬಾಯಿಯಿದ್ದವರು ತಮ್ಮ ಬಾಯಿಗೆ ಬಂದಂತೆ ಆಡಿಕೊಂಡರು. ಅವರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶವಿದೆಯೊ ಹೇಳಲಿಕ್ಕಾಗದು.

"ನನ್ನ ದೃಷ್ಟಿಗೆ ಒಂದು ಸತ್ಯ ಹೊಳೆಯುತ್ತದೆ" ಎಂದಳು ಚಂದ್ರಾ. ಅದು ಸತ್ಯವಾಗಿರಬೇಕೆಂದು ಅವಳ ಭಾವನೆ. ಹಾಗೆಯೆ ಇದ್ದಿರಬೇಕೆಂದು ನಮ್ಮದು ಕೂಡ.

ಹೇಮಣ್ಣನ ತಂದೆಗೆ ಇಬ್ಬರು ಹೆಂಡಿರಂತೆ. ಮೊದಲನೆಯ ಹೆಂಡತಿಯನ್ನು ಹೇಮಣ್ಣನ ತಂದೆ ಏನು ಕಾರಣದಿಂದಲೊ ಬಿಟ್ಟುಬಿಟ್ಟರಂತೆ. ಆ ಮೇಲೆ ಲಗ್ನವಾದ ಹೆಂಡತಿಯೆ ಹೇಮಣ್ಣನ ತಾಯಿ. ಇವನ ಮಲತಾಯಿ ಈಗಲೂ ಜೀವಿಸಿದ್ದಾಳಂತೆ. ಹೇಮಣ್ಣನ ಬಗ್ಗೆ ಅವಳ ಎದೆಯಲ್ಲಿ ಇಲ್ಲದ ವಿಷ, ಇಲ್ಲದ ಈರ್ಷೆ, ಅವಳೆ ಮದ್ದು ಮಾಟ ಏನಾದರೂ ಮಾಡಿಸಿರಬೇಕು ಎಂದು ಜನ ಹೇಳುತ್ತಾರೆ.

ಅದೇನು ಕತೆಯೊ, ಅದನ್ನೆಲ್ಲ ಯಾರು ಬಲ್ಲರು ? ಆದರೆ ಇಷ್ಟು ಮಾತ್ರ ನಿಜ. ಹುಚ್ಚಿಗೆ ಸಮೀಪವಾದ ವರ್ತನೆ ಹೇಮಣ್ಣನಲ್ಲಿ ಕಾಣತೊಡಗಿತ್ತು. ಮಾತುಕತೆಯೆಲ್ಲ ಅಸಂಬದ್ಧ. ನಡೆನುಡಿಯಲ್ಲಿ ತಾಳ–ಲಯ ಏನೊಂದೂ ಕೇಳಬಾರದು.

"ಹೇಮಣ್ಣಾ, ನಿನಗೇನು ಹುಚ್ಚುಗಿಚ್ಚೊ?" ಎಂದು ಯಾರಾದರೂ ಅವನನ್ನು ಕೇಳಿದರೆ ಸಾಕು. ಅವರನ್ನೆ ಹುಚ್ಚ ಎಂದು ಮೂದಲಿಸುತ್ತಾನೆ ಅವನು. ಹುಚ್ಚರಿಗೆ ಜಗತ್ತೆಲ್ಲವೂ ಹುಚ್ಚರಂತೆ ಕಾಣುತ್ತದೆ ಎಂದು ಹೇಳುತ್ತಾರೆ. ಆ ಮಾತಿಗೆ ಸಾಕ್ಷಿ ಹೇಮಣ್ಣನೇನೊ!

ಚಂದ್ರಾನ ಜೀವನದಲ್ಲಿ ದುಃಖದಾಯಕವಾದ ಕಾಲ ಅದು... ಆದರೂ ಆ ಜೀವನದಲ್ಲಿ ಆನಂದವಿತ್ತು ಎನ್ನುತ್ತಾಳೆ, ಚಂದ್ರಾ. ಗಂಡನನ್ನು ಎದುರಿಗಿಟ್ಟುಕೊಂಡ ಎಂಥ ಸಿಡಿಲ ಆಘಾತವನ್ನಾದರೂ ಸಹಿಸಿಕೊಳ್ಳಬಹುದಂತೆ.

ಆಗ ಹತ್ತೂ ನಿಟ್ಟಿನಿಂದ ಸಂಕಟ ಅವಳಿಗೆ. ಇಬ್ಬರ ಅನ್ನ ತಾನೊಬ್ಬಳೆ ಸಂಪಾದಿಸಬೇಕು. ಆಳನ್ನು ಕಟ್ಟಿಕೊಂಡು ಹೊಲಮನೆಯ ಬದುಕನ್ನು ನೋಡಿಕೊಳ್ಳಬೇಕು. ಮನೆಯ ಗಂಡು ಹೆಣ್ಣು– ಎರಡೂ ಅವಳೊಬ್ಬಳೆ.

ಇನ್ನು ಇವರ ಸಂಗಡವೆ ಗಂಡನ ಯೋಗಕ್ಷೇಮ ನೋಡಿಕೊಳ್ಳಬೇಕು. ಅವನ ಹುಚ್ಚನ್ನು ನಿವಾರಣೆಗೊಳಿಸಲು ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ನಡೆಸಬೇಕು. ಹುಚ್ಚಿನವರ ಸಹವಾಸ ಸಿಡಿಗುಂಡಿನ ಸ್ನೇಹವಿದ್ದಂತೆ. ಮೈಮೇಲಿನ ಸ್ಮರಣೆ ತಪ್ಪಿ ಹುಚ್ಚು ಯಾವಾಗ ಬಂದೀತೋ ಹೇಳಲಿಕ್ಕಾಗದು. ಅವರ ಜೊತೆಯಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅವೆಲ್ಲ ಬಹಳ ನಾಜೂಕು.

ಇವೆಲ್ಲ ಸಂಕಷ್ಟಗಳಲ್ಲಿಯೂ ಚಂದ್ರಾ ಹೇಗೊ ಧೈರ್ಯ ತಂದುಕೊಂಡಿದ್ದಳು. ಅವಳು ಎಲ್ಲಿಯೊ ಚಿಕ್ಕಂದಿನಲ್ಲಿ ವಿಷ್ಣುವಿನ ಮೋಹಿನಿ ಅವತಾರದ ಕತೆಯನ್ನು ಬಯಲಾಟದಲ್ಲಿ ನೋಡಿರಬೇಕು.

"ಈ ಹಾಲಾಹಲ ಮುಗಿದ ಮೇಲೆ ಅಮೃತ ಸೃಷ್ಟಿಯಾಗಲೇಬೇಕು." ಎಂದು ಆಕೆ ತನ್ನ ಜೀರ್ಣವಾದ ಮನಸ್ಸಿಗೆ ಸತತವೂ ಸಮಾಧಾನ ಹೇಳುತ್ತಿದ್ದಳಂತೆ.

೬.

ಅದೇನೊ, ಆ ಮಾತು ಆ ಕಡೆ ಇರಲಿ.

ಅವಳನ್ನು ಆ ಕಾಲಕ್ಕೆ ಒಂದು ಭಯ ಸಣ್ಣಗೆ ತಿನ್ನತೊಡಗಿತ್ತು. ಅದೇನೂ ಸುಳ್ಳಲ್ಲ. ವಾದವಿಲ್ಲದ ಸಂಗತಿ ಅದು. ಹಿಂದೆ ತೋಟದ ದುರಸ್ತಿ ನಡೆಯಬೇಕಾಗಿತ್ತು. ಆ ಸಂಬಂಧವಾಗಿ ಅವರ ಮಾವ ಒಯ್ದು ಸಾಲ ಇನ್ನೂ ಹಾಗೇ ಇದೆ. ಅದು ದಿನದಿನಕ್ಕೆ ಭಾರವಾಗುತ್ತ ನಡೆಯುವ ವಸ್ತು. ಸಾಲವನ್ನಿಟ್ಟುಕೊಂಡು ಬದುಕುವುದೆಂದರೆ ಹಾವಿನ

ನೆರಳಲ್ಲಿ ವಾಸ ಮಾಡಿಕೊಂಡಿದ್ದಂತೆ. ಯಾವಾಗ ಕಚ್ಚಿತೋ ಹೇಳಲಿಕ್ಕಾಗದು.

ಚಂದ್ರಾ ಇದನ್ನೆಲ್ಲ ಚೆನ್ನಾಗಿ ಗ್ರಹಿಸಿದ್ದಳು. ಅದಕ್ಕೆಂತಲೆ ಆಕೆ ಸಾಲ ಮುಟ್ಟಿಸಿ ಋಣಮುಕ್ತಳಾಗಬೇಕೆಂದು ಹಗಲುರಾತ್ರಿಯೆನ್ನದೆ ದೇಹ ಸವೆಸಿ ದುಡಿಯುತ್ತಿದ್ದಳು. ಆಗ ಏನು ಉತ್ಸಾಹ ತುಂಬಿತ್ತು ಅವಳಲ್ಲಿ. ತಾನೆ ತೋಟದ ಬೆಳೆಯನ್ನು ಸಂತೆಗೆ ಹೊತ್ತು ಸ್ವತಃ ಮಾರಿ ಬರುವಳು. ಅರ್ಧ ಸಾಲವನ್ನು ಪರಿಹರಿಸಿದ ಸಂತೃಪ್ತಿ ಅವಳ ಮುಖದಲ್ಲಿ ಬರೆದಿತ್ತು. ಮುಂದಿನ ಜೀವನದ ಸುಖಮಯ ಸ್ವಪ್ನಗಳನ್ನು ಆಕೆ ಆಗಲೆ ಮನಸ್ಸಿನಲ್ಲಿ ನೆಯ್ಯತೊಡಗಿದ್ದಳು.

ಅವಳ ಹಾರೈಕೆಯಂತೆ ಹೇಮಣ್ಣನ ಹುಚ್ಚು ಮಾತ್ರ ಇಳಿಮುಖವಾಗಲಿಲ್ಲ. ದಿನಕ್ಕೊಂದು ಹಂತದಂತೆ ಅದು ಇನ್ನೂ ಏರತೊಡಗಿತು. ಸುತ್ತುಮುತ್ತು ಎಡಬಲದಲ್ಲಿ ತನಗೆ ಗೊತ್ತಿರಬಹುದಾದ ಎಲ್ಲ ಚಿಕ್ಕದೊಡ್ಡ ದೇವರುಗಳಿಗೆ ಆಕೆ ಮುಡಿಪು ಕಟ್ಟಿದಳು. ಅವಳು ಗುಡ್ಡದವರೆಗೆ "ದಿಂಡರಿಕೆ" ಹಾಕುವುದಾಗಿ ಎಲ್ಲಮ್ಮನಿಗೆ ಹರಕೆ ಹೊತ್ತಳು. ಆದರೆ ಅವಳ ಬಿನ್ನಹವನ್ನು ಯಾವ ದೇವತೆಯೂ ಮನ್ನಿಸಿದಂತೆ ಕಾಣಲಿಲ್ಲ. ಅವಳ ಕೂಗು ಅರಣ್ಯರೋದನ.

ನಾನು ಇನ್ನು ಹೇಳಬೇಕಾಗಿರುವ ಮಾತನ್ನು ನನ್ನೆದುರು ತೋಡಿಕೊಳ್ಳುವಾಗ ಚಂದ್ರಾ ಮನಸ್ಸಿಗೆ ಬಹಳ ಖಿನ್ನ ಮಾಡಿಕೊಂಡಳು. ಅವಳ ಧ್ವನಿಯಲ್ಲಿ ರೋದನೆ ಶೃತಿಯಾಡತೊಡಗಿತ್ತು.

ಆ ಹೊತ್ತು ಸಂತೆಯನ್ನು ಮುಗಿಸಿ ಚಂದ್ರಾ ತನ್ನ ಊರಿಗೆ ಹೊರಟು ನಿಲ್ಲುವ ಹೊತ್ತಿಗೆ ಸಂಜೆ ಇಣುಕಿತ್ತು. ಗೋಕಾಕದಿಂದ ತನ್ನ ಊರು ಸೇರಬೇಕಾದರೆ ಅವಳು ಏಳು ಮೈಲು ನಡೆದುಹೋಗಬೇಕು. ಜೊತೆಗೆ ಭಾರವಾದ ಬುಟ್ಟಿ.... ಮನೆತನದ ಸಾಮಗ್ರಿಯೆಲ್ಲ ಅದರಲ್ಲಿ.

ಮೈಲೆರಡು ಮೈಲಿ ಹೋಗಿರಬಹುದು ಆಕೆ. ಸವಾರಿ ಗಾಡಿಯೊಂದು "ಗಿಲ್" "ಗಿಲ್" ಎಂದು ಒಂದು ಗತ್ತಿನಲ್ಲಿ ಧ್ವನಿಗೈಯುತ್ತ ಅವಳ ಹಿಂದಿನಿಂದ ಬಂದಿತು. ಗಾಡಿಯನ್ನು ತರುಬಿ ಯಾರೊ ಕೂಗಿದರು. ಚಂದ್ರಾ ಹಿಂತಿರುಗಿ ನೋಡಿದಳು. ಅದು ಅವರ ಊರಿನ ಶೆಟ್ಟರ ಗಾಡಿ. ಅವರಿಗೆ ಸಾಲ ಕೊಟ್ಟ ಸಾಹುಕಾರರದು. ಚಂದ್ರಾ ಯೋಚನೆಗೊಳಗಾದಳು. "ಅನುಮಾನಿಸ್ತೀ ಯಾಕೆ ? ಬಾ, ಬಾ, ಕತ್ತಲಾಯ್ತು" ಎಂದ ಆ ಗಾಡಿಯಲ್ಲಿದ್ದ ಮನುಷ್ಯ. ಅವಳು ಹೋಗಿ ತನ್ನ ಬುಟ್ಟಿಯನ್ನಿಟ್ಟುಕೊಂಡು ಗಾಡಿಯಲ್ಲಿ ಕುಳಿತಳು.

ಆ ಶೆಟ್ಟರ ಹುಡುಗನ ಬಗ್ಗೆ ಚಂದ್ರಾಳಿಗೆ ಎಂದಿನಿಂದಲೂ ಸಂಶಯ. ಈಗ ಅವನಿಗೆ ಹೆಂಡತಿ ಬೇರೆ ಇಲ್ಲ. ಹುಮ್ಮಸ್ಸಿನಿಂದ ಹೊರಟ ಗಾಡಿ ಆಗಲೆ ನಿಧಾನವಾಗಿ

ನಡೆದಿತ್ತು. ಆ ಈ ಮಾತನ್ನು ಅವನು ಹರಟೆಗೆತ್ತಿಕೊಂಡು ತನ್ನ ಸ್ನೇಹಿತನಾದ ಹೇಮಣ್ಣನ ಪಾಡನ್ನು ಕುರಿತು ಅವಳೆದುರು ನಾಲ್ಕು ಕನಿಕರದ ಕಣ್ಣೀರನ್ನು ಸುರಿಸಿದ.

ದಾರಿ ಮೊದಲೆ ಸ್ವಲ್ಪ ಕಡಿದು. ಇನ್ನು ಹಿಂಬದಿಗಂತೂ ಮೂಲೆ ಭಾರವಾಗಿತ್ತು. ಎತ್ತಿನ ಕೊರಳು ಹಾರತೊಡಗಿದವು. "ಮುಂದಕ್ಕೆ ಬಾ" ಎಂದ ಅವನು. ಅವಳು ಸ್ವಲ್ಪ ಸರಿದುಕೊಂಡಳು. ಆಗ ಅವನು "ಇನ್ನೂ ಸ್ವಲ್ಪ" ಎಂದ. ಎತ್ತಿಗೆ ಹಗುರಾಯಿತು.... ಆದರೂ "ದುಡುಕು"

ಇಬ್ಬರ ಮೈಯೂ ಒಂದಕ್ಕೊಂದು ತಾಕಿದಾಗ ಎಂಥ ವಿದ್ಯುತ್ಸಂಚಾರ ಅದು.

"ಎಷ್ಟು ದಿನದಿಂದ ಈ ಆಸೆ ಇತ್ತು ಬಲ್ಲೆಯಾ?" ಎಂದ ಶೆಟ್ಟಿ.

ಚಂದ್ರಾ ಮನಸ್ಸಿಲ್ಲದ ಮನಸ್ಸಿನಿಂದ ಅವನ ತೋಳಿನಲ್ಲಿ ಸೆರೆಯಾಗಿದ್ದಳು. ಆಕೆ ಗಾಡಿಯಿಂದಿಳಿದು ತನ್ನ ಮನೆಗೆ ಹೊರಡಲು ಅಣಿಯಾಗುತ್ತಿರುವಾಗ ಅವನು ಬಳಿಗೆ ಬಂದು ಅವಳ ಗಲ್ಲ ಹಿಡಿದು "ನೆನಪಿರಲಿ" ಎಂದನಂತೆ.

"ನನ್ನ ದುರ್ಗತಿ ಆರಂಭವಾದ ಆ ಹಾಳು ದಿನದ ನೆನಪು ಎಂದಿಗೆ ಹೋದೀತಣ್ಣಾ" ಎಂದು ಚಂದ್ರಾ ಕಂಬನಿದುಂಬಿ ಗದ್ಗದಿಸಿ ಹೇಳುತ್ತಾಳೆ ನನ್ನೆದುರು.

ಒಂದಿಲ್ಲೊಂದು ನೆವವನ್ನು ಮುಂದೆ ಮಾಡಿಕೊಂಡು ಆ ಶೆಟ್ಟಿ ಅಂದಿನಿಂದ ತೋಟಕ್ಕೆ ಮನೆಗೆ ಬಂದು ಹೋಗತೊಡಗಿದ. ಜೀವನದಲ್ಲಿ ಒಮ್ಮೆ ಜಾರಿದಳು ಚಂದ್ರಾ.

ಮಗಳ ಯೋಗಕ್ಷೇಮವನ್ನು ವಿಚಾರಿಸದೆ ಬಹಳ ದಿನವಾಯಿತೆಂದು ಅವಳ ತಾಯಿ ಆ ಸುಮಾರಕ್ಕೆ ಮದನೂರಿಗೆ ಬಂದಳು. ಮಗಳ ಚಾತುರ್ಯವನ್ನು, ವ್ಯವಹಾರ ಕುಶಲತೆಯನ್ನು ಕಂಡು ಅವಳಿಗೆ ಹೊಟ್ಟೆ ಹಿಡಿಸಲಾರದಷ್ಟು ಸಂತೋಷ! ತಿರುಗಿ ಊರಿಗೆ ಹೊರಟಾಗ್ಗೆ ತಾಯಿ ಮಗಳನ್ನು ಕರೆದು ಅವಳ ಕಿವಿಯಲ್ಲಿ ಹಿತವಚನ ಹೇಳಿದಳಂತೆ:

"ಹಿರಿಯರಿಲ್ಲದ ಮನೆ ನಮ್ಮವ್ವ! ಹುಟ್ಟಿದ ಮನೆಗೆ ಕೀರ್ತಿ, ಕೊಟ್ಟ ಮನೆಗೆ ಮರ್ಯಾದೆ– ಬರಬೇಕು ತಾಯೀ, ನಿನ್ನಿಂದ!"

ತನ್ನ ತಾಯಿಯ ಮಾತನ್ನು ನೆನೆದುಕೊಂಡು ಚಂದ್ರಾ ಬಿಕ್ಕಿ ಬಿಕ್ಕಿ ಅಳುತ್ತಾಳೆ ಈಗಲೂ! ತನ್ನಿಂದ ತಾಯಿ–ತಂದೆಗಳ, ಗಂಡ–ಮಾವಂದಿರ ವಂಶಕ್ಕೆ ಎಂಥ ಕೀರ್ತಿ? "ಅಯ್ಯೋ, ಚಂದ್ರಾ ! ನೀನು ಹುಟ್ಟದೆ ಇದ್ದಿದ್ದರೆ ಏನು ಅನರ್ಥವಾಗುತ್ತಿತ್ತು ಈ ಪ್ರಪಂಚದಲ್ಲಿ?" ಎಂದು ಆಕೆ ತನ್ನನ್ನು ಹಗಲಿರುಳು ಶಪಿಸಿಕೊಳ್ಳುತ್ತಾಳೆ.

೭

ತಾಯಿಯ ಉಪದೇಶ ಚಂದ್ರಾನನ್ನು ಮೇಲಿಂದ ಮೇಲೆ ಎಚ್ಚರಿಸುತ್ತಿತ್ತು. ಅನುಚಿತಕ್ಕೆ ತೊಡಗಿದಾಗ ಅದು ಯಾವಾಗಲೂ ಎದುರಿಗೆ ಬಂದು ನಿಲ್ಲುತ್ತಿತು.

ಪಾಪ–ಪುಣ್ಯಗಳ ನಡುವೆ ಅವಳ ಜೀವದ ಜೋಕಾಲಿ ತೂಗತೊಡಗಿತ್ತು. ಹೃದಯ

ಸದಾಕಾಲ ವಿವೇಕವನ್ನು ಬೋಧಿಸಿದರೂ ರಾತ್ರಿ ಆ ಶೆಟ್ಟಿ ಕದವನ್ನು ಬಡಿದಾಗ ಕಾಲು ಅವಳನ್ನು ಸುಮ್ಮನೆ ಬಾಗಿಲಿಗೆ ಎಳೆದುಕೊಂಡು ಹೋಗುವುವು.

ಈ ರೀತಿಯಾಗಿ ದಿನದ ಮೇಲೆ ದಿನ ಕರಗಿ ಹೋಗತೊಡಗಿದವು. ಗುಸುಗುಸು ಎಂದು ಹಿಂದೆಮುಂದೆ ಆಡಿಕೊಳ್ಳುತ್ತಿದ್ದ ಜನ ಈಗ ಎದುರಿಗೇ ಪ್ರಾರಂಭ ಮಾಡಿದರು. ಸುದ್ದಿಯಂತೂ ಕರ್ಣಾಕರ್ಣಿಯಾಗ ಹಬ್ಬಿಹೋಯಿತು. ಮದನೂರಿನ ತುಂಬೆಲ್ಲ ಅದೇ ಮಾತು.

ಈ ಸಂಗತಿಯನ್ನು ಕೇಳಿದಾಗ ಚಂದ್ರಾನ ತಾಯಿಗೆ ಜೀವ ನಡುನೆತ್ತಿಯಿಂದ ಹಾರಿಹೋದಂತಾಯಿತು.

"ಇನ್ನೂ ಬದುಕಿರಬೇಕೆ, ಹಾಳುರಂಡೆ? ಸತ್ತುಹೋದರೆ ಒಂದು ನಿಶ್ಚಿಂತೆ!" ಎಂದು ಉಸಿರ್ಗರೆದಳಂತೆ ಅವಳು.

ಆಗಲೆ ಸತ್ತುಹೋಗಿದ್ದರೆ ತನ್ನ ಕರ್ಮದ ಕಥೆ ಇಷ್ಟೊಂದು ಉದ್ದವಾಗಿ ಬೆಳೆಯುವುದಾದರೂ ತಪ್ಪಿಹೋಗುತ್ತಿತ್ತು ಎಂದು ಚಂದ್ರಾ ಗಂಟಲಲ್ಲಿ ಕಣ್ಣೀರು ನುಂಗಿ ಹೇಳಿದಳು.

ಇದ್ದ ಒಬ್ಬ ಮಗಳು ಸತ್ತುಹೋದಳೆಂದು ಅವಳ ತಾಯಿ ಆಗಲೆ ಮನಸ್ಸನ್ನು ಕಲ್ಲುಮಾಡಿಕೊಂಡು ಬಿಟ್ಟಳಂತೆ.

"ಜನ ಏನೆಂದುಕೊಳ್ಳುತ್ತಾರೆ, ಕೇಳಿದಿರಾ?" ಎಂದು ಚಂದ್ರಾ ಒಂದು ರಾತ್ರಿ ಮೆಲ್ಲಗೆ ಶೆಟ್ಟಿಯ ಕಿವಿಯಲ್ಲಿ ಕೇಳಿದಳು. ಶೆಟ್ಟಿ ಸುಮ್ಮನೆ ನಕ್ಕ ಆ ಮಾತಿಗೆ. ಪುನಃ "ಕೇಳಿದಿರಾ?" ಎಂದಳು ಚಂದ್ರಾ.

"ಕೇಳಿ ಮಾಡುವುದೇನು ?" ನಗುತ್ತಲೆ ಹೇಳಿದ ಶೆಟ್ಟಿ. "ನಿನಗೆಲ್ಲಾ ಅಷ್ಟೊಂದು ಯೋಚನೆ ಯಾಕೆ, ಬಿಡು! ಅನ್ನುವವರು ಸಾವಿರ ಅನ್ನುತ್ತಾರೆ. ಯಾರ ಗೊಡವೆ ನಮಗೇನು? ನನಗೆ ಹೆಂಡತಿಯಿಲ್ಲ– ನಿನ್ನ ಪಾಲಿಗಂತೂ ಗಂಡ ಎಂದೋ ಸತ್ತುಹೋಗಿದ್ದಾನೆ. ಜೀವ ದುಂದು ಮಾಡಿದರಾಯಿತು..."

ಶೆಟ್ಟಿ ಇನ್ನೂ ಮಾತು ಮುಗಿಸಿರಲಿಲ್ಲ.

ಹಾ! ಮೊನೆಯಾದ ಕೊಡಲಿ ಹಿಂದಿನಿಂದ ಬೀಸಿಬಂದು ಅವನ ತಲೆಯಲ್ಲಿ ಕಚ್ಚನೆ ಸಿಕ್ಕಿಕೊಂಡಿತು.

ಯಾವ ಸುಖವನ್ನು ಉಣ್ಣುವುದಕ್ಕಾಗಿ ಆ ದಿವಸ ತಲೆ ತಪ್ಪಿಸಿಕೊಂಡು ಬಂದೆ ಎನ್ನುತ್ತಾಳೆ ಚಂದ್ರಾ! ಗಂಡನ ಕೈಯಿಂದ ಮರಣವನ್ನು ಪಡೆದು ಗಂಡನ ಎದುರಿನಲ್ಲಿ ಕಣ್ಣುಮುಚ್ಚಿದ್ದರೆ ಎಂಥ ಪುಣ್ಯ, ಎಂಥ ಸೌಭಾಗ್ಯ ಅದು! ಆ ಕೊಡಲಿಯ ಮೊನೆಗಿಂತ ಹರಿತವಾದ ಕರ್ಕಶವಾದ ಆಘಾತಗಳನ್ನು ಸಹಿಸಬೇಕಾಗಿದೆ ಅವಳಿಂದು!... "ಅಲ್ಲವೆ

ಅಣ್ಣಾ?" ಎಂದು ಚಂದ್ರಾ ನನ್ನನ್ನು ಅಲುಗಿಸಿ ಕೇಳುತ್ತಾಳೆ. ಏನು ಹೇಳಲಿ ಅವಳಿಗೆ ನಾನು?

ಆ ದಿವಸ ಅವಳು ಜೀವದ ಮೇಲೆ ಆಸೆಯನ್ನಿಟ್ಟುಕೊಂಡು ಆ ಸ್ಥಳದಿಂದ ಏತಕ್ಕೆ ಪಾರಾಗಿ ಹೋದಳೆಂಬುದನ್ನು ಸ್ವತಃ ಚಂದ್ರಾ ಇಂದಿಗೂ ಸರಿಯಾಗಿ ಹೇಳಲಾರಳು.

ಮರುದಿನ ಹೇಮಣ್ಣಾ ಆ ರಕ್ತಮಯ ಕೊಡಲಿಯನ್ನು ಹಿಡಿದುಕೊಂಡು ಊರಲ್ಲೆಲ್ಲ ಸುತ್ತಿ ಬಂದನಂತೆ! ನೆರೆಮನೆಯಲ್ಲಿ ಅವಿತುಕೊಂಡು ಚಂದ್ರಾ ಇದನ್ನೆಲ್ಲ ಕೇಳಿದಳು, ತನ್ನ ಬಾಳುವೆ ಎಲ್ಲಿಗೆ ಬಂದು ಹತ್ತಿತಲ್ಲ ಎಂದು ಆಕೆ ಆ ಮನೆಯ ಮುದುಕಮ್ಮನ ಎದುರಿಗೆ ಅತ್ತಳಂತೆ. ಎಷ್ಟು ಅತ್ತು ಎಷ್ಟು ಕರದರೇನು ಅವಳಿಗೆ ತನ್ನ ಉದ್ಧಾರದ ಹಾದಿ ಕಾಣಲಿಲ್ಲ. ಮುಗಿಲು ಹರಿದು ಮೈಮೇಲೆ ಬಿದ್ದಂತಾಗಿತ್ತು ಅವಳಿಗೆ.

ಮಧ್ಯಾಹ್ನಕ್ಕೆ ಪೋಲೀಸರು ಬಂದು ಹೇಮಣ್ಣಾನನ್ನು ಕೈದು ಮಾಡಿಕೊಂಡು ಹೋದರು. ಇನ್ನು ಚಂದ್ರಾ ಆ ಊರಿನಲ್ಲಿ ಯಾರಿಗೆ ಮುಖ ತೋರಿಸಬೇಕು? ಯಾರು ಕಂಡರೂ ಛೀ ಥೂ ಎನ್ನುವವರೆ! ಆ ಮುದುಕಿ ಇಲ್ಲದಿದ್ದರೆ ಈಕೆ ಏನಾದರೂ ಅಪಾಯಕ್ಕೆ ತುತ್ತಾಗುತ್ತಿದ್ದಳೊ ಏನೊ! ಹಗಲು ರಾತ್ರಿ ಕಣ್ಣೆದುರಿಗೆ ಕುಳ್ಳಿರಿಸಿಕೊಂಡು ಆ ಮುದುಕಿ ತನ್ನ ಧೈರ್ಯ ಹೇಳಿದಳಂತೆ. ಮೂರು ದಿನದ ಶಿಕ್ಷಣ ಪಡೆದ ಮೇಲೆ ಚಂದ್ರಾ ಅವಳ ಮಾತಿಗೆ ಸಮ್ಮತಿಸಿದಳು. ಅವಳ ಕಣ್ಣೆದುರಿಗೆ ಆ ಮುದುಕಿ ಕಾಮನಬಿಲ್ಲಿನ ಬಣ್ಣ ಹೆಣೆದಿದ್ದಳಂತೆ.

ಯಾರ ಕಣ್ಣಿಗೂ ಬೀಳದಂತೆ ಸ್ಥಳ ಬಿಡಬೇಕೆಂದು ಮುಂಚಿತವಾಗಿಯೆ ನಿರ್ಧಾರವಾಗಿತ್ತು. ಅದರಂತೆಯೆ ರಾತ್ರೋರಾತ್ರಿ ಊರನ್ನು ಬಿಟ್ಟು ಆ ಮುದುಕಿಯೊಂದಿಗೆ ಹೊರಟು ಬಂದಳು ಚಂದ್ರಾ... ಸರೋವರ ಸಾಲದೆಂದು ಸಮುದ್ರಕ್ಕೆ ಜಿಗಿದಿತ್ತು ಅವಳ ಮನಸ್ಸು.

ಅಂದಿನಿಂದ ಅವಳ ಜೀವನದಲ್ಲಿ ಒಂದು ನೂತನವಾದ ಅಧ್ಯಾಯ ಪ್ರಾರಂಭವಾಯಿತು.

೮

ಇವಳಂಥ ಹೆಣ್ಣು ಎಷ್ಟು ಜನ ಅಲ್ಲಿ! ಅವರು ನಡೆಸಿರುವ ದೇಹಕ್ಷಯವನ್ನು ಕಂಡು "ಇಶ್" ಎಂದಳು ಚಂದ್ರಾ! ತನಗೂ ಇಂದು ನಾಳೆ ಅದೇ "ಸೋಬತಿ" ಕಾದಿದೆಯೆಂದು ಅವಳಿಗೆ ಹೇಗೆ ಗೊತ್ತು?

ಹೊಸ ಮಾಲು ಪೇಟೆಗೆ ಬಂದರೆ ಜನ ಮುಗಿದುಬೀಳುತ್ತಾರೆ. ಕಚ್ಚಾಡುತ್ತಾರೆ. ಈಗ ಆಗ ಎನ್ನುವಷ್ಟರಲ್ಲಿ ಅದು ಇತ್ತೊ ಇಲ್ಲವೊ ಎನ್ನುವಂತಾಗಿಬಿಡುತ್ತದೆ.

ಗಿರಾಕಿಗಳು ನಾ ಮೊದಲು ನೀ ಮೊದಲು ಎಂದು ಎಡತಾಕತೊಡಗಿದರು. ಚಂದ್ರಾನ ಮಾನ ಲಿಲಾವಿನ ತಕ್ಕಡಿಯಲ್ಲಿ ತೂಡತೊಡಗಿತ್ತು. ಬೆಲೆ ಏರಿತು, ಏರಿತು! ಆದರೂ ಅದು ಅವಳ ಚೆಲುವಿಗೆ ಒರೆ ಹತ್ತುವ ಬೆಲೆಯಂತೂ ಅಲ್ಲವೆ ಅಲ್ಲ.

ಅಂತೂ ಒಮ್ಮೆ ಚಂದ್ರಾ ತನ್ನ ದೇಹವನ್ನು ಮಾರಾಟಕ್ಕೆ ಹಚ್ಚಬೇಕಾಯಿತು. ಅದರಂತೆ ಆಕೆ ಹಚ್ಚಿಬಿಟ್ಟಳು. ಬಗೆಬಗೆಯ ಜನ ಬಂದು ಹೋಗತೊಡಗಿದರು. ಹಿಡಿಹಿಡಿಯಾಗಿ ಹಣ ಅವಳ ಕೈಗೆ ಸುಮ್ಮನೆ ಬಂದು ಬೀಳುತ್ತಿತ್ತು. ಆದರೂ ಅವಳ ಬಳಿ ತನ್ನದೆನ್ನುವ ಒಂದು ಬಿಡಿಕಾಸೂ ಇಲ್ಲ!

ಗಾಣ ಮಾತ್ರ ದಿನವೂ ತಿರುಗಬೇಕು..... ಎಣ್ಣೆ ಯಾರ ಪಾಲಿಗೊ!

ಚಂದ್ರಾ ಒಂದು ಊರಿನಲ್ಲಿ ಗಟ್ಟಿಗೊಂಡು ನಿಲ್ಲಬೇಕೆಂದರೆ ಅವಳು ಸ್ವತಂತ್ರಳಲ್ಲ. ಆಕೆ ಯಾರ ಅಂಕಿತಕ್ಕೊಳಪಟ್ಟಿದ್ದಳೊ –ಅವಳಿಗೇ ತಿಳಿಯದು ಅದು! ಬೆಳಗಾವಿಯಾಯಿತು, ಆನಂತರ ಪುಣೆ, ಆಮೇಲೆ ಮುಂಬಯಿ, ಈಗ ಬೆಂಗಳೂರು!

ಚಂದ್ರಾನ ಸೌಂದರ್ಯ ಮಾಸಿಹೋಗದ ಮುನ್ನ ಅದು ಸಂಪಾದಿಸಿ ತರಬಹುದಾದ ಹಣವನ್ನೆಲ್ಲ ಬಳಿದುಕೊಳ್ಳಬೇಕೆಂದು ಅವಳನ್ನು ಕಟ್ಟಿಕೊಂಡವರ ಹಂಬಲಿಕೆ!

ತನಗೆ ದೇವರು ಆ ರೂಪವನ್ನೇತಕ್ಕೆ ಕೊಟ್ಟ? ಕುರೂಪಿಯನ್ನಾಗಿ ಮಾಡಿ ಕುಳ್ಳಿರಿಸಿದ್ದರೆ ಎಂಥ ಸುಖವಿತ್ತಲ್ಲ ಎಂದು ಚಂದ್ರಾ ಆ ಕಾಲದಲ್ಲೆಲ್ಲ ಅಂದುಕೊಳ್ಳುತ್ತಿದ್ದಳಂತೆ.

ತನ್ನ ವಿನಾಶದ ಬಟ್ಟಲನ್ನು ತಾನೇ ತನ್ನ ಕೈಯಿಂದ ಕ್ಷಣಕ್ಷಣವೂ ತುಂಬಿಕೊಳ್ಳುತ್ತಿರುವಂತೆ ಚಂದ್ರಾನ ಭಾವನೆ. ತಾನು ತುಳಿಯುವ ಹಾದಿ ತಪ್ಪು ಎಂದು ಮನವರಿಕೆಯಾದಾಗ ಯಾರಿಗಾದರೂ ಸಂಕಟವೆ. ಆದರೆ ಪಾಪವೆಂದು ತಿಳಿದದ್ದನ್ನು ತಿಳಿದೂ ತಿಳಿದೂ ಪುನಃ ಶ್ರದ್ಧೆಯಿಂದ ಆಚರಿಸಬೇಕು– ಎಂಥ ವೇದನೆ ಅದು!

ದಿನವೂ ಬಾಗಿಲಿಗೆ ನಿಲ್ಲಬೇಕು, ವ್ಯಯಾರ ಮಾಡಬೇಕು. ಎದೆಯಲ್ಲಿ ಜ್ವಾಲಾಮುಖಿ ಕುದಿಯುತ್ತಿದ್ದರೂ ಮುಖದಲ್ಲಿ ಹುಸಿನಗೆಯನ್ನು ತೇಲಿಸಬೇಕು! ಹಗಲು ರಾತ್ರಿಯೆನ್ನದೆ ಹತ್ತೆಂಟು ಜನರ ಕಾಮ ವಾಸನೆಯನ್ನು ತೃಪ್ತಿಪಡಿಸಬೇಕು! ಆ ಉದ್ಯೋಗದಲ್ಲಿ ಅವಳಿಗೇನು ಆನಂದವೆ ? ಯಾವ ಸುಖ ಸಂತೃಪ್ತಿ ಇದೆ ಆ ಜೀವನದಲ್ಲಿ ?

"ನನಗಂತೂ ಗೌರವದ ಸಾವು ಬರಲಿಲ್ಲ. ಜೀವನದಲ್ಲಿ ತಾಳ್ಮೆಗೂ ಒಂದು ಮಿತಿಯುಂಟು. ಮನಸ್ಸಿಗೆ ಬೇಡವಾದ ಬದುಕನ್ನು ಎಲ್ಲಿಯವರೆಗೆ ಹೊರೆಯುವುದು? ಅದು ಎಂಥದೆ ಆಗಲಿ... ಸಾವು ನನ್ನನ್ನು ಬಂದು ಅಪ್ಪಿಕೊಳ್ಳಲಿ. ನನ್ನ ದೇಹದ ಮೇಜವಾನಿಯನ್ನು ಬಂದಬಂದವರಿಗೆ ಯಥೇಷ್ಟವಾಗಿ ಉಣ್ಣಿಸಿದ್ದೇನೆ. ಮರಣ ಕೊನೆಯ ತುತ್ತನ್ನು ನುಂಗಿ ಬಿಡಲಿ! ಇನ್ನುಮುಂದೆ ದುರ್ಬಲರು ಎಂದೆಂದಿಗೂ ಹುಟ್ಟಿ ಬರಬಾರದು. ಈ ಪ್ರಪಂಚದ ಮೇಲೆ" ಹೀಗೆಂದು ಚಂದ್ರಾ ತನ್ನ ಹೃದಯದಲ್ಲಿ ಕುದಿಯುತ್ತಿರುವ

ಜ್ವಲಂತ ರಸವನ್ನು ಎಷ್ಟು ಸಾರೆ ಸುರಿದಿಲ್ಲ ನನ್ನೆದುರಿಗೆ!

* * *

ಸರಿ! ಹೂವು ಎಷ್ಟು ದಿನ ಬಾಡದೆ ಇದ್ದೀತು?

ಬರಬರುತ್ತ ಅವಳ ಗಳಿಕೆ ಇಳಿಯತೊಡಗಿತಂತೆ. ರಸಿಕಜೇನು ಹೊಸ ಹೊಸ ಕುಸುಮಗಳನ್ನು ಹುಡುಕಿಕೊಂಡು ಹೋದವು. ಚಂದ್ರಾನ ನಿಸ್ತೇಜ ಕಳೆ ತನ್ನ ಆಕರ್ಷಣೆಯನ್ನು ಕಳೆದುಕೊಂಡಿತ್ತು. ನಿಜಕ್ಕೂ ರೂಪಾಯಿ, ಎಂಟಾಣೆಯ ತರಗತಿಗಿಳಿದಳಾಕೆ! ತನ್ನ ಅಂಗಡಿಯನ್ನು ಬೇಕಾದ ಕಡೆಯಲ್ಲಿ ತೆಗೆದುಕೊಂಡಿರಲು ಅವಳಿಗೆ ಅನುಮತಿ ಸಿಕ್ಕಿತು ಆಗ! ಅಂತೂ ಕೊನೆಗಾದರೂ ಚಂದ್ರಾ ವಿಷದ ಕೊಂಡಿಯಿಂದ ತನ್ನ ಸಂಬಂಧ ಕಡಿದುಕೊಂಡಳು.... ಸ್ವತಂತ್ರಳಾದಳು.

ಇನ್ನು ಹೊಸ ಆರಂಭ ಹೂಡಬೇಕು ಅವಳು!

ಚಂದ್ರಾ ತನ್ನದಾದ ಮನೆಯಲ್ಲಿ ಬಂದು ನಿಂತು ನಾಲ್ಕು ವರುಷಗಳಾದವು. ಅವಳ ಕಸುಬಿಗೆ ಯುದ್ಧ ಪರಿಸ್ಥಿತಿ ತುಂಬ ಅನುಕೂಲ. ಗಿರಾಕಿಗಳು ಹೆಚ್ಚಾಗಿಯೆ ಇದ್ದರು. ವ್ಯಾಪಾರ ಬಿರುಸಾಗಿತ್ತು. ಸ್ಥಳ ಸಿಕ್ಕದೆ ಸೈನಿಕರು ಪೇಟೆಯಲ್ಲೆಲ್ಲ ತಂಡತಂಡವಾಗಿ ತಿರುಗುತ್ತಿದ್ದರು. ಹಣ ಮಾಡಿಕೊಳ್ಳಬೇಕೆಂದವರು ಸಾಕಷ್ಟು ಮಾಡಿಕೊಂಡು ತೃಪ್ತರಾದರು.

ಆದರೆ ಯಾಕೊ ಚಂದ್ರಾನಿಗೆ ಆ ಬುದ್ಧಿ ಬರಲಿಲ್ಲ. ಗಾಳಿ ಬಿಟ್ಟಾಗ ತೂರಿಕೊಳ್ಳುವ ಮಂತ್ರ ಅವಳಿಗೆ ತಿಳಿದಿತ್ತೊ ಇಲ್ಲವೊ! ಆಕೆ ತನಗೆ ಬೇಕಾದರೆ ಕದವನ್ನು ತೆರೆಯುತ್ತಿದ್ದಳು. ಇಲ್ಲವಾದರೆ ಇಲ್ಲ.

ಅವಳಿಗೂ ಮಧ್ಯೆ ಮಧ್ಯೆ ಒಮ್ಮೊಮ್ಮೆ ಯೋಚನೆ ಬರುತ್ತಿತ್ತು..... "ನಶ್ವರ ದೇಹ.... ಶಾಶ್ವತವೇನೂ ಅಲ್ಲ! ಅದಕ್ಕಾಗಿ ಅಷ್ಟೊಂದು ಯೋಚನೆ ಏತಕ್ಕೆ ಮಾಡಬೇಕು? ಹೋಗಲಿ... ತೂರಿಬಿಟ್ಟರಾಯಿತು." – ಈ ವಿಚಾರ ಬಂದ ಒಂದೆರಡು ದಿನ ಹಗಲು ರಾತ್ರಿಯೆಲ್ಲ ಕದವನ್ನು ತೆರೆದಿಟ್ಟು ಬಿಡುತ್ತಿದ್ದಳು ಚಂದ್ರಾ!

ಆಮೇಲೆ ಮತ್ತೆ ಹಿಂದಿನ ನೆನಪು ಅವಳ ಮನಸ್ಸನ್ನು ಸುಡುವುದಕ್ಕಾರಂಭ ! ಆ ಕಾಲದ ಚಿತ್ರಗಳನ್ನೆಲ್ಲ ಸ್ಮರಿಸಿಕೊಂಡು ಆಕೆ ನಿಟ್ಟುಸಿರು ಕರೆಯುವಳು. ತನ್ನ ಗಂಡನಾದಿಯಾಗಿ ಸಕಲ ಬಂಧುಬಳಗವೆಲ್ಲ ಅವಳ ಕಣ್ಣೆದುರಿನಲ್ಲಿ ಸುಳಿದುಹೋದಂತಾಗುತ್ತಿತ್ತು.

ತನಗೆ ಎಂಥ ಪ್ರಾಯಶ್ಚಿತ್ತವನ್ನಾದರೂ ಕೊಡಲಿ ದೇವರು! ಆದರೆ ತನ್ನ ಗಂಡ, ತನ್ನ ತಂದೆ–ತಾಯಿ, ತನ್ನ ಬಂಧು–ಬಳಗ ಇವರನ್ನು ಈ ಜನ್ಮದಲ್ಲಿ ಪುನಃ ನೋಡುವ ಪ್ರಾಯಶ್ಚಿತ್ತವನ್ನು ಅವನು ಖಂಡಿತವಾಗಿಯೂ ಕೊಡದಿರಲಿ ಎಂದು ಹೇಳುತ್ತಾಳೆ ಚಂದ್ರಾ! ಆ ಪವಿತ್ರಾತ್ಮರ ಮಂಗಲದೃಷ್ಟಿಗೆ ತನ್ನ ಪಾಪೀ ಮುಖ ಕಾಣಬಾರದೆಂದು ಅವಳ ಪ್ರಾರ್ಥನೆ!

ಏಳು ವರ್ಷದ ಶಿಕ್ಷೆಯನ್ನು ಮುಗಿಸಿ ತನ್ನ ಗಂಡ ಊರಿಗೆ ಹೋಗಿರುವನೆಂದು

ಎಣಿಕೆ ಹಾಕಿ ಚಂದ್ರಾ ನಂದಾದೀವಿಗೆ ಹಚ್ಚಿದ್ದಳು ನಿನ್ನೆ !

೬

"ದಿನಾಲು ಕೆಲಸ ಕೆಲಸ –ಏನು ಕೆಲಸ ಅದು ?" ಎಂದು ನಮ್ಮಾಕೆ ರಂಗಿಗೆದ್ದು ಬಿಟ್ಟಿದ್ದಳು. ಅವಳನ್ನು ಸಮಾಧಾನ ಮಾಡಬೇಕಾದರೆ ಸಾಕುಬೇಕಾಗಿ ಹೋಯಿತು ನನಗೆ!

ಈಗ ಮಾತ್ರ ಹೊತ್ತಿಗೆ ಸರಿಯಾಗಿ ಮನೆಗೆ ಹೋಗುತ್ತೇನೆ. ಜಗಳ ತಂಟೆ ಯಾವುದೂ ಇಲ್ಲ. ನಮ್ಮಾಕೆ ಪುನಃ ನನ್ನ ಜೊತೆಯಲ್ಲಿ ಮೊದಲಿನಂತೆ ನಗುವುದಕ್ಕಾರಂಭಿಸಿದ್ದಾಳೆ. ನಮ್ಮ ಜೀವನದಲ್ಲಿ ಮತ್ತೆ ರಸರೋಮಾಂಚನ!

ಅವಳಲ್ಲಿ ಕೇಳಬೇಕಾಗಿದ್ದ ಒಂದು ಮಾತು ನನ್ನೆದೆಯಲ್ಲಿ ಕಟೆಯುತ್ತಿತ್ತು. ನಗುತ್ತ ಕುಳಿತಾಗ ಅದನ್ನು ಎತ್ತಿಕೊಂಡೆ.

"ಒಂದು ಮಾತು ಹೇಳಲೇನು?" ಎಂದು ಕೇಳಿದೆ ಅವಳನ್ನು.

"ಅದೇನು ಹೇಳಿರಲ್ಲ" ಎಂದಳು ಆಕೆ.

"ಉಂ ಹೂಂ, ನಿನಗೆ ಕೇಳುವ ಮನಸ್ಸಿಲ್ಲ ಬಿಡು" ಎಂದೆ.

"ಇಲ್ಲ ಹೇಳಿರಿ! ಹೇಳದಿದ್ದರೆ ನನ್ನಾಣೆಯಿದೆ" ಎಂದಳು.

"ಅದಕ್ಕೆಲ್ಲ ಆಣೆ ಏತರದೆ ಹುಚ್ಚಿ! ಹೇಳ್ತೇನೆ ಬಿಡು!" ಎಂದು ಅವಳಿಗೆ ನಾನು ಚಂದ್ರಾನ ಕತೆಯೆಲ್ಲವನ್ನು ಸಾದ್ಯಂತವಾಗಿ ವಿವರಿಸಿ ಹೇಳಿದೆ.

ಹನಿಯುವ ಕಣ್ಣೀರಿನ ಮಧ್ಯೆ ಹೂಂಗುಟ್ಟುತ್ತ ಆಕೆ ಅದನ್ನೆಲ್ಲ ಕೇಳಿದಳು.

ಕತೆ ಮುಗಿಯಿತು– ನಂತರ ಇಬ್ಬರೂ ಕ್ಷಣಹೊತ್ತು ಮೌನವಾಗಿದ್ದೆವು ಎದೆಯ ಉದ್ವೇಗದಲ್ಲಿ ಮಾತು ಮೂಕವಾಗಿಹೋಗಿತ್ತು.

ಆ ದುಃಸ್ಸಹವಾದ ಮೌನವನ್ನು ಮುರಿದು ಅವಳೆ ಪರಿಹಾರ ಸೂಚಿಸಿದಳು. ನಾಳೆ ಸಂಜೆಗೆ ಚಂದ್ರಾನನ್ನು ಖಂಡಿತವಾಗಿಯೂ ಕರೆದು ತರಬೇಕೆಂದು ಅವಳ ಆಗ್ರಹದ ವಾಣಿ!

ಪತಿತಳಾದ ತನ್ನ ತಂಗಿಯೊಬ್ಬಳನ್ನು ನರಕದ ದಾರಿಯಿಂದ ಉದ್ಧಾರ ಮಾಡಿದ ಶ್ರೇಯಸ್ಸು ನಾಳೆಯ ದಿನವೇ ನನ್ನದಾಗುವುದೆಂದು ನಾನು ಹಿಗ್ಗಿ ಹೋದೆ. ಮರುದಿನ ರಾತ್ರಿ ಚಂದ್ರಾನ ಬಿಡಾರದೆಡೆಗೆ ಹೊರಟಾಗ್ಗೆ ನನ್ನ ಹೃದಯ ಉಕ್ಕಿ ಆನಂದ ಪುಲಕಿತವಾಗಿ ಹೋಗಿತ್ತು!

ಬಾಗಿಲನ್ನು ದೂಡಿ ಭ್ರಾತೃ ಸಲಿಗೆಯಿಂದ ಒಳಗೆ ಹೆಜ್ಜೆಯನ್ನಿರಿಸಿದೆ. ನಾನು ಹೀಗೆ ಹೆಜ್ಜೆಯನ್ನಿಡುತ್ತಲೂ ನನ್ನೆದುರು ಬಂದು ನಿಂತಳು ಒಬ್ಬ ಅಪರಿಚಿತ ಸ್ತ್ರೀ! ನಾನು ಸುಮ್ಮನೆ ಭ್ರಾಂತನಂತೆ ದಂಗುಬಡೆದು ನಿಂತಿರುವುದನ್ನು ಕಂಡು ಆಕೆ "ಬರ್‍ರಿ" ಎಂದಳು ತನ್ನ ನತ್ತನ್ನು ಒಂದು ರೀತಿಯಲ್ಲಿ ಕುಣಿಸುತ್ತ!

"ಆದರೆ... ಚಂದ್ರಾ" ಎಂದೆ ನಾನು ಕುತೂಹಲ ವಾಣಿಯಿಂದ.

"ಓ, ಅವಳೇ?" ಎನ್ನುತ್ತ ಆಕೆ ಕಿಲಕಿಲನೆ ನಗುವುದಕ್ಕಾರಂಭಿಸಿದಳು. ನನಗೆ ಆ ತಾತ್ಸಾರದ ನಗೆಯನ್ನು ಕೇಳುವುದಕ್ಕಾಗಲಿಲ್ಲ. ಅದರಲ್ಲಿಯೂ ಅದು ನನ್ನ ಚಂದ್ರಾನ ವಿಷಯಕವಾದ ನಗೆ.

ನನ್ನ ಮನಸ್ಸು ತಳಮಳಿಸಿಹೋಗಿತ್ತು. ನಾನು ವ್ಯಾಕುಲಗೊಂಡು ಹೊರಗೆ ಬಂದೆ.

"ಚಂದ್ರಾ –ಹೋದಳೆಲ್ಲಿಗೆ ಆಕೆ? ಹೋಗಿರಲು ಎಂದಿಗೂ ಸಾಧ್ಯವಿಲ್ಲ. ನನಗೆ ಹೇಳದೆ ಎಲ್ಲಿಗೆ ಹೋದಾಳು? ಎಲ್ಲಿಗೂ ಹೋಗುವ ಜೀವವಲ್ಲ ಅದು." ಎಂದುಕೊಳ್ಳುತ್ತ ನಾನು ಹೆಜ್ಜೆಯನ್ನು ಮುಂದಕ್ಕೆ ಚಾಚಿದೆ.

"ಏಯ್" ಎಂದು ಯಾರೊ ಕೂಗಿದಂತಾಯಿತು. ಹೆಣ್ಣು ಧ್ವನಿಯೆಂಬಂತೆ ಕೇಳಿಸಿತು ನನಗೆ. ಹಿಂದಕ್ಕೆ ಹೊರಳಿ ನೋಡಿದೆ. ಹೌದು, ಆಕೆ ಚಂದ್ರಾನ ಪಕ್ಕದ ಮನೆಯಾಕೆ. ಅವಳಿಗೇನಾದರೂ ಗೊತ್ತಿರಬಹುದೆ ಚಂದ್ರಾನ ಸುದ್ದಿ? ಓ, ಗೊತ್ತಿರದೆ ಏನು? ಬೆಳಿಗ್ಗೆ ಎದ್ದರೆ ಒಬ್ಬರ ಮುಖವನ್ನೊಬ್ಬರು ನೋಡಬೇಕು ಅವರು.

ಆಕೆ ಹೇಳಿದಳು:

ಮೊನ್ನೆ ಯಾವನೊ ಒಬ್ಬ ಬಂದಿದ್ದನಂತೆ. ಅಂಥವರನೇಕ ಜನ ಬರುತ್ತಾರೆ–ಹೋಗುತ್ತಾರೆ... ನಡೆದೆ ಇರುತ್ತದೆ ಅದು. ಸರಿ, ಆ ಮನುಷ್ಯ ಮರುದಿನ ಸಾಯಂಕಾಲ ಏಳು ಗಂಟೆಯ ಸುಮಾರಿಗೆ ಬರುವುದಾಗಿ ಸಂಚಕಾರ ಕೊಟ್ಟು ಹೋದನಂತೆ.

ಹಿಂದಿನ ದಿನ ಹೇಳಿಹೋದಂತೆ ಅವನು ನಿನ್ನೆ ಏಳು ಗಂಟೆಗೆ ಸರಿಯಾಗಿ ಚಂದ್ರಾನ ಬಳಿಗೆ ಬಂದ. ಚಂದ್ರಾ ಆ ಉಡುಪಿ ಅಂಗಡಿಯಿಂದ ಎರಡು ಕಪ್ಪು ಟೀ ತರಿಸಿದಳು ಪದ್ಧತಿಯಂತೆ. ಕಪ್ಪನ್ನು ಬಾಯಿಗೆ ಎತ್ತಿ "ಸಕ್ಕರೆ ಕಮ್ಮಿ" ಎಂದನಂತೆ ಆ ಮನುಷ್ಯ. ಸಕ್ಕರೆಗಾಗಿ ಪುನಃ ತಮ್ಮ ಅಂಗಡಿಗೆ ಹೊರಟಿದ್ದ ಆ ಉಡುಪಿಯ ಹುಡುಗನನ್ನು ನಿಲ್ಲಿಸಿ, ಚಂದ್ರಾ ಸಕ್ಕರೆಯನ್ನು ತರಲು ಒಳಕ್ಕೆ ಹೋದಳು. ಅದೇ ಸಮಯವನ್ನು ಕಾಯ್ದುಕೊಂಡು ಕುಳಿತಿದ್ದ ಆ ಮನುಷ್ಯ ಯಾವುದೋ ಚೀಟಿಯಿಂದ ಪುಡಿಯನ್ನು ತೆಗೆದು ಒಂದು ಕಪ್ಪಿನಲ್ಲಿ ಬೆರೆಸಿದನಂತೆ.

"ಈ ಮಾತನ್ನು ಆ ಹುಡುಗ ಇದೇ ಈಗ ಹೇಳಿಹೋದ" ಎಂದು ನಡುವೆ ಸೇರಿಸಿ ಆಕೆ ಪುನಃ ತನ್ನ ವಿವರಣೆಯನ್ನು ಮುಂದುವರಿಸಿದಳು.

ನಿನ್ನ ಆ ಹೊತ್ತಿಗೆ ಭಯಂಕರವಾದ ಗಾಳಿ ಧೂಳಿ ಎದ್ದುಬಿಟ್ಟಿತಂತೆ. ಚಂದ್ರಾ ಸಕ್ಕರೆ ಹಾಕಿ ಟೀ ಕಪ್ಪನ್ನು ಕೊಡುವಾಗ್ಗೆ ಅವನಿನ್ನೂ ತನ್ನ ಕಣ್ಣನ್ನು ಉಜ್ಜಿಕೊಳ್ಳುತ್ತಿದ್ದನೆಂದು ಹೇಳಿದರೆ ಅದರ ಕಲ್ಪನೆಯಾಗಬಹುದು.

ದೈವದ ಜಾಲ ಎಂಥದೊ, ಯಾರು ಬಲ್ಲರು ? ಅಂತೂ ಏನೊ ಅದಲು – ಬದಲಾಗಿ ಹೋಯಿತು. ಚಂದ್ರಾನನ್ನು ಸುಡುವುದಕ್ಕೆಂದು ತಂದ ಮದ್ದು ಅವನ ಜೀವಕ್ಕೇ

ಮುಳುವಾಯಿತು. "ನಿನ್ನ ಕೊಲ್ಲಬೇಕು ಅಂತ ತಂದಿದ್ದೇನೆ ಅದನ್ನು" ಎಂದು ಅವನು ತನ್ನ ಜೀವ ಹೋಗುವವರೆಗೆ ಒಂದೆಸವನೆ ಬಡಬಡಿಸಿದನಂತೆ!

ಆ ಉದ್ವನ್ನ ಗಡ್ಡ–ಮೀಸೆಗಳ ಹಿಂದೆ ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದಾಗ ಅವಳಿಗೆ ತನ್ನ ಗಂಡನ ಆಕೃತಿ ಹೊಳೆಯಿತು. ಹೌದು! ಹೇಮಣ್ಣನೇ ಅವನು, ನಿಜ! ಚಂದ್ರಾನ ಆಹುತಿ ತೆಗೆದುಕೊಂಡು ಬರುವುದಾಗಿ ಊರಲ್ಲಿ ಪಂಥ ತೊಟ್ಟು ಬಂದಿದ್ದನಂತೆ!

ಆಕೆ ಸಿಡಿಲಿನ ಸುದ್ದಿಯನ್ನು ಹೇಳಿದಳು.

ಈ ದಿನ ಬೆಳಿಗ್ಗೆ ಪೋಲೀಸರು ಚಂದ್ರಾನನ್ನು ಕೈದುಮಾಡಿಕೊಂಡು ಹೋದರು. ಹೋಗುವ ಮುನ್ನ ಅವಳು ನನ್ನನ್ನು ಮಾತುಮಾತಿಗೆ ಹಂಬಲಿಸುತ್ತಿದ್ದಳಂತೆ:

"ಸಾವಿಗೆ ಕೊನೆಯ ಔತಣ ಕೊಟ್ಟು ಹೊರಟಿದ್ದೇನೆ. ನನಗೆ ಯಾವ ವ್ಯಥೆ ಸಂಕಟವೂ ಇಲ್ಲ. ಆದರೆ ನನ್ನ ಜೀವನದ ಸಂಜೆಯಲ್ಲಿ ಚಂದ್ರಾ.... ಚಂದ್ರಾ" ಎಂದು ನನ್ನನ್ನು ವಾತ್ಸಲ್ಯದಿಂದ ಕರೆದು ನುಡಿಸಿದ ಆ ಪ್ರೀತಿಯ ಮಧುರ ಧ್ವನಿಯನ್ನು ಅಂತಿಮ ಯಾತ್ರೆಗೆ ಹೊರಟು ನಿಂತ ಈ ವೇಳೆಯಲ್ಲಿ ಕೇಳುವಂತಾಗಲಿಲ್ಲವಲ್ಲ ಎಂಬ ವ್ಯಸನವೊಂದೆ ನನ್ನನ್ನು ಬಾಧಿಸುತ್ತಿರುವುದು."

* * * *

# ತುತ್ತಿನ ಚೀಲ

"Whose names were
Five Sweet Symphonies"

-D.G. Rossetti

ದೇವಣ್ಣ ಮೊದಲೆ ಒಂದು ತೆರನಾದ ಮನುಷ್ಯ. ಎಲ್ಲ ಹೊಂದಿಕೆಯಿದ್ದಾಗಲೂ ಅವನ ಬಾಯಿಂದ ಮಾತು ಬರುವುದು ತುಂಬ ಅಪರೂಪ. ವರಹಕ್ಕೊಂದು ಮಾತು ಎನ್ನುವರಲ್ಲ, ಹಾಗೆ! ಇನ್ನು ಜೀವನದಲ್ಲಿ ಏನಾದರೂ ಏರಿಳಿತ, ಹೆಚ್ಚು ಕಡಿಮೆ ಆಯಿತೆಂದರೆ ಕೇಳುವ ಹಾಗೆಯೆ ಇಲ್ಲ.

ಅಂತೂ ಬಹಳ ಸಂಕೋಚದ ಸ್ವಭಾವ ಆತನದು.

ಈಗ ಸುಮಾರು ಎಂಟು ವರುಷಗಳ ಮೇಲಾಗಿ ಹೋಯಿತು. ಹೌದು, ನಮ್ಮ ಪಾರ್ವತಿ ಹುಟ್ಟಿದ ಮೇಲೆಯೆ ಪ್ರಾರಂಭ ಅಂತ ಕಾಣುತ್ತದೆ. ಆ 'ಲಾಗಾಯಿತು' ಅವನು ಮನೆಯವರೆಗೆ ಎಮ್ಮೆಯನ್ನು ಹೊಡೆದುಕೊಂಡು ಬಂದು ನಮಗೆ ಹಾಲು ಕರೆದುಕೊಟ್ಟು ಹೋಗುತ್ತಾನೆ. ಪ್ರತಿನಿತ್ಯವೂ ಬೆಳಿಗ್ಗೆ ಎದ್ದರೆ ಅವನ ಮುಖವೆ ಮೊದಲು ನಮ್ಮ ಕಣ್ಣಿಗೆ ಬೀಳಬೇಕು.

ಹೀಗಿದ್ದರೂ ಇಷ್ಟು ದೀರ್ಘಕಾಲದ ಅವಧಿಯಲ್ಲಿ ಆತ ನನ್ನೊಡನೆ... ಅಷ್ಟೆ, ಆರೇಳು ಸಲ ಮಾತನಾಡಿದ್ದರೆ ಹೆಚ್ಚಾಯಿತು.

ಹಾಲನ್ನು ಹಿಂಡಿ ಕೊಡಲು ಎಂದಿನಂತೆ ದೇವಣ್ಣ ನಿನ್ನ ಬೆಳಿಗ್ಗೆಯೂ ಬಂದಿದ್ದ.

ಕೈ ಹಾಲು ಕರೆಯುವುದರಲ್ಲಿ ನಿರತವಾಗಿದ್ದವು. ಅವಕ್ಕೆ ಒಮ್ಮೆ ಆಜ್ಞೆ ಮಾಡಿದರಾಯಿತು. ಬಿಡಿಗಡೆಯೆ ಇಲ್ಲ. ಗಾಣದೆತ್ತಿನ ಕೆಲಸ ಅವುಗಳದು. ದೇವಣ್ಣನಿಗೆ ಮಾತ್ರ ಯಾಕೊ ತನ್ನ ಕೆಲಸದಲ್ಲಿ ಸ್ವಲ್ಪವೂ ಶ್ರದ್ಧೆ ಇರುವಂತೆ ತೋರಲಿಲ್ಲ.

ಅವನ ಮನಸ್ಸು ಎಲ್ಲಿಯೊ ದೂರ ಬಹುದೂರ ಹೋಗಿತ್ತು. ಇಲ್ಲವಾದರೆ ತಂಬಿಗೆ ಪೂರ್ತಿ ತುಂಬಿ ಹಾಲು ಅವನ ತೊಡೆಯ ಮೇಲೆ ಹರಿಯತೊಡಗಿದಾಗಲೂ ಆತನು ಇನ್ನೂ ಮೊಲೆಯನ್ನು ಜಗ್ಗುತ್ತ ಕುಳಿತುಕೊಳ್ಳುತ್ತಿದ್ದನೆ?

ಇದು ನಿನ್ನೆ ಮಾತು. ಈ ದಿನ ಅದಕ್ಕೂ ವಿಚಿತ್ರ. ನಿನ್ನೆಗಿಂತ ಒಂದು ಮಜಲು ಮುಂದೆ.

ನಾನು ಮನೆಗೆ ಬಂದೊಡನೆಯೆ ನಮ್ಮಾಕೆ ಹೇಳಿದಳು – ಕೋಟು ತೆಗೆದಿಕ್ಕಲೂ ಅವಕಾಶ ಕೊಡಲಿಲ್ಲ. ಅತ್ತು ಅತ್ತು ದೇವಣ್ಣನ ಕಣ್ಣುಗಳು ಕೆಂಪಾಗಿ ಹೋಗಿದ್ದವಂತೆ. ಹಾಲು ಕರೆಯುವಾಗಲೂ ಕಣ್ಣೀರ ಧಾರೆ ನಿಂತಿರಲಿಲ್ಲವಂತೆ. ಪಾಪ, ಅವಳಿಗಂತೂ ತುಂಬ ಕನಿಕರ. ಕನಿಕರವಾಗದೆ ಏನು? ಕಣ್ಣೀರ ಕಾವಿಗೆ ಯಾರ ಅಂತಃಕರಣ ಕರಗಿ ನೀರಾಗುವುದಿಲ್ಲ?

"ಇದ್ಯಾಕೋ ದೇವಣ್ಣ?" ಎಂದು ಅವಳು ಬಹಳ ಜುಲುಮೆ ಮಾಡಿ ಕೇಳಿದಳಂತೆ. ಬಲವಂತಪಡಿಸಿದಳಂತೆ.

ಏನಂದರೇನು ದೇವಣ್ಣ ತನ್ನ ಬಾಯ್ಬೀಸುಗೆ ಸಡಿಲಿಸಲಿಲ್ಲ.

ಆಕೆ ಈ ಸಂಗತಿ ಹೇಳಿದ ಮೇಲೆ ನನಗೆ ರಾತ್ರಿಯೆಲ್ಲ ಅದೇ ವಿಚಾರ. ನಿದ್ರೆ ಕೂಡ ಬೇಗ ಹತ್ತಲಿಲ್ಲ.

ಪಾಪ, ಅವನ ಸಂಕಟಕ್ಕೆ ಕಾರಣ ಯಾವ ನೋವೋ, ಯಾವ ಅಳುಕೊ, ಯಾವ ಬಳಲಿಕೆಯೊ! ನನ್ನ ಮನಸ್ಸಂತೂ ಸುಮ್ಮನೆ ಸುಯ್ದಾಡಿತು. ಗಾಳಿಗಿಟ್ಟ ದೀಪದಂತೆ ಚಲವಿಚಲವಾಗಿ ಹೊಯ್ದಾಡಿತು. ಏನಾದರೂ ಮಾಡಿ ಅವನ ಮೌನವನ್ನು ಛಿದ್ರಗೊಳಿಸಲೆಬೇಕು. ಬೆಳಿಗ್ಗೆ ಎದ್ದೊಡನೆಯೆ ಅವನ ಕಣ್ಣೀರಿನ ಕಾರಣ ಕಂಡುಹಿಡಿಯುವುದೆ ಪ್ರಥಮ ಕೆಲಸ. ಅವನೆಷ್ಟೆ ಆಗ್ರಹ, ಹಟ ಹಿಡಿದರೂ ಬಿಡಲೆಬಾರದು. ಹೀಗೆಂದು ನಿರ್ಧರಿಸಿ ನಾನು ಮಲಗಿದೆ.

ಬೆಳಿಗ್ಗೆ ಎದ್ದು ನೋಡಿದಾಗ ನನ್ನ ಮುನ್ನಾರಾತ್ರಿಯ ನಿರ್ಧಾರ ಕರಗಿನೀರಾಗಿ ಹೋಯಿತು. ನನಗೆ ಅತೀವ ನಿರಾಶೆಯಾಯಿತು. ದೇವಣ್ಣ ಬಂದಿರಲಿಲ್ಲ. ಅವನು ಬಾರದೆಯಿದ್ದುದನ್ನು ಕಂಡು ನನ್ನ ಕುತೂಹಲವೇನೊ ಕೆರಳಿತು. ಆದರೆ ಮನಸ್ಸಿನ ತುಮುಲ ಕೋಲಾಹಲ ತಿಲಮಾತ್ರವೂ ಕಡಿಮೆಯಾಗಲಿಲ್ಲ. ನೀರಮೇಲಿನ ಎಣ್ಣೆಯಂತೆ ಇನ್ನೂ ವಿಸ್ತಾರಗೊಳ್ಳುತ್ತ ನಡೆಯಿತು, ಅದು.

"ತಮ್ಮಾನ್ನೆಲ್ಲಿ ಸತ್ಯಪ್ಪ?" ಎಂದೆ.

ಸತ್ಯಪ್ಪ ದನಿಯೆತ್ತಲಿಲ್ಲ.

ಹಾಲು ಕರೆಯುವುದೆ ಅವನಿಗೊಂದು ಅಗಾಧ ಸಮಸ್ಯೆಯಾಗಿ ಪರಿಣಮಿಸಿತ್ತು.

ಅವನು ಎಮ್ಮೆ ಕಟ್ಟಿದ ಈ ಎಂಟು ವರ್ಷವೂ ದೇವಣ್ಣನದೆ ಈ ಎಲ್ಲ ಕಾರಭಾರ. ಎಮ್ಮೆಯ ಜವಾಬ್ದಾರಿಯೆಲ್ಲ ಅವನ ತಲೆಯ ಮೇಲೆಯೆ. ಸತ್ಯಪ್ಪ ಇಂಥ ಕೆಲಸ ಎಂದಿಗೂ ಮಾಡಿದವನಲ್ಲ. ಕರೆದುಕೊಟ್ಟರೆ ಹಾಲು ಕುಡಿದಾನು. ಮೊದಲೆ ಅಚ್ಚೆಯಲ್ಲಿ ಬೆಳೆದ ಮನುಷ್ಯ. ಈಗ ಎಮ್ಮೆ ಕರೆದುಕೊಳ್ಳಬೇಕೆಂದರೆ ಅವನಿಗೆ ಕುಸ್ತಿ ಕೆಲಸ ಮಾಡಿದಷ್ಟು ಪ್ರಯಾಸ. ಅತಿ ಆಯಾಸಗೊಂಡು ಅವನು ಮೊಲೆಯನ್ನು ಎಳೆದಾಗ ಹಾಲು ಅದೂ ತೊಟಗುತೊಟಗಾಗಿ ಬಿಟ್ಟು ಬಿಟ್ಟು ಇಳಿಯಬೇಕು. ಜೊರ್ರೆಂದು ನೊರೆಯಾಗಿ ತೊರೆಯಾಗಿ

ಬರುವ ಮಾತೆ ಇಲ್ಲ.

ಅಂತೂ ಒಮ್ಮೆ ಹಾಲನ್ನು ಹಿಂಡುಕೊಂಡು ಸತ್ಯಪ್ಪ ಮೇಲಕ್ಕೆದ್ದ. ಎದ್ದವನೆ ಅವನು ಮುಂದಿನ ಮನೆಗೆ ಸಾಗಿದ್ದ. ಬರಲಿರುವ ತೊಂದರೆಯ ಶ್ರಮದ ಕಥೆ ಅವನ ಮುಖದಲ್ಲಿ ಬರೆದಂತಿತ್ತು. ನಾನು ಅವನನ್ನು ತಡೆದು ನಿಲ್ಲಿಸಿ ಪುನಃ ಕೇಳಿದೆ.

"ಎಂದಿಲ್ಲದೆ ಇವೊತ್ತು, ನೀನು ಬಂದೆಲ್ಲೊ, ಸತ್ಯಪ್ಪ? ಯಾಕೆ, ದೇವಣ್ಣನಿಗೇನು ಮೈಯಲ್ಲಿ ಸರಿ ....."

ನಾನಿನ್ನೂ ಮಾತು ಮುಗಿಸಿರಲಿಲ್ಲ. ನನ್ನ ವಾಕ್ಯಕ್ಕೆ ಪೂರ್ಣವಿರಾಮ ಹಾಕಿರಲಿಲ್ಲ. ಕಣ್ಣೀರು ಅವನ ಕೆನ್ನೆಯ ಮೇಲೆ ಹಾಯ್ದು ಮೀಸೆಯಲ್ಲಿ ನುಸುಳಿ ಹನಿಹನಿಯಾಗಿ ಕೆಳಕ್ಕೆ ಉರುಳಿಬಿದ್ದವು.

"ಇದೇನು ಇಬ್ಬರೂ ಮಾತನಾಡಿಕೊಂಡಿದ್ದೀರಾ?" ಎನ್ನುವ ಮಾತು ನನ್ನ ತುಟಿಯವರೆಗೂ ಬಂದುಹೋಯಿತು. ಹೊರಕ್ಕೆ ಮಾತ್ರ ಬರಲಿಲ್ಲ. ಆ ಕಣ್ಣೀರಿನ ಹಿಂದೆ ಇದ್ದಿರಬಹುದಾದ ವೇದನೆಯ ನೋವು ಲಘುವಾದ ನನ್ನ ಚೇಷ್ಟೆಯ ಮಾತನ್ನು ಅಲ್ಲಿಗೇ ತಡೆದು ನಿಲ್ಲಿಸಿತು.

ಸತ್ಯಪ್ಪನ ದೀನ ಮುಖಮುದ್ರೆಯನ್ನು ನೋಡಿ ನನಗೆ ಬಹಳ ಖೇದವಾಯಿತು. ಆ ತಳಮಳದ ಕುದಿತಕ್ಕೆ ಸಿಲುಕಿ ನನ್ನ ಅಂತರಂಗ ಅಲುಗಿಹೋಯಿತು. ಅಲ್ಲಿ ನಿಲ್ಲುವುದೆ ನನಗೆ ಅಸಾಧ್ಯವೆಂದು ತೋರಿತು. ಇನ್ನು ಅವನೊಂದಿಗೆ ಮಾತನಾಡುವ ವಿಚಾರವಂತೂ ದೂರ.

ಅವನಿಗೇನೊ ಈಗ ದುಃಖ ಒತ್ತರಿಸಿ ಬಂದಿದೆ. ದುಃಖ ಶಮನವಾಗುವವರೆಗೆ ಸ್ವಲ್ಪ ತಡೆದರಾಯಿತು. ಹೋದ ಸಮಾಧಾನ ಮರಳಿದರೆ ಆತ ಎಲ್ಲವನ್ನೂ ತಾನಾಗಿಯೇ ಹೇಳುತ್ತಾನೆ. ಸದ್ಯಕ್ಕೆ ಮಾತ್ರ ಒತ್ತಾಯ ಎಷ್ಟೂ ತರವಲ್ಲ. ಅದರಿಂದ ಅವನ ಪರಿತಾಪ ಕಡಿದುಹೋಗುವ ಬದಲು ಇನ್ನೂ ನೂರು ಪಾಲು ಹೆಚ್ಚೀತು.

ಕೇವಲ ಸುದ್ದೀ ತಿಳಿಯುವ ನನ್ನ ಚಪಲಕ್ಕಾಗಿ ಅವನನ್ನು ಆಳವಾದ ದುಃಖದ ಮಡುವಿಗೆ ನೂಕಿದರೆ ನನಗೆ ಬಂದ ಭಾಗ್ಯ ಏನು ? ನನಗೆ ಬರಬಹುದಾದ ಪ್ರಯೋಜನ ಏನು?

ಹೀಗೆಂದುಕೊಂಡು ನಾನು ಐದಾರು ದಿನಗಳವರೆಗೆ ಅವನ ಗೊಡವೆಗೆ ಹೋಗಲಿಲ್ಲ. ಸುಮ್ಮನಿದ್ದುಬಿಟ್ಟೆ. ದಿನದಿನಕ್ಕೆ ಪಾರ್ವತಿಯ ಹಟ ಮಾತ್ರ ಮಿತಿಮೀರಿತು. ನಮಗೆ ಸಿಕ್ಕುವ ಹಾಲಿನ ಪ್ರಮಾಣ ತೀರ ಕಮ್ಮಿಯಾಗಿ ಹೋಯಿತು. ಹಾಲಿಲ್ಲದೆ ಪಾರ್ವತಿಗಂತೂ ನಡೆಯುವ ಹಾಗೆಯೆ ಇಲ್ಲ.

'ಏನು ಸತ್ಯಪ್ಪ, ಹೀಗಾದರೆ ?" ಎಂದೆ.

ಸತ್ಯಪ್ಪ ಎಮ್ಮೆಯನ್ನು ಹತೋಟಿಯಲ್ಲಿ ತಂದುಕೊಳ್ಳುವ ಯತ್ನದಲ್ಲಿ ಮಗ್ನವಾಗಿ ಹೋಗಿದ್ದ. ನನ್ನ ಮಾತು ಅವನ ಲಕ್ಷ್ಯಕ್ಕೆ ಬಂದಂತೆಯೆ ತೋರಲಿಲ್ಲ.

ಚಂದ್ರಮೌಳಿ – ಅದು ದೇವಣ್ಣನಿಟ್ಟ ಪ್ರೀತಿಯ ಹೆಸರು–ಅವನು ಹಾಲು ಕರೆಯಲು ಕೈಯಿಕ್ಕುವ ಪುರುಸತ್ತಿಲ್ಲದೆ ತನ್ನ ಕಾಲನ್ನು ಮೇಲಕ್ಕೆತ್ತಿ ಜಾಡಿಸಿ ಬಿಡುತ್ತಿತ್ತು. ಒಂದೆರಡು ಸಲ ಸತ್ಯಪ್ಪನ ಕೈಗೂ ಕಾಲಿನ ಪ್ರಸಾದ ತಗುಲಿತ್ತು.

ಸತ್ಯಪ್ಪ ಅದರ ಮುಂದೆ 'ಹಿಂಡೀ"ಯಿಟ್ಟು ಕಾಳು ಹಾಕಿದ. ಮೈಮೇಲೆಲ್ಲ ಕೈಯಾಡಿಸಿ ಅದನ್ನು ರಮಿಸಿದ. ಏನೆಂದರೂ ಅದು ಕೇಳಲಿಲ್ಲ. ತನ್ನ ಕ್ರಮವನ್ನು ಹಾಗೆಯೇ ಮುಂದುವರಿಸಿತು. ಸಿಟ್ಟು, ಕೋಪ ಎಲ್ಲ ಒಟ್ಟಿಗೆ ಬಂದವು– ಸತ್ಯಪ್ಪನಿಗೆ ಆಗ ಸೈರಿಸಲಾಗಲಿಲ್ಲ. ಅವನು 'ರಪ್ ರಪ್ ' ಎಂದು ತನ್ನ ಬಡಿಗೆಯಿಂದ ಚಂದ್ರಮೌಳಿಯನ್ನು ಚೆನ್ನಾಗಿ ಥಳಿಸಿದ. ಅದರ ಮೈಮೇಲೆ ಕೋಲುಕೋಲಾಗಿ ಬಾಸುಂಡೆಗಳೆದ್ದವು.

ಅವನು ಅದಕ್ಕೆ ಹೀಗೆ ಮರ್ದನ ಮಾಡಿದನೇನೊ ಸರಿ. ಆದರೆ ಮರುಕ್ಷಣ ಸತ್ಯಪ್ಪ ಸಣ್ಣಮಗವಿನಂತೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ. ನಾನು ಅವನಿಗೆ ಸಮಾಧಾನ ಹೇಳಿದೆ. 'ತಾಳಿಕೋ ಅಪ್ಪ' ಎಂದೆ.

ಆನಂತರ ಅವನು ಸ್ವಲ್ಪ ವೇಳೆ ಸುಮ್ಮನಿದ್ದು ಕಣ್ಣುತುಂಬ ಕಂಬನಿ ತಂದು ಗದ್ಗದ ಕಂಠದಿಂದ ಹೇಳಿದ ತನ್ನ ಅಳಲಿನ ಕತೆಯನ್ನು ಒಂದೆ ಮಾತಿನಲ್ಲಿ:

" 'ಅವನಿಗೆ' ಈಲಾದ ಎಮ್ಮೆ, ಗೌಡ್ರೆ, ಇದು. ನನ್ನ ನಂಬಿಯೆ ಇಲ್ಲ. ನಾನು ಹಿಂಡಿಕೊಂಡರೆ ಹಾಲನ್ನು ಸೇದಿಕೊಂಡು ಬಿಡುವುದು. ತೊರೆಬಿಡುವುದೆ ಇಲ್ಲ."

"ಹಾಗಾದರೆ ಅವನೆಲ್ಲಿ?"

ನನ್ನ ಪ್ರಶ್ನೆ ಸತ್ಯಪ್ಪನ ಕಿವಿಯನ್ನು ಸೇರಿತೋ ಇಲ್ಲವೊ ಅವನು, "ಅದನ್ನೇನು ಕೇಳ್ತೀರಿ ಬಿಡ್ರಿ, ನನ್ನಪ್ಪ" ಎಂದು ಕಂಬಳಿಯನ್ನು ಹೆಗಲಿಗೆ ಹಾಕಿ ತನ್ನ ಧೋತರದ ಚುಂಗಿನಿಂದ ಹನಿಯುತ್ತಿದ್ದ ಕಣ್ಣೀರನ್ನು ಒರಿಸಿಕೊಳ್ಳುತ್ತ ಎಮ್ಮೆಯನ್ನು ಅಟ್ಟಿಕೊಂಡು ನಡೆದುಬಿಟ್ಟ. ಅಲ್ಲಿ ಒಂದು ಕ್ಷಣ ಕೂಡ ಹೆಚ್ಚಿಗೆ ತಡೆಯಲಿಲ್ಲ ಅವನು.

"ಹಾಗಾದರೆ ಅವನೆಲ್ಲಿ?" ಎಂದು ನಾನು ಕೇಳಿದ ಮಾತು ಅಲ್ಲಿಯೆ ಉಳಿಯಿತು. ಉತ್ತರವೆ ದೊರೆಯಲಿಲ್ಲ ಅದಕ್ಕೆ.

"ಹಾಗಾದರೆ ಅವನೆಲ್ಲಿ?" ಆ ಪ್ರಶ್ನೆ ನನಗೊಂದು ಸಮಸ್ಯೆಯಾಗಿಯೇ ಇದೆ ಇಂದಿಗೂ.

೨

ಸತ್ಯಪ್ಪನ ನೆನಹು ನಮಗೆ ಪುನಃ ಬರುತ್ತಿತ್ತೊ ಇಲ್ಲವೊ ? ಹಾಲಿಗಾಗಿ ಪಟ್ಟು ತೊಂದರೆ ಅದನ್ನು ಬದುಕಿಸಿತ್ತು. ಹಾಲಿಲ್ಲದೆ ಒಣ ಅನ್ನ ನುಂಗುವಾಗ, ಹಾಲು ಕುಡಿಯದೆ

ಶಾಲೆಗೆ ಹೋಗುವುದಿಲ್ಲವೆಂದು ಪಾರ್ವತಿ ಹಟ ಮಾಡುವಾಗ ಸತ್ಯಪ್ಪನ ನೆನಹು ನಮಗೆಲ್ಲ ಬಂದೆ ಬರಬೇಕು. ತಪ್ಪುವಂತೆಯೆ ಇಲ್ಲ.

ಯಾರನ್ನು ಕೇಳಿದರೂ "ನಮ್ಮ ಮಾಮೂಲು ಗಿರಾಕಿಗಳಿಗೆ ಸಾಲದು. ನಿಮಗೆಲ್ಲಿ ತರಬೇಕು?" ಎಂದು ಹಾಲಿನ ಕೊರತೆಯನ್ನು ಕುರಿತು ಒಂದು ಉದ್ದವಾದ ವ್ಯಾಖ್ಯಾನ ಕೊಡುವವರೆ.

ತಮ್ಮ ವ್ಯಾಪಾರ ಕಳೆದುಕೊಳ್ಳಬೇಕೆಂದು ಅವರ ಉದ್ದೇಶವೇನೂ ಇಲ್ಲ. ಆದರೆ ದನ ಹಿಂಡುವುದೆ ಕಡಿಮೆಯಾಗಿದೆ. ಮೂರು ನಾಲ್ಕು ವರ್ಷ ಮಳೆ ನಿಂತುಹೋಗಿರುವುದರಿಂದ ಮೇವು ಸಿಕ್ಕುವುದೆ ದುರ್ಲಭ, ದನ ಇನ್ನೇನು ಹಿಂಡಬೇಕು? ಜೀವ ಹಿಂಡುವುದೊಂದೇ ಉಳಿದಿದೆ.

ನಿನ್ನೆ ಬೆಳಿಗ್ಗೆ ಪಾರ್ವತಿಯನ್ನು ಶಾಲೆಗೆ ಕಳಿಸಿಬಂದು ನಾನು ನಮ್ಮ ಮನೆಯ ಹೊರಕ್ಕೆ ಕಟ್ಟೆಯ ಮೇಲೆ ಕುಳಿತಿದ್ದೆ. ಸತ್ಯಪ್ಪನ ಹಳ್ಳಿಯ ಯಜಮಾನರೊಬ್ಬರು ಬೀದಿಯಲ್ಲಿ ಹೋಗುತ್ತಿದ್ದರು. ಸತ್ಯಪ್ಪನ ಸಮಾಚಾರ ಏನು ಕೇಳಿ ತಿಳಿಯೋಣ ಎಂದು ಆಲೋಚಿಸಿ ಅವರನ್ನು ಕರೆದೆ.

ಯಜಮಾನರು ಬಂದು ಕುಳಿತು ಹೇಳತೊಡಗಿದರು.

"ಹಾಗಾದರೆ ಅವರು ಅಣ್ಣತಮ್ಮಂದಿರಲ್ಲವೇನು?" ಎಂದು ನಾನು ನಡುವೆಯೆ ಬಾಯಿ ಹಾಕಿದೆ.

"ನಿಮ್ಮಂತೆಯೆ ಅನೇಕ ಜನ ಹಾಗೇ ತಿಳಿದುಕೊಂಡಿದ್ದಾರೆ. ಆದರೆ ವಸ್ತುಸ್ಥಿತಿ ಗೊತ್ತಿರುವ ಮಂದಿ ತುಂಬಾ ಕಮ್ಮಿ, ಇಲ್ಲವೆಂದರೂ ಬಂದೀತು." ಎಂದು ಯಜಮಾನರು ತಮ್ಮ ಕಥೆಯನ್ನು ಮುಂದುವರಿಸಿದರು.

"ಮಾತಾ–ಪಿತೃಗಳ ಲಾಲನೆ– ಪಾಲನೆಯನ್ನು ದೇವಣ್ಣ ಕಾಣಲಿಲ್ಲವಂತೆ. ಹಿಂದೆ ಬಂದಿತ್ತಲ್ಲ– ಜನ ಗುದ್ದಿಕೊಂಡು ಸತ್ತರು – ಆ ಗುದ್ದಪ್ಪನ ಬೇನೆಯಲ್ಲಿ ದೇವಣ್ಣನ ತಂದೆತಾಯಿಗಳಿಬ್ಬರೂ ಅವನನ್ನು ಅವನ ಪಾಡಿಗೆ ಬಿಟ್ಟು ಪ್ರಪಂಚದ ಸಂಬಂಧ ಹರಿದುಕೊಂಡರು. ಆಗ ಅವನಿಗೆ ಹನ್ನೊಂದು ತಿಂಗಳು ಮಾತ್ರ! ಎಳೆಯ ಕಂದಮ್ಮ ಅವನಿನ್ನೂ.

"ಸಮೀಪದ ಬಂಧುಬಳಗ ಸುತ್ತುಮುತ್ತಲೂ ಹೆಣೆದುಕೊಂಡಿದ್ದರೂ ಆ ಕೂಸನ್ನು ತಮ್ಮ ತೊಟ್ಟಿಲಲ್ಲಿ ತೆಗೆದುಕೊಳ್ಳಲು ಯಾರೊಬ್ಬರೂ ಮುಂದಾಗಲಿಲ್ಲ. ಮಗುವಿನ ತಂದೆತಾಯಿ ಆಸ್ತಿಪಾಸ್ತಿ ಏನಾದರೂ ಬಿಟ್ಟುಹೋಗಿದ್ದರೆ ಆ ಚಿಣ್ಣನ ಜೋಪಾನಕ್ಕಾಗಿ ನಾನು ಮುಂದೆ ತಾನು ಮುಂದೆ ಎಂದು ಎಲ್ಲರೂ ಕಚ್ಚಾಡುತ್ತಿದ್ದರೇನೊ!

ಎರಡು ದಿನ ಆ ಕೂಸು ಹಾಲಿಲ್ಲದೆ ವಿಲಿವಿಲಿ ಹಲುಬಿತಂತೆ. ಪಾಪ, ಸಾವು

ಹೊಕ್ಕ ಮನೆಯಲ್ಲಿ ಹಗಲು ರಾತ್ರಿ ಅದೊಂದೆ ಉಸಿರೆಳೆಯಬೇಕು. ಏನೂ ಸಂಬಂಧವಿಲ್ಲದ ಸತ್ಯಪ್ಪನ ತಂದೆ ಆ ಕೂಸಿನ ಭಾಗ್ಯ ಕಂಡು ಮಮ್ಮಲನೆ ಮರುಗಿದರು. "ಸತ್ಯನ ಜೊತೆಯಲ್ಲಿ ಇವನೂ ಇನ್ನೊಬ್ಬ ಮಗ" ಎಂದು ಅವರು ಇವನನ್ನು ಎತ್ತಿಕೊಂಡು "ದೇವಣ್ಣ" ಎಂದು ಕರೆದರು. ದೇವರು ಅನುಗ್ರಹಿಸಿದ ಮಗು, ದೇವರ ಕೃಪೆಯನ್ನು ಹೊತ್ತು ಬಂದ ಮಗು, ದೇವಣ್ಣನಲ್ಲದೆ ಇನ್ನೇನು? ಅಂದಿನಿಂದ ಇವನ ಹೆಸರಾಯಿತು. ಆ ಹೆಸರಿನಲ್ಲಿಯೆ ಬೆಳೆದು ದೊಡ್ಡವನಾಗಿದ್ದಾನೆ, ಮನುಷ್ಯನಾಗಿದ್ದಾನೆ.

ಸತ್ಯಪ್ಪನಿಗೂ ದೇವಣ್ಣನಿಗೂ ಹದಿನೈದು ವರ್ಷಗಳ ಹಿರಿಕಿರಿತನ. ಸತ್ಯಪ್ಪನ ತಂದೆ ತೀರಿಕೊಳ್ಳುವ ಸಮಯಕ್ಕೆ ದೇವಣ್ಣನಿಗೆ ಅದೆ ಆಗ ಹತ್ತನೆಯ ವರುಷ.

ಅವರು ತಮ್ಮ ಮರಣದ ಪೂರ್ವದಲ್ಲಿ ಸತ್ಯಪ್ಪನನ್ನೂ, ತಮ್ಮ ಸೊಸೆ–ಸತ್ಯಪ್ಪನ ಹೆಂಡತಿ ಹೂವಕ್ಕನನ್ನೂ ಬಳಿಯಲ್ಲಿ ಕರೆದುಕೊಂಡು ದೇವಣ್ಣನನ್ನು ಅವರ ವಶಕ್ಕೆ ಒಪ್ಪಿಸಿದರಂತೆ.

"ಸತ್ಯ, ಮರೆಯಬೇಡ ನೋಡು. ಹೂವಕ್ಕ, ಲಕ್ಷ್ಯದಲ್ಲಿರಲಿ. ದೇವೂ ಸಣ್ಣವನು. ಅವನಿಗೆ ಇನ್ನು ನೀವೇ ಆಧಾರ. ನಾನಂತೂ ಹೊರಟುಬಿಟ್ಟೆ" ಎಂದು ಹೇಳುವ ಹೊತ್ತಿಗೆ ಅವರ ಕಂಠ ತುಂಬಿಬಂದಿತ್ತು.

"ನಾವೆಲ್ಲ ನೋಡಿಕೊಳ್ಳುತ್ತೇವೆ. ಅದರ ಚಿಂತೆ ನಿಮಗೆ ಎಳ್ಳಷ್ಟೂ ಬೇಡ" ಎಂದು ಭರವಸೆ ಕೊಟ್ಟ ಮೇಲೆ ಅವರ ಕಣ್ಣಿನಿಂದ ಆನಂದಬಾಷ್ಪಗಳು ತುಳುಕಿದವಂತೆ.

"ಏನೂ ಅರಿಯದ ಹುಡುಗ ಅವನು. ಅವನಿಂದ ತಪ್ಪು ತಡೆ ಆದೀತು. ನೀವು ಅದನ್ನೆಲ್ಲ ಹೊಟ್ಟೆಯಲ್ಲಿ ಹಾಕಿಕೊಂಡು ಮರೆತುಬಿಡಬೇಕು. ಎಲ್ಲರಂತಲ್ಲ, ಅವನು ಮುಗ್ಧ ಸಂಗಯ್ಯ. ಅವನ ಮನಸ್ಸು ಕೊರಗಬಾರದು. ಅವನಿಗೆ ಏನೊಂದೂ ಕೊರತೆಯಾಗದಂತೆ ನೋಡಿಕೊಳ್ಳಬೇಕು."

"ಇದೋ ವಚನ ಕೊಳ್ಳಿರಿ" ಎಂದು ಸತ್ಯಪ್ಪ ಅವರ ಕೈಯಲ್ಲಿ ತನ್ನ ಕೈಯನ್ನಿರಿಸಿದಾಗ ಅವರ ಜೀವನದ ಹೊಯ್ದಾಟ ಶಾಂತವಾಗಿ ಅವರು ಸಮಾಧಾನದಿಂದ ಕಣ್ಣು ಮುಚ್ಚಿದರಂತೆ.

ತಂದೆಗೆ ಮಾತು ಕೊಟ್ಟಂತೆ ಸತ್ಯಪ್ಪನಾಗಲಿ, ಮಾವನಿಗೆ ಭರವಸೆ ಹೇಳಿದಂತೆ ಹೂವಕ್ಕನಾಗಲಿ ದೇವಣ್ಣನ ಸುಖಸಂತೋಷಗಳಲ್ಲಿ ಹೆಚ್ಚುಕಡಿಮೆ ಮಾಡಲಿಲ್ಲ. ಅಣ್ಣನ ರಕ್ಷೆಯಲ್ಲಿ, ಅತ್ತಿಗೆಯ ಮಮತೆಯಲ್ಲಿ ದೇವಣ್ಣ ಹುಡುಗತನವನ್ನು ನೀಗಿ ತಾರುಣ್ಯದ ಸೋಪಾನವನ್ನೇರಿದ.

ದೇವಣ್ಣ ಬೆಳೆಬೆಳೆದಂತೆ ಸತ್ಯಪ್ಪನ ಕೆಲಸದಲ್ಲಿ ಸ್ವಪ್ರೇರಣೆಯಿಂದ ನೆರವಾಗತೊಡಗಿದ. ಅವನ ಬಾಳು ಮನೆತನದ ಸುಖದುಃಖದಲ್ಲಿ ಬೆರೆತುಹೋಗಿತ್ತು. ಹೊಲಮನೆಯ ಯಾವ ಕಾರ್ಯದಲ್ಲಾದರೂ ದೇವಣ್ಣನ ಕೈವಾಡ ಎದ್ದುಕಾಣಬೇಕು.

ಮನೆತನದ ಜೀವಾಳ ಅವನು. ಮನೆಮಂದಿಗೆಲ್ಲ ಅನ್ನ ಒದಗಿಸುವ ಧಣಿ ಆತ. ಮನೆತನದಲ್ಲಿ ಅತೃಪ್ತಿ, ಅಸಮಾಧಾನ ಯಾವುದೊಂದು ಇಲ್ಲ. ಎಲ್ಲ ಸಂತುಷ್ಟಿ, ಸಮಾಧಾನ, ನೆಮ್ಮದಿ, ಬಾಳು ಹಾಯಾಗಿ ಸಾಗಿತ್ತು. ಮಧುರ ಗೀತದಂತೆ ಸ್ವಚ್ಛಂದಮಯವಾಗಿ ಎನ್ನಬಹುದು. ಕಾವ್ಯವಾಣಿಯಲ್ಲಿ ಹೇಳಬೇಕಾದರೆ!

ಮದುವೆಯಾಗಿ ಹದಿನೈದು ವರುಷಗಳಾದರೂ ಮಕ್ಕಳನ್ನು ಕಾಣದೆ ಇರುವ ಹೂವಕ್ಕನಿಗೆ ದೇವಣ್ಣ ನಚ್ಚಿನ ಮೈದುನನೂ ಸರಿ, ಒಲುಮೆಯ ಮಗನೂ ಸರಿ.

ಇನ್ನು ಸತ್ಯಪ್ಪ ತನ್ನ ತಂದೆಯ ನೆಳಲೆಂದರೆ ಒಪ್ಪೀತು.

ಎಂದಮೇಲೆ ಮನೆಯಲ್ಲಿ ದೇವಣ್ಣನ ಸ್ಥಾನಮಾನ ಎಂಥದೆಂಬುದನ್ನು ಸುಲಭವಾಗಿ ತರ್ಕಿಸಬಹುದು.

ಮನೆತನದ ಜವಾಬ್ದಾರಿಯನ್ನು ದೇವಣ್ಣನಿಗೆ ಒಪ್ಪಿಸಿಯಾದ ಮೇಲೆ ಊರಲ್ಲಿ ಸತ್ಯಪ್ಪನ ಯಜಮಾನಿಕೆ ಆರಂಭವಾಯಿತು ಆ ಕಾಲಕ್ಕೆ.

ಆಗಲೆ ದೇವಣ್ಣ ವಯಸ್ಸಿಗೆ ಬಂದಿದ್ದ. ಮದುವೆಯ 'ಹಂಗಾಮು' ಅವನಿಗೆ! ಮನೆತನದ ಗೌರವಕ್ಕೆ ಉಚಿತವಾದ, ದೇವಣ್ಣನ ಸ್ವಭಾವ ರುಚಿಗೆ ಹೊಂದಿಕೆಯಾಗದ ಹೆಣ್ಣಿಗಾಗಿ ಸತ್ಯಪ್ಪ ಹತ್ತೂ ಕಡೆಗೆ ತಿರುಗಿ ಕೊನೆಗೆ ಒಂದೆಡೆಯಲ್ಲಿ ನಿಶ್ಚಯ ಮಾಡಿಬಂದ. ಮದುವೆಯೂ ನಡೆದುಹೋಯಿತು. ಕನ್ಯಾಶೋಧದಲ್ಲಿ ಸತ್ಯಪ್ಪ ವ್ಯಯಿಸಿದ ಶ್ರಮ ವ್ಯರ್ಥವಾಗಲಿಲ್ಲ. ಪೂರ್ಣ ಸಾರ್ಥಕವಾಯಿತೆಂದೆ ಹೇಳಬಹುದು.

ಜಾನಕಿ ದೇವಣ್ಣನಿಗೆ ತಕ್ಕ ಹೆಂಡತಿ.

ಹೂವಕ್ಕನಂತೆ ಅವಳದೂ ಬಹು ದೊಡ್ಡ ಜೀವ. ವಿಶಾಲ ಮನಸ್ಸು. ಕೊಳಚೆಯ ಲವಲೇಶ ಕೂಡ ಅಲ್ಲಿಲ್ಲ. ಮನಸ್ತಾಪ ಬಂದರೆ ಮನಸ್ಸಿಗೆ ಹಚ್ಚಿಕೊಳ್ಳುವ ಸ್ವಭಾವವೆ ಅವಳದಲ್ಲ. ಭಿನ್ನತೆ ಬಂದರೆ ನುಂಗಿಕೊಂಡುಬಿಡುವಳು. ನಿಜವಾಗಿಯೂ ಜಾಹ್ನವಿ.ಆಕೆ. ಒಡಕನ್ನು ಮೆತ್ತುವ ಗುಣ ಅವಳದು. ಹಿಗ್ಗಿಸುವ ಚಾಳಿಯನ್ನು ಅವಳು ಕಲಿತೆ ಇಲ್ಲ. ಅಂತರ, ಅಸಂತುಷ್ಟಿಗಳ ನಡುವೆ ಸೇತುವೆ ಹಾಕುವ ಜೀವ ಅದು. ಅಂತೂ ಒಟ್ಟಿನಲ್ಲಿ ಹೂವಕ್ಕನ ತಂಗಿ ಆಕೆ.

ಹೀಗೆ ಈ ಸಂತಸದ ಕಡಲಲ್ಲಿ ನಾಲ್ಕು ವರ್ಷ ನಾಲ್ಕು ಗಳಿಗೆಯಂತೆ ತೇಲಿ ಹೋದವು.

ಜಾನಕಿಯ ಮಗ ಮುತ್ತೂ ಇನ್ನೂ ಎರಡು ಬೇಸಗೆಯನ್ನು ಕಳೆದಿಲ್ಲ. ನಿನ್ನೆ ಮೊನ್ನೆಯ ಕೂಸು. ಜಾನಕಿಯನ್ನು ಕಂಡರೆ ಅವನಿಗಾಗದು. ಹೂವಕ್ಕನನ್ನು ಅಗಲಿ ಆತ ಒಂದು ನಿಮಿಷ ಕೂಡ ಇರುವುದಿಲ್ಲ. ರಾತ್ರಿ ಮಲಗುವಾಗಲೂ ಅವನಿಗೆ ತಾಯಿ ಬೇಕಿಲ್ಲ. ಒಂದು ವೇಳೆ ಜಾನಕಿಯ ಬಳಿಯಲ್ಲಿಯೆ ನಿದ್ದೆ ಹೋಗಿದ್ದರೆ, ಮಧ್ಯ ಎದ್ದು ರಗಳೆಗೆ

ಪ್ರಾರಂಭ. ಹೂವಕ್ಕನ ಬಳಿ ಒಯ್ದು ಹಾಕಿದಾಗಲೆ ಅವನು ಮತ್ತೆ ಕಣ್ಣುಮುಚ್ಚಿ ಮಲಗಬೇಕು. ತಾಯಿಯಲ್ಲದ ತಾಯಿ ಹೂವಕ್ಕನಿಗೆ ತಾಯ್ತನ ಬಂತು.

ಹೀಗೆ ಜಾನಕಿಗೂ ಹೂವಕ್ಕನಿಗೂ ಬಹಳ ಹೊಂದಿಕೆಯಾಯಿತು. ಯಾವುದಾದರೂ ಕಾರಣದಿಂದಾಗಿ ಅವರು ಒಬ್ಬರೊಬ್ಬರು ದೂರವಾದರೆ ಮುತ್ತೂ ಅವರಿಬ್ಬರನ್ನು ಸಮೀಪಕ್ಕೆ ತರುವ ಸಾಧನವಾದನು.

ಆ ವರ್ಷ ವಿಪರೀತ ಬೆಳೆ. ಸೊಬಗಿನ ಬೆಳೆ ಎನ್ನುತ್ತಾರಲ್ಲ, ಅದು! "ಮುತ್ತುವಿನ ಕಾಲ್ಗುಣ ಚೆನ್ನಾಗಿದೆ. ಇದಕ್ಕೆಲ್ಲ ಅವನೇ ಕಾರಣ!" ಎನ್ನುತ್ತಾನೆ ಸತ್ಯಪ್ಪ ಹುಮ್ಮಸ್ಸಿನಿಂದ, ಅಭಿಮಾನದಿಂದ.

ಆ ಮಾತು ಕೇಳಿ ದೇವಣ್ಣ ಜಾನಕಿಯ ಕಡೆಗೆ ನೋಡುತ್ತಾನೆ. ಜಾನಕಿ ಮುಖದಲ್ಲಿ ಒಂದು ಸೂಕ್ಷ್ಮ ನಗೆಯನ್ನು ತೇಲಿಸಿಬಿಡುವಳು.

—ಇಷ್ಟೆಲ್ಲ ಹೇಳಿ ಯಜಮಾನರು 'ಆದರೆ ನೋಡ್ರಿ ...' ಎಂದರು. ಮುಂದೇನೊ ಎಂದು ನನ್ನ ಎದೆ ಜೋರಿನಿಂದ ಹೊಡೆದುಕೊಳ್ಳಲಾರಂಭಿಸಿತು. ನಾನು ಎವೆಯಿಕ್ಕದೆ ಅವರ ಮುಖವನ್ನೇ ನಿರೀಕ್ಷಿಸುತ್ತಿದ್ದೆ. ಯಾವ ಮಾತು ಬರುವುದೊ ಎಂದು.

"ಅಯ್ಯೋ ಕಚೇರಿ ಕೆಲಸ ಮರ್ತುಬಿಟ್ಟೆ, ಗೌಡ್ರೇ! ಊರಿಗೆ ಕಾಳು ಕಡಿ ಒಯ್ಯಬೇಕಾಗಿದೆ. ಪರವಾನಗಿ ತರಬೇಕು." ಎಂದು ಅವರು ಎದ್ದುಬಿಟ್ಟರು. ನನಗೆ ತುಂಬ ಅಸಮಾಧಾನವಾಯಿತು.

ಇನ್ನೊಮ್ಮೆ ಊರಿಗೆ ಬಂದಾಗ ಅವಶ್ಯವಾಗಿ ಬರಬೇಕೆಂದು ಯಜಮಾನರಿಗೆ ಭಿನ್ನವಿಸಿಕೊಂಡು ನಾನು ಅವರನ್ನು ಬೀಳ್ಕೊಟ್ಟೆ. ಅವರು ಹೇಳಬೇಕೆಂದು ಆರಂಭಿಸಿ ಅರ್ಧಕ್ಕೇ ನಿಲ್ಲಿಸಿದ "ಆದರೆ ನೋಡ್ರಿ...." ಎಂಬ ಮಾತು ನನ್ನನ್ನು ಇನ್ನೂ ಕುತೂಹಲನನ್ನಾಗಿ ಮಾಡಿರುವುದು.

ಆದರೆ ಎಂದರಲ್ಲ ಅವರು. ಬಹುಶಃ ಏನಿರಬೇಕಾದೀತು?

೩

ಹಾಗೆಯೆ ಎರಡು ಮೂರು ದಿನ ನಾನು ಯಜಮಾನರ ಹಾದಿ ಕಾಯ್ದೆ. ನನ್ನ ನಿರೀಕ್ಷೆಯಂತೆ ಅವರು ಬರಲಿಲ್ಲ. ಅವರ ಕೆಲಸದಲ್ಲಿ ಅನುಕೂಲ ಒದಗಿರಲಾರದು ಎಂದು ನನ್ನ ಮನಸ್ಸಿಗೆ ಸಮಾಧಾನ ಹೇಳಿಕೊಂಡೆ. ನನ್ನ ತರ್ಕ ಸರಿಯಾಯಿತು.

ಯಜಮಾನರು ನಾಲ್ಕನೆಯ ದಿನ ಇಳಿಹೊತ್ತಿನ ಸುಮಾರಕ್ಕೆ ನಮ್ಮ ಮನೆಗೆ ಆಗಮಿಸಿದರು.

ಎರಡು ಮೂರು ದಿನಗಳಲ್ಲಿ ಬರಲಿಲ್ಲವೇಕೆ ಎಂದು ನಾನು ಯಜಮಾನರನ್ನು ಪ್ರಶ್ನಿಸಿದೆ ಸೌಮ್ಯವಾಗಿ.

ಅವರು ನೀಳವಾಗಿ ಉಸಿರ್ಗರೆದು ಹೇಳಿದರು.

"ನಮ್ಮ ಹಳ್ಳಿಗೆ ಹಳ್ಳಿಯೆ ತೊಳೆದು ಹೊಗತೊಡಗಿದೆ, ಗೌಡರೆ! ಅಳಿದು ಹೋಗತೊಡಗಿದೆ; ಅಳಿಸಿ ಹೋಗತೊಡಗಿದೆ. ಉಳಿಯುವ ಲಕ್ಷಣವೇನೂ ಕಾಣಿಸುವುದಿಲ್ಲ. ಈ ಪ್ರಮಾಣದಲ್ಲಿ ಖಾಲಿಯಾದರೆ ಇನ್ನು ವರ್ಷಾರು ತಿಂಗಳಲ್ಲಿ ನಿರ್ನಾಮವಾಗುವುದರಲ್ಲಿ ಸಂದೇಹವೇ ಇಲ್ಲ."

ಯಜಮಾನರು ಕ್ಷಣ ಹೊತ್ತು ಸುಮ್ಮನಾದರು.

ಬರಗಾಲದ ಒಂದು ರುದ್ರ ಚಿತ್ರ ನನ್ನ ಕಣ್ಮುಂದೆ ಹಾದು ಹೋಯಿತು.

"ನಾವು ಹೇಗಾದರೂ ಬದುಕಬೇಕಾಗಿದೆ. ನಮ್ಮ ಊರಿನ ರೈತಬಂಧುಗಳೆಲ್ಲ ಹೊಲಮನೆಯನ್ನು, ದನಕರುಗಳನ್ನು, ತಮ್ಮ ಸರ್ವಸ್ವವನ್ನು ಕೈಗೆ ಬಂದಂತೆ ತೂರಿಕೊಂಡು ಜೀವ ಹಿಡಿದುಕೊಂಡಿರುವುದಕ್ಕಾಗಿ ಗುಳೆ ಹೊರಟಿದ್ದಾರೆ. ಅರ್ಧಕ್ಕೆ ಮೇಲ್ಪಟ್ಟು ಜನ ಈಗಾಗಲೆ ಊರುಬಿಟ್ಟಿದ್ದಾರೆ. ಊರಲ್ಲೆಲ್ಲ ಹಾಳು ಸುರಿದಿದೆ. ಓಣಿ, ಮನೆ ಬರಿದಾಗಿ ಕಾಣತೊಡಗಿವೆ."

ಯಜಮಾನರ ಕಣ್ಣು ಮಂಜುಮಂಜಾದವು. ಅವರ ಕಂಠ ಕಂಪಿಸತೊಡಗಿತು.

ಈ ಎರಡು ಮೂರು ದಿನ ನಮ್ಮ ಜನರನ್ನು ಬೀಳ್ಕೊಡುವುದಕ್ಕೆ ನಿಂತೆ, ಗೌಡರೆ! ಹೋದರು, ದೂರ ದೂರ ಹೋದರು. ನಾವು ಒಬ್ಬರನ್ನೊಬ್ಬರು ಪುನಃ ಕಂಡೇವೆಯೊ ಇಲ್ಲವೊ ಎಲ್ಲ ಅನಿಶ್ಚಿತ. ನಿಮಗೆ ಬಿಜಾಪುರದಲ್ಲಿದ್ದವರಿಗೆ ಆರು ಮೈಲಿನಾಚೆಯ ಹಳ್ಳಿಯಲ್ಲಿ ನಡೆದಿರು ಈ ಗೋಳಿನ ಕಥೆ ಹೇಗೆ ತಿಳಿದೀತು, ಗೌಡರೇ ತಿಳಿಯಲಾರದು.

ಅದನ್ನು ಕೇಳಿ ನನ್ನ ಕರುಳು ಕಲಕಿದಂತಾಯಿತು. ಜೀವ ಹಿಂಡಿದಂತಾಯಿತು.

ಸತ್ಯಪ್ಪ–ದೇವಣ್ಣನವರ ಸಂಸಾರ ಚಿತ್ರ ಕಂಡವರಿಗೆ ಹೊಟ್ಟೆಕಿಚ್ಚು ಹಿಡಿಸುವಷ್ಟು ರಮ್ಯವಾಗಿತ್ತು. ಸಂತೋಷಭರಿತವಾಗಿತ್ತು. ಆ ಹಸನಾದ ಬಾಳುವೆಯಲ್ಲಿ ಕಲಂಕವೆಬುವುದಿಲ್ಲ. ಮನಸ್ಸೂ ಬೆಳೆಯಿತು. ಮನೆತನವೂ ಬೆಳೆಯಿತು. ಜತೆಗೂಡಿ ಆಡಲು ಮುತ್ತೂ ತಂಗಿಯೊಬ್ಬಳನ್ನು ಪಡೆದುಕೊಂಡ.

ಜಾನಕಿಯ ತಾಯಿ ದೇವಣ್ಣನ ಅತ್ತೆ ತನ್ನ ಮೊಮ್ಮಕ್ಕಳನ್ನು ನೋಡಿಕೊಂಡು ಹೋಗಲು ಬಂದಳು. ಮಹಾರಾಯಗಿತ್ತಿ ಯಾವ ಮುಹೂರ್ತದೊಳಗೆ ಮನೆಯಲ್ಲಿ ಕಾಲಿಟ್ಟಳೊ, ಜಗಳದ ಬೀಜ ಬಿತ್ತಿ ಹೋದಳು. ಅಂದಿನಿಂದ ದ್ವೇಷದ ಅಂಕುರಕ್ಕೆ ಮೊದಲಾಯಿತು. ಮನಸ್ತಾಪ ಒಳಗೊಳಗೆ ಮಸೆಯಲಾರಂಭಿಸಿತು.

ಸತ್ಯಪ್ಪ ಮೋಸಗಾರನಂತೆ. ವಂಚನೆ ಮಾಡಿದನಂತೆ. ಇಲ್ಲವಾದರೆ ತಮ್ಮನಲ್ಲದ ಈ ನಿರ್ಗತಿಕ ಬೀದಿಯ ಭಿಕಾರಿಗೆ ತನ್ನ ಮಗಳನ್ನು ಅವಳು ಖಂಡಿತ ಕೊಡುತ್ತಿರಲಿಲ್ಲವಂತೆ. ಪಾಪ, ಜಾನಕಿಯ ಭವಿತವ್ಯ ಚೂರುಚೂರಾಗಿ ಹೋಯಿತಂತೆ, ಸತ್ಯಪ್ಪ ಅವರನ್ನು

ಮನೆಯಿಂದ ಹೊರಗೆ ತಳ್ಳಿದರೆ ಉಪವಾಸ ವನವಾಸ ಸಾಯಬೇಕು ಅವರು. ನಿಲ್ಲಲು ನೆರಳಿಲ್ಲ– ಗೆಯ್ಯಲು ಅಂಗೈ ಅಗಲ ನೆಲವಿಲ್ಲ ಅವರಿಗೆ! ತನ್ನದೆನ್ನುವ ಆಶ್ರಯ ಏನಿದೆ ದೇವಣ್ಣನಿಗೆ ? ಸತ್ಯಪ್ಪ ಈಗಲೇನೊ ಒಳ್ಳೆಯವನೆ. ಇದೆ ಮನಸ್ಸು ಕೊನೆಯವರೆಗೂ ತಾಳಬೇಕಲ್ಲ! ಯಾವುದು ಶಾಶ್ವತ ಈ ಪ್ರಪಂಚದಲ್ಲಿ?

ಮುದುಕಿ ರೇಗಿಗೆದ್ದು ಚೀರಾಡಿದಳು. 'ಅಯ್ಯೋ ನನ್ನ ಮಗಳ ಗತಿಯೇನು?' ಎಂದು ಬೋರಾಡಿಕೊಂಡು ಅತ್ತಳು. ತನ್ನ ಮೊಮ್ಮಕ್ಕಳ ಪಾಲಿಗೆ ಮೂರು ತೂತಿನ ಪರಟಿ ಚಿಪ್ಪು ಎಂದು ತಲೆತಲೆಯನ್ನು ಜಜ್ಜಿಕೊಂಡಳು.

"ಇದೆಲ್ಲ ಏನವ್ವ?" ಎಂದು ಜಾನಕಿ ಹೇಳಿದರೂ ಕೇಳಲಿಲ್ಲ.

"ಸುಮ್ಮನಿರೆ ನಿನಗೇನು ತಿಳಿಯುತ್ತೆ ಹುಚ್ಚುಹುಡುಗಿ" ಎಂದು ಅವಳನ್ನೆ ಜಬರಿಸಿಬಿಟ್ಟಳು. ಎಂಥ ಗಂಡು ಬೀರಿ ಹೆಣ್ಣು ಅವಳು.

"ಯಾಕೆ ಇಷ್ಟೆಲ್ಲ ರೇಗ್ತೀಯಾ ತಾಯೀ? ಈ ಬದುರು ತಿನ್ನುವವರು ಯಾರು ? ಎಲ್ಲದಕ್ಕೂ ಆತನೆ ಬಾಧ್ಯಸ್ಥ. ಇವಳೆ ನಮ್ಮ ತಂಗಿ ಮನೆ ಯಜಮಾನಿ! ನಾವಿನ್ನೇಸು ದಿನ ಬದುಕಬೇಕಾದೀತು ನೀನೆ ಹೇಳವ್ವ" ಎಂದು ಹೂವಕ್ಕ.

"ನಿನ್ನ ಉಪಚಾರದ ಮಾತು ಇರ್ಲಿ. ಅಂತೂ ಸೋಗು ಚೆನ್ನಾಗಿ ಕಲ್ತೀ" ಎಂದು ಆಕೆ ಹೂವಕ್ಕನ ಮೇಲೆ ಹರಿಹಾಯ್ದಳು.

ಹೊರಗೆ ಜಗುಲಿಯ ಮೇಲೆ ಕುಳಿತು ಸತ್ಯಪ್ಪ ಇದನ್ನೆಲ್ಲ ಆಲಿಸುತ್ತಿದ್ದ. ದೇವಣ್ಣನೂ ಅವನ ಜೊತೆಯಲ್ಲಿ ತನ್ನ ಕಿವಿಯನ್ನೂ ಚಾಚಿದ್ದ.

"ಕೇಳಿದೆಯಾ ದೇವೂ" ಎಂದ ಸತ್ಯಪ್ಪ.

"ಹೂಂ" ಎಂದ ದೇವಣ್ಣ.

"ಈ ಬಡಿವಾರಗಿತ್ತಿಯ ಮಾತಿಗೆ ಬಿದ್ದು ನೀನೂ ಅಡ್ಡ ಹಾದೀ ಹಿಡಿದೆ." ಎಂದು ತಾಯಿ ಮಗಳನ್ನು ಶಪಿಸಿದಳು.

ಸತ್ಯಪ್ಪನಿಗೆ ಇದನ್ನು ಕೇಳಿ ಸಹಿಸಲಾಗಲಿಲ್ಲ.

"ಸಾಕು ಬಾಯ್ಮುಚ್ಚು" ಎನ್ನುತ್ತ ಆತ ಹೊರಗಿನಿಂದ ಎದ್ದುಬಂದ.

"ನೀನ್ಯಾರೊ ಚೆಲುವ ಹೇಳಲಿಕ್ಕೆ?" ಎಂದಳಾಕೆ ವ್ಯಂಗ್ಯವಾಗಿ.

"ಹೂಂ ಸಾಕು. ನಡೆ, ಹೊರಡು ತೊಲಗಾಚೆಗೆ" ಎಂದು ಕಠೋರವಾಗಿ ಕಂಠ ಹರಿಯುವಂತೆ ನುಡಿದ ಸತ್ಯಪ್ಪ.

"ನೋಡೋ, ನಿನ್ನದೇನಾದರೂ ಇಲ್ಲಿ ಇದ್ದಿದ್ದರೆ ನನ್ನ ಹೊರಗೆ ಕಳಿಸೊ ನಾಲಿಗೆ ಯಾರಿಗಿತ್ತು?" ಎಂದು ಆಕೆ ಕಣ್ಣೀರು ಹಾಕಿದಳು.

"ಅಳಿಯ ದೇವರು ಮಂಕುಬಡಿದು ಕುಳಿತಿದ್ದಾನೆ. ಅತ್ತೆಯ ಮಾನ ಕವಡೆಗೆ

ಕಡೆಯಾಗಿ ಹೋದರೂ ಮಾತೆ ಇಲ್ಲ. ನನ್ನದು ಎಂದು ಅವನು ಕೈಮಾಡಿ ತೋರಿಸುವ ವಸ್ತುವಾದರೂ ಏನಿದೆ ಇಲ್ಲಿ?"

"ನಿನ್ನ ಮನೆ ಮುರಿಯಲಿ, ನಿನ್ನ ವಂಶ ಹಾಳಾಗಲಿ" ಎಂದು ಆ ಮುದುಕಿ ಲಟಿಗೆ ಮುರಿಯುತ್ತ ಯಥೇಷ್ಟವಾಗಿ ಹರಿಸಿ ಕಂಡಕಂಡವರೆದುರು ಇದನ್ನು ಕತೆ ಮಾಡಿ ಹೇಳಿಕೊಂಡು ನಡೆದುಬಿಟ್ಟಳು.

ದೇವಣ್ಣ ಸುಮ್ಮನೆ ದೇವರಂತೆ ನಿರ್ವಿಕಾರನಾಗಿ ಕುಳಿತಿದ್ದ. ಜಾನಕಿ ಮಾತ್ರ ಆದದ್ದನ್ನೆಲ್ಲ ನೋಡಿ ಅಪ್ರತಿಭಳಾಗಿ ಹೋದಂತೆ ತೋರಿತು.

ಆ ದಿನದ ಘಟನೆಯನ್ನು ಯಾರೂ ಮನಸ್ಸಿಗೆ ತಂದುಕೊಳ್ಳದೆಹೋದರೂ ತಂತಮ್ಮ ನಡುವೆ ಏನೊ ಒಂದು ಅಡ್ಡವಾಗಿ ನಿಂತಿರುವಂತೆ ಅವರಿಗೆ ಭಾಸವಾಯಿತು. ಮಾತುಕತೆಯಲ್ಲಿ ಅಂದಿನಿಂದ ತೂಕ, ಬಿಗುವು. ಮೊದಲಿನ ಬಿಚ್ಚುಮನಸ್ಸು, ಮುಕ್ತಹೃದಯ ಅವರದಲ್ಲ. ಎಲ್ಲಿ ಹೆಚ್ಚುಕಡಿಮೆಯಾದೀತೊ ಎಂಬ ಭಯ.

ಸತ್ಯಪ್ಪ ಸ್ಥಿತಪ್ರಜ್ಞ. ಹಿಮಾಲಯ ಗಾಂಭೀರ್ಯ ಆತನದು. ಆದರೆ ಹೂವಕ್ಕನ ಮೃದುಹೃದಯಕ್ಕೆ ಇದನ್ನು ಸಹಿಸುವುದಾಗಲಿಲ್ಲ. ಅವಳ ಮನಸ್ಸು ಗಾಸಿಯಾಗಿ ಹೋಯಿತು. ಜಾನಕಿ ಈಗ ತಂಗಿಯಲ್ಲ. ಒಬ್ಬ ಹೆಣ್ಣುಮಗಳು ಅಷ್ಟೆ, ಜಾನಕಿಯ ಮಕ್ಕಳನ್ನು ಕಾಣುವ ದೃಷ್ಟಿಯಲ್ಲಿಯೂ ಬದಲಾವಣೆ ಬಂದುಹೋಯಿತು. ಯಾರದೊ ಮಕ್ಕಳನ್ನು ತನ್ನದೆಂದು ಮುದ್ದಾಡುವುದು ಎಂಥ ಹುಚ್ಚು ಮೋಹ! ಆ ಹುಡುಗರೆಂದರೆ ಅವಳಿಗೆ ಈಗ ಎಂದಿಲ್ಲದ ತಾತ್ಸಾರ, ಅನಾದರ.

ತಮ್ಮ ತಾಯಿ ಹೇಳಿದ ಮಾತು ಸಟೆಯಲ್ಲ. ಅಕ್ಷರಶಃ ನಿಜವೆಂದು ಜಾನಕಿಗೆ ಸ್ಪಷ್ಟವಾಗತೊಡಗಿತು. ವಿಚಾರ ಮಾಡಿದಂತೆ ಆ ವಿಷಯದಲ್ಲಿ ಅವಳಿಗೆ ಯಾವ ಸಂಶಯವೂ ಉಳಿಯಲೆ ಇಲ್ಲ. ತಾನು ಮನೆಯ ಯಜಮಾನಿಯಂತೆ, ಎಂಥ ನಟನೆ ಅದು. ಈ ಮನೆಯಲ್ಲಿ ತಮ್ಮ ಸ್ಥಾನಮಾನ ಏನು ಎನ್ನುವುದು ತನಗೆ ತಿಳಿಯದೇನು? ತಾನೊಂದು ಕೆಲಸದ ತೊತ್ತು; ಇನ್ನೇನೂ ಅಲ್ಲವೆಂದು ಅವಳ ಭಾವನೆ.

೪

ಬರಬರುತ್ತ ಈ ಅಗಲ ಹೆಚ್ಚತೊಡಗಿತು. ಯಾರು ಏನು ಮಾಡಿದರೂ ನಂಬಿಕೆಯಿಲ್ಲ. ಎಲ್ಲವನ್ನೂ ಸಂಶಯ ಬುದ್ಧಿಯಿಂದ ಕಾಣುವುದಕ್ಕೆ ಮೊದಲಾಯಿತು.

ಸತ್ಯಪ್ಪನಿಗೆ ನಿದ್ರೆ ನೀರಡಿಕೆ ಬೇಡಾದವು.

ತಾನು ತಂದೆಗಿತ್ತ ವಚನವೇನು? ಈಗ ನಡೆದಿರುವ ಈ ನಾಟಕದ ಅರ್ಥವೇನು? ಒಂದಕ್ಕೊಂದು ಸಂಬಂಧವೆ ಇಲ್ಲ.

ಸತ್ಯಪ್ಪ ಹೆಂಡತಿಯನ್ನು ಕರೆದ: "ಇದು ಏನಾಯಿತೆ?" ಎಂದ.

"ಆಗುವುದೇನು? ಅವರನ್ನು ಮನೆಬಿಟ್ಟು ದಬ್ಬಬೇಕು, ಅವಳಂತೂ ಮನೆಯೆನ್ನದೆ ಬೀದಿಯೆನ್ನದೆ ಸಿಕ್ಕಸಿಕ್ಕಲ್ಲಿ, ಕೂಗಾಟ ಎಬ್ಬಿಸಿದ್ದಾಳೆ. ಎಲ್ಲಿಯವಳೊ ಏನೊ. ಇವಳದು ನನಗೇನಂತೆ?"

"ಹಾಗಾದರೆ ಮರಣಪೂರ್ವದಲ್ಲಿ ನಿನ್ನ ಮಾವನಿಗಿತ್ತ ವಚನ?"

"ಎಲ್ಲಿಯವರೆಗೆ ಸಾಧ್ಯವೊ ಅಲ್ಲಿಯವರೆಗೆ ನಡೆಸಿದ್ದಾಯಿತು."

"ದೇವೂ ಪಾಪ, ನಿರಾಧಾರಿ. ಅವನದೇನೂ ತಪ್ಪಿಲ್ಲ, ಹೂವ್ವಾ! ಗಂಜಿಗೆ ಗತಿಯಲ್ಲದ ದಿನಮಾನ, ನಾವು ಕೈಬಿಟ್ಟರೆ ಅವನ ಗತಿಯೇನು?"

"ಅವನು ಹಾಗೆ ಏನೂ ಅರಿಯದವನಂತೆ ಮೆತ್ತಗೆ ಕಾಣುತ್ತಾನೆ. ಅವನೇನೂ ಸಾಮಾನ್ಯನಲ್ಲ. ಅವನು ಕಲಿಸಿದ್ದಕ್ಕೇ ಅವಳಿಗಿಷ್ಟು ಬಾಯಿ ಬಂದಿರೋದು. ನಮ್ಮ ಅನ್ನ ತಿಂದು ನಮ್ಮ ಮೇಲೆಯೆ ಮತ್ತೂ ತಿರುಗಿಬೀಳೋದು, ಅಲ್ಲವೆ ?"

ಯಾರ ಕಿವಿಗೆ ಬಿದ್ದೀತು ಬಿಟ್ಟೀತು ಎಂಬ ವಿಚಾರವಿಲ್ಲದೆ ಹೂವಕ್ಕ ಆಣೆಕಲ್ಲು ಸುರಿದಂತೆ ಮಾತು ಕೊಡವಿಬಿಟ್ಟಳು.

ದೇವಣ್ಣ ಎಮ್ಮೆಯನ್ನು ಕೊಟ್ಟಿಗೆಯಲ್ಲಿ ಕಟ್ಟಿ ಬಾಗಿಲೊಳಗೆ ಬಂದಿದ್ದ. ಈ ಮಾತುಗಳನ್ನು ಕೇಳಿ ಅವನು ಹಾಗೆಯೆ ಹಿಂದಿರುಗಿ ಹೋಗಿ ಜಗುಲಿಯ ಮೇಲೆ ಕುಳಿತ.

ದೇವಣ್ಣನನ್ನು ಆರೋಪಿಸಿ ನುಡಿದ ಮಾತುಗಳನ್ನು ಕೇಳಿ ಸತ್ಯಪ್ಪನಿಗೆ ತಡೆಯಲಾಗಲಿಲ್ಲ.

"ನಿನ್ನ ನಾಲಿಗೆಗೆ ಸ್ವಲ್ಪ ಹಿಡಿತ ಇರಲಿ. ತೀರ ಅಂಕೆ ತಪ್ಪಬಾರದು" ಎಂದ. ಅವನ ಮನಸ್ಸು ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಗಿತ್ತು.

"ಓಹೊ ! ಕಂಡದ್ದನ್ನಾಡಿದರೆ ಕೆಂಡದಂಥ ಕೋಪ" ಎಂದಳು ಹೂವಕ್ಕ.

"ಅದೇನೆ ನೀನು ಕಂಡದ್ದು?" ಎಂದ ಸತ್ಯಪ್ಪ ಕಣ್ಣರಳಿಸಿ ಕೇಳಿದ. ತಂದೆಯ ಶುಭ್ರಮೂರ್ತಿ ಅವನ ಕಣ್ಣೆದುರು ಕಟ್ಟಿತ್ತು.

"ಅದೇನೂ ಇಲ್ಲ. ಈ ಮನೆಯಲ್ಲಿ ಅವರಾದರೂ ಇರಬೇಕು, ನಾನಾದರೂ ಇರಬೇಕು. ಇಬ್ಬರೂ ಜೊತೆಯಾಗಿರುವುದು ಎಂದಿಗೂ ಎಂದೆಂದಿಗೂ ಸಾಧ್ಯವಿಲ್ಲ."

"ಹೊರಗೆ ಹೋಗುವ ಆಸೆಯಿದ್ದರೆ ಹೋಗಿಬಿಡು ನೀನೆ. ಕೂಡಿದ ಮನೆ ಹೋಳು ಮಾಡುವ ಇಚ್ಛೆ ನನಗಿಲ್ಲ."

"ಆಗಲಿ, ಇದೊ ನಾನು ಹೊರಟೆ. ನೀವೆ ಸಂತೋಷದಿಂದ ಚಕ್ಕಂದವಾಗಿರ್ರಿ" ಎನ್ನುತ್ತ ಉಟ್ಟ ಸೀರೆಯ ಮೇಲೆ ಹೂವಕ್ಕ ಹೊರಬಿದ್ದಳು.

"ಅತ್ತಿಗೇ" ಎಂದು ದೇವಣ್ಣ ಅಂಗಲಾಚಿದ.

" ನಿನ್ನ ಮನೆ ನಿಮ್ಮಪ್ಪ ಸಂಪಾದಿಸಿದ್ದು. ನೀನೆ ಇರಪ್ಪ" ಎಂದು ತನ್ನ ಎದೆಯ

ವಿಷವನ್ನೆಲ್ಲ ಕಾರಿಕೊಂಡು ನಡೆದೇಬಿಟ್ಟಳು.

ಸ್ವಲ್ಪ ಹೊತ್ತಿನ ನಂತರ ಜಾನಕಿ ಮನೆಗೆ ಬಂದು "ಅಕ್ಕ ಹೋದರಂತೆ ಅದ್ಯಾಕ್ರೀ?" ಎಂದು ಗಂಡನನ್ನು ವಿಚಾರಿಸಿದಳು.

"ಇದಕ್ಕೆಲ್ಲ ಮೂಲ ಇದ್ದೀಯಲ್ಲ, ನೀನು." ಎಂದು ದೇವಣ್ಣ ಅಪರೂಪಕ್ಕೊಮ್ಮೆ ರೇಗಾಡಿ" ನೀನು ಹೋದರೆ ಇದೆಲ್ಲ ಸರಿಯಾಗೋದು" ಎಂದ.

"ಬೇಡ ಎಂದವರಾರು? ನಡೆಯಿರಿ ಹಾಗಾದರೆ."

ಸತ್ಯಪ್ಪ ಒಳಗಿನಿಂದ ಓಡಿಬಂದ.

"ದೇವ್ರೂ ನನ್ನ ಸಾಯಿಸಬೇಕು ಅಂತೀಯೇನೊ! ಅಯ್ಯೊ. ಏನಪ್ಪಾ ಇದೆಲ್ಲಾ? ಜಾನೂ, ನೀನು ಮೊದಲು ಒಳಗೆ ನಡೆ ತಾಯೀ" ಎಂದು ಅವನು ತಲೆಯ ಕೈ ಹೊತ್ತು ಕುಳಿತುಬಿಟ್ಟ.

ಒಂದು ದಿನವಾಯಿತು. ಎರಡು ದಿನವಾಯಿತು. ಇಂದು ಬಂದಾಳು, ನಾಳೆ ಬಂದಾಳು ಎಂದು ಅವಳ ದಾರೀ ನೋಡಿ ಮೂರು ದಿನಗಳೂ ಕಳೆದುಹೋದವು. ಸತ್ಯಪ್ಪನಿಗೆ ತಳಮಳವಾಯಿತು. ಹೂವಕ್ಕ ಮರಳಿ ಬರಲೆ ಇಲ್ಲ. ದೇಹಗಳೆರಡಾದರೂ ಅವರಿಬ್ಬರದೂ ಒಂದು ಹೃದಯ. ಗಂಡಭೇರುಂಡ ಜಾತಿ ಅವರ ಮನಸ್ಸು.

"ದೇವ್ರೂ ಬಂದಾಳೊ ಇಲ್ಲವ್ರೊ ಅಪ್ಪ ?" ಎಂದು ಸತ್ಯಪ್ಪ ಹಗಲಿರುಳು ಕವನರಿಸುವನು.

ಹೂವಕ್ಕನನ್ನು ಬಿಟ್ಟು ಒಂದು ನಿಮಿಷ ಕೂಡ ಅಗಲಿರುವುದು ಅವನಿಗೆ ಅಸಾಧ್ಯ. ತಾಪದಾಯಕ ವಿಷಯ. ಅದು ಏನೊ ಸಹಜವಾಗಿ ಹೋಗಿದ್ದಾಳೆಂದರೆ ಆ ಪ್ರಶ್ನೆಯೆ ಬೇರೆ. ಆದರೆ ಆಕೆ ಮನೆಬಿಟ್ಟು ಹೋದ ಸನ್ನಿವೇಶವನ್ನು ಗಮನಿಸಿದರೆ ಸಮಾಧಾನ ಮಾಡಿಕೊಳ್ಳುವ ಪರಿಸ್ಥಿತಿಯಿಲ್ಲ.

ನಾಲ್ಕನೆಯ ದಿನ ಸತ್ಯಪ್ಪ ಮನೆಯಲ್ಲಿ ನಿಲ್ಲಲಿಲ್ಲ. ಹೂವಕ್ಕನನ್ನು ಕರೆದುಕೊಂಡು ಬರಲು ಹೊರಟುಬಿಟ್ಟ.

ದೇವಣ್ಣನ ಮನಸ್ಸಿನಲ್ಲಿ ನಾನಾತೆರನಾದ ವಿಚಾರತರಂಗಗಳೆದ್ದವು. ಇನ್ನು ಮನೆಯಲ್ಲಿ ನಿಲ್ಲುವುದು ವಿಹಿತವಲ್ಲವೆಂದು ಅವನು ನಿಶ್ಚಯಿಸಿದ. ಊರ ದೇವಸ್ಥಾನದ ಮಗ್ಗುಲಲ್ಲಿ ಒಂದು ಗುಡಿಸಲನ್ನು ಹಾಕುವ ಏರ್ಪಾಟು ಮಾಡಿದ. ಅದಕ್ಕಾಗಿ ಭಗೀರಥ ಪ್ರಯತ್ನ ಮಾಡಬೇಕಾಯಿತು. ಅಂತೂ ಎಂತೊ ಏನೊ ಕೊನೆಗೊಮ್ಮೆ ದೇವಣ್ಣನ ಪರ್ಣಕುಟಿರ ಸಿದ್ಧವಾಯಿತು.

ಸತ್ಯಪ್ಪ ಹೂವಕ್ಕನೊಂದಿಗೆ ಮರಳಿ ಬರುವುದರೊಳಗಾಗಿ ದೇವಣ್ಣ ತನ್ನ ನೂತನ ಗೃಹದಲ್ಲಿ ತನ್ನ ಮುರುಕು ಸಂಸಾರ ಹೂಡಿದ್ದ.

ಮನೆಗೆ. ಬೀಗ ಹಾಕಿದೆಯೆಂದು ಸತ್ಯಪ್ಪನಿಗೆ ಕಲ್ಪನೆಯಾದರೂ ಹೇಗೆ ಬರಬೇಕು? ದೇವಣ್ಣ ಅವರೆಲ್ಲ ಕದವಿಕ್ಕಿಕೊಂಡು ಮಲಗಿರಬೇಕೆಂದು ಅವನ ಭಾವನೆ.

"ದೇವ್ಹೂ, ದೇವ್ಹೂ" ಎಂದು ಸತ್ಯಪ್ಪ ಕೂಗಿದ.

ದೇವಣ್ಣ ತನ್ನ ಗುಡಿಸಲಿನಿಂದ ಓಡಿಬಂದು ಅಣ್ಣನ ಕೈಗೆ ಕೀಲಿಯನ್ನಿತ್ತು "ಈಗ ಬಂದೇನವ್ವಾ?" ಎಂದು ಹೂವಕ್ಕನನ್ನು ವಿಚಾರಿಸಿ ಹಾಗೆ ಹಿಂತಿರುಗಿ ಹೋಗಿಬಿಟ್ಟ.

ಸತ್ಯಪ್ಪನಿಗೆ ಎಲ್ಲವೂ ಅರ್ಥವಾಯಿತು.

"ಮುಂದಿನ ಸಮಾಚಾರ ನಿಮಗೆ ಗೊತ್ತಿದೆಯಲ್ಲ" ಎಂದು ಯಜಮಾನರು ಕೇಳಿದರು.

"ಗೊತ್ತಿರದೆ ಇದ್ದರೂ ಕೊನೆಗೆ ಊಹಿಸಿ ತಿಳಿಯಬಹುದು" ಎಂದೆ.

"ಅದೊ ಮರೆತೆ ಗೌಡರ" ಎಂದು ಯಜಮಾನರು ತಾವು ಮರೆತ ಮಾತಿನ ಪ್ರಸ್ತಾಪವನ್ನೆತ್ತಿದರು.

"ಸತ್ಯಪ್ಪ ದೇವಣ್ಣ ಒಂದೆ ಕೊಳಲಿನ ಎರಡು ಕಣ್ಣುಗಳಂತೆ ಬೆಳೆದು ಬಂದವರು. ದೇವಣ್ಣ ಉಪವಾಸ ಬಿದ್ದು ತನ್ನ ಹೊಟ್ಟೆಯನ್ನೂ ತನ್ನ ಹೆಂಡಿರು ಮಕ್ಕಳ ಹೊಟ್ಟೆಯನ್ನೂ ಬಳಲಿಸುತ್ತಿರುವುದನ್ನು ಕಂಡು ಸತ್ಯಪ್ಪನಿಗೆ ಸಹಿಸಲಾಗಲಿಲ್ಲ."

"ನಡೆಯೊ, ತಮ್ಮ ಮನೆಗೆ" ಎಂದು ದೇವಣ್ಣನ ಗುಡಿಸಲುವರೆಗೆ ಬಂದು ಹಲುಬಿದ.

ಹೂವಕ್ಕ ಮಾತ್ರ ಅವರ ಗುಡಿಸಲು ಕಡೆಗೆ ಕೂಡ ತಲೆಹಾಕಿ ಮಲಗಲಿಲ್ಲ.

"ದೇವ್ಹೂ, ನಿನಗೆ ಬೇಡಾದರೆ ಬಿಡು. ಓಡಿ ಈ ಐನೂರು ರೂಪಾಯಿ. ನೀನು ಸಂಪಾದಿಸಿದ ಗಂಟು, ತಗೊ. ನೀನೂ ಒಂದು ಬಿಟ್ಟು, ಎರಡು ಎಮ್ಮೆ ಕಟ್ಟು" ಎಂದ ಸತ್ಯಪ್ಪ, ಸೋದರ ವಾತ್ಸಲ್ಯದಿಂದ.

"ಅಣ್ಣಾ, ಬೇಡಪ್ಪ ನನಗೆ "ಎಂದು ದೇವಣ್ಣ ಒಂದು ಮಾತು ಹೇಳಿ ನಿರಾಕರಿಸಿಬಿಟ್ಟ. ಅಣ್ಣನ ಪ್ರೇಮದ ಆಹ್ವಾನವನ್ನು.

"ಮೌಳಿ ನನ್ನ ನಂಬಿಲ್ಲ ತಮ್ಮ, ಅದನ್ನು ನೀನೆ ಕಟ್ಟಿಕೊ."

"ಅದೇನು ನಮ್ಮ ಅಪ್ಪನ ಸಂಪಾದನೆಯಲ್ಲ. ನಾನು ಗಳಿಸಿದ ಬದುಕೂ ಅಲ್ಲ" ಎಂದು ದೇವಣ್ಣ ಶೂನ್ಯದಲ್ಲಿ , ದೃಷ್ಟಿಯನ್ನಿಟ್ಟು ಹೇಳಿದ.

ಅಲ್ಲಿಗೆ ಆ ಕತೆ ಮುಗಿಯಿತು.

ಸತ್ಯಪ್ಪ ಆ ಎಮ್ಮೆಯನ್ನು ಮಾರಿ ಹೊಸ ಎಮ್ಮೆ ಕೊಂಡು ತರಲು ಹೋಗಿದ್ದಾನೆ. ಇನ್ನೂ ಬಂದಿಲ್ಲ.

– ಇಷ್ಟು ಹೇಳಿ ಯಜಮಾನರು ತಮ್ಮ ಮಾತು ಮುಗಿಸಿ ಎದ್ದರು.

ಅವರು ಮರೆಯಾಗಿ ಹೋದಮೇಲೆ ಅಯ್ಯೊ ದೇವಣ್ಣನ ಸುದ್ದಿಯನ್ನೇ ಕೇಳಲಿಲ್ಲ

ಎನಿಸಿತು.

ಪಾಪ, ದೇವಣ್ಣನ ಸಂಸಾರದ ಗತಿಯೇನಾಗಿದೆಯೋ ?

೫

ಅನ್ನ ಸಂಪಾದನೆಗಾಗಿ ದೇವಣ್ಣ ಮನೆಯಿಂದ ಹೊರಟುಬಂದ ಐದು ದಿನಗಳ ಮೇಲಾಯಿತು.

ಅವನು ಬರುವಾಗ ಮೂರು ದಿನದ ಗಂಜಿ ಮನೆಯಲ್ಲಿತ್ತು.

ಜಾನಕಿಯ ಗೊಡವೆ ಏನಾದಾರಾಗಲಿ. ಆದರೆ ಮುತ್ತೂ ಅನ್ನವಿಲ್ಲದೆ ಬಳಲುವುದನ್ನು ಹೂವಕ್ಕನಿಗೆ ನೋಡುವುದಾಗಲಿಲ್ಲ. ಎಷ್ಟಾದರೂ ಜೋಕೆ ಮಾಡಿದ ಕರುಳು ಅದು. ತನ್ನ ಮನೆಯಲ್ಲಿ ತಿನ್ನಲು ಅನ್ನ ಬಿದ್ದಿರುವಾಗ ತನ್ನ ಆರೈಕೆಯಲ್ಲಿ ಬೆಳೆದ ಹುಡುಗ ಒಂದು ಗುಟುಕು ಗಂಜಿಗೂ ಗತಿಯಿಲ್ಲದೆ ಒಣಗಿ ಹೋಗಬೇಕೆ ?

ಹೀಗೆಂದು ಮನಸ್ಸಿನಲ್ಲಿ ಧ್ಯಾನಿಸಿ ಹೂವಕ್ಕ ಜಾನಕಿಯ ಗುಡಿಸಲಿನವರೆಗೂ ಹೋದಳು. ಮತ್ತೆ ಮನಸ್ಸು ಬದಲಿಸಿತು. ಅಭಿಮಾನ ಬಂದು ಅವಳನ್ನು ಅಡ್ಡಗಟ್ಟಿತು. ಮುಂದಕ್ಕೆ ಹೋಗಲು ಬಿಡಲಿಲ್ಲ.

ಹುಡುಗರಿಬ್ಬರೂ ಹಸಿದು ಹಸಿದು ಸೋತು ನಿದ್ದೆ ಹೋಗಿದ್ದರು. ಜಾನಕಿ ಮಾತ್ರ ತೂಕಡಿಕೆಯಲ್ಲಿದ್ದಂತೆ ತೋರಿತು. ಇದ್ದ ಒಂದೆ ಒಂದು ತುಣುಕು ರೊಟ್ಟಿಯನ್ನು ಬೆಕ್ಕು ಕಚ್ಚಿಕೊಂಡು ಜಿಗಿದಾಗಲೆ ಅವಳಿಗೆ ಎಚ್ಚರ.

ಜಾನಕಿ ಎಲ್ಲಿ ನೋಡುವಳೊ ಎಂದು ಹೂವಕ್ಕ – ಅಭಿಮಾನದ ಆ ಪುತ್ಥಳಿ, ಅಲ್ಲಿ ನಿಲ್ಲದೆ ತನ್ನ ಮನೆಗೆ ಓಡಿದಳು.

ಹುಡುಗರೆದ್ದು ಹೊಟ್ಟೊ ಹೊಟ್ಟೊ ಬಡಿದುಕೊಂಡು ಗೋಳಾಡಿದರೆ, ಜಾನಕಿ ಏನು ಹೇಳಬೇಕು? ಅವರಿಗೆ ಸಮಾಧಾನ ಹೇಳುವ ತುಣುಕು ರೊಟ್ಟಿಯೂ ಅವಳ ಅಜಾಗರೂಕತೆಯಿಂದ ಕಳೆದುಹೋಯಿತು. ಉಪವಾಸಕ್ಕೆ ಅಧಿಕಮಾಸ ಬೇರೆ.

ಈ ಎಂಟು ದಿನಗಳಲ್ಲಿ ಜಾನಕಿ ಬಹಳ ಇಳಿದುಹೋಗಿದ್ದಳು. ತನಗೇ ತಿನ್ನಲು ಅನ್ನ ಇಲ್ಲದಾಗ ಜೊತೆಗೆ ಹೊಟ್ಟೆ ಭಾರವನ್ನು ಬೇರೆ ಹೊರಬೇಕಾಗಿದೆ ಆಕೆ. ಗರ್ಭಿಣಿ ಹೆಣ್ಣು ರಕ್ತವಿಲ್ಲದೆ ಕೃಶಳಾಗಿ ಬಿಳಿಚಿಕೊಂಡಾಗಿಬಿಟ್ಟಿರುವಳು.

ತೌರುಮನೆಗಾದರೂ ಹೋಗಿ ಆಶ್ರಯ ಹೊಂದಬೇಕೆಂದರೆ ಅವರದೂ ರಾಮಾಯಣದ ಕಥೆ. ನೋವಿನ ಒಂದು ದುರಂತ ಚರಿತ್ರೆ. ಇವಳ ತಾಯಿ ಎಲ್ಲಿಯೊ ದೂರ ಮೊಗಲಾಯಿ ಸೀಮೆಯಲ್ಲಿ ತಮ್ಮ ಅಕ್ಕನ ಬಳಿಗೆ ಹೋಗಿರುವಳಂತೆ. ಇನ್ನು ಅಣ್ಣ? ಆತ ಐದು ಬೆರಳು ಸರಿಯಾಗಿದ್ದಾಗಲೆ ಕಣ್ಣೆತ್ತಿ ನೋಡಿದವನಲ್ಲ. ಅವರ ಊರಿನಲ್ಲಿ ಕೂಳು ಲಭಿಸುವುದು ಒಂದೆಡೆಯುಳಿಯಲಿ. ನೀರಿಗಾಗಿ ಒಂಭತ್ತು ಮೈಲು

ಅಲೆಯಬೇಕಾಗಿದೆಯಂತೆ.

ಕೈಯಲ್ಲಿ ನಾಲ್ಕು ಕಾಸು ಹಣವಿದ್ದ ಜನ ಈ ಮರುಭೂಮಿಯನ್ನು ದಾಟಿ ಮರುವನಗಳಿದ್ದ ಪ್ರದೇಶಗಳನ್ನು ಹುಡುಕಿಕೊಂಡು ಹೊರಟಿದ್ದಾರೆ. ಇಂದಿನ ಗಂಜಿಗೆ ಬೇಡ ನಿನ್ನೆ ಮೊನ್ನೆಯ ಗಂಜಿಗೆ ಗತಿಯಿಲ್ಲದ ಜಾನಕಿ ಪಾಪ, ಎಲ್ಲಿ ಹೋದಾಳು.

ನಾಲ್ಕು ಕಡೆಯಲ್ಲಿಯೂ ನಿರಾಸೆ. ಶರಣೆಂದರೂ ಎತ್ತಿಕೊಳ್ಳುವ ರಕ್ಷಕ ಯಾರೊಬ್ಬನೂ ಇಲ್ಲ.

ಹುಡುಗರು ನಿದ್ರೆಯಿಂದೆಚ್ಚತ್ತರೆ ಕೀಟಲೆಗೆ ಪ್ರಾರಂಭ. ಜಾನಕಿ ಅವರಿಗೆ ಆಸೆ ಹೇಳುವಳು. ಭರವಸೆ ಹೇಳುವಳು. ಅವರ ಕಣ್ಣೆದುರು ಇಂದ್ರಲೋಕದ ಕನಸು ಕಟ್ಟುವಳು. ಆದರೆ ಒಣ ಆಸೆ ಭರವಸೆಯಿಂದ ಅವರ ಒಡಲ ಆಳ ತುಂಬಬೇಕಲ್ಲ! ಒಂದೆರಡು ಸಲವೇನೊ ಆ ಹುಡುಗರಿಗೆ ಅವಳ ಮಾತಿನಲ್ಲಿ ನಂಬಿಗೆ ಹುಟ್ಟಿತ್ತು ಅಷ್ಟೆ. ಹೊತ್ತು ಉದಿಸಿ, ಹೊತ್ತು ಮುಳುಗಿದರೂ ದೇವಣ್ಣ ಬರಲೆ ಇಲ್ಲ. ಜಾನಕಿ ಕಂಗಾಲಾದಳು. ಹುಡುಗರು ಮೆಲ್ಲನೆ ಒಂದು ರಾಗದಲ್ಲಿ ರೋದಿಸಿದವು. ಗಟ್ಟಿಯಾಗಿ ಹಲುಬಿಕೊಳ್ಳಲು ಚೀರಿಕೊಳ್ಳಲು ಅವರ ಮೈಯಲ್ಲಿ ಶಕ್ತಿಯಿಲ್ಲ. ಎಲ್ಲ ಉಡುಗಿಹೋಗಿದೆ. ಪೂರ್ತಿ ನಿತ್ರಾಣರಾಗಿದ್ದಾರೆ ಅವರು.

ಜಾನಕಿ ನೀರನ್ನು ತರಲಿಕ್ಕೆ ಹೋದವಳು ಬೇಗನೆ ತಿರುಗಿ ಬರಲಿಲ್ಲ. ಒಂದು ಕೊಡ ನೀರನ್ನು ಹೊತ್ತು ತರುವ ಚೈತನ್ಯವೂ ಅವಳಿಗಿಲ್ಲದಾಗಿದೆ. ದಾರಿಯಲ್ಲಿ ನಡುವೆ ಐದು ಸಲ ಕುಳಿತು ಎದ್ದು ಚೇತರಿಸಿಕೊಂಡು –ಅಂತೂ ಕೊನೆಗೊಮ್ಮೆ ಜಾನಕಿ ನೀರನ್ನು ತೆಗೆದುಕೊಂಡು ಮನೆಗೆ ಬಂದಳು.

ಗುಡಿಸಲಲ್ಲಿ ಮುತ್ತೂ ಇರಲಿಲ್ಲ. ಹೆಣ್ಣು ಮಗುವೊಂದೆ ಮಲಗಿ ನಿದ್ರಿಸುತ್ತಿತ್ತು. ಅವನೆಲ್ಲಿ ಹೋಗಿದ್ದಾನೆಂಬುದನ್ನು ಗಮನಿಸುವ ಕುತೂಹಲ ಅವಳಿಗಿಲ್ಲ. 'ಉಸ್ಸಂ'ದು ಅವಳು ಮುದುಡುಕೊಂಡು ಚಾಪೆಯ ಮೇಲೆ ಬಿದ್ದುಕೊಂಡಳು.

ಮುತ್ತೂ ತನ್ನ ಜೇಬಿನಿಂದ ಪುಠಾಣಿ ಅವಲಕ್ಕಿ ತೆಗೆದು ತಿನ್ನುತ್ತ ಗುಡಿಸಲಿನಲ್ಲಿ ಕಾಲಿಟ್ಟ. ಜಾನಕಿಗೆ ರೇಗಿ ಹೋಯಿತು. ಹಸಿವೆಯ ಕೋಪ ಅವಳ ಅಂಗಾಂಗದಲ್ಲಿ ಚಿಮ್ಮಿತ್ತು. ತಾನು ಮನೆಯಲ್ಲಿಲ್ಲದಾಗ ತಮಗೆ ಆಗದವರ ಮನೆಗೆ ಹೋಗಿ ಅವರು ಕೊಟ್ಟಿದ್ದನ್ನು ನಾಚಿಕೆಯಿಲ್ಲದೆ ತಿಂದು ಬರುವುದು ಎಂದರೇನು? ಛೀ ! ಎಲ್ಲಿಯಾದರೂ ಉಂಟೆ? ಎಂದು ಜಾನಕಿ ಅವನನ್ನು ಹಿಡಿದುಕೊಂಡು ತನ್ನ ಕೈ ಸೋಲುವವರೆಗೆ ಪಟಪಟನೆ ಹೊಡೆದಳು. ಜೇಬಿನಲ್ಲಿ ತುಂಬಿಕೊಂಡಿದ್ದ ಪುಠಾಣಿ ಅವಲಕ್ಕಿಯನ್ನು ಕಸಿದು ಬಿದಿಗೆಸೆದು ಬಂದಳು.

ಹೊಟ್ಟೆಗೆ ಒಂದು ಇಡಿಗಾಳನ್ನು ಕಾಣದೆ ಸುಕ್ಕಿಸುಕ್ಕಿ ಸೊರಗಿದ ಅಲ್ಲಿಯ ಕಾಗೆ ಹದ್ದುಗಳು ಒಂದನ್ನೊಂದು ಕಚ್ಚಾಡಿ ಒಂದು ನಿಮಿಷ, ಅರೆ ನಿಮಿಷದಲ್ಲಿ ಅದೆಲ್ಲವನ್ನು ನುಂಗಿಹಾಕಿದವು.

ಅಲ್ಲಿ ಚೆಲ್ಲಿದ್ದ ತನ್ನ ಪಾಲಿನ ತಿನಸನ್ನು ಹದ್ದು ಕಾಗೆ ಬಿದ್ದು ಬಿದ್ದು ತಿನ್ನುವುದನ್ನು ಮುತ್ತ್ಯಾ ಆಸೆಗಣ್ಣಿನಿಂದ ನಿರೀಕ್ಷಿಸುತ್ತಿದ್ದ ಹಾಗೆಯೆ ಅವನ ಬಾಯಿ ನೀರೊಡೆಯಿತು. ಕಣ್ಣು ಕಂಬನಿದುಂಬಿದವು.

ಆ ರಾತ್ರಿ ಹೇಗೊ ಕಳೆಯಿತು. ಬೆಳಿಗ್ಗೆ ಎದ್ದಾಗ ಮತ್ತೆ ಅದೆ ಹಾಡು, ಅದೆ ರಾಗ. ಜಾನಕಿ ನಿರ್ವಿಣ್ಣಳಾಗಿ ಬಿದ್ದುಕೊಂಡಿದ್ದಳು. ಅವಳ ಕೃಶ ಶರೀರ ಕರುಣೆಗಿಂತ ಭೀತಿಯನ್ನು ಹುಟ್ಟಿಸುವಂತಿತ್ತು. ಕಣ್ಣು ಗುಳಿಬಿದ್ದು ಗಲ್ಲ ಒಳಸೇರಿಹೋದ ಅವಳ ಆಕೃತಿ ಭಯಾನಕವಾಗಿತ್ತು.

ನಾಲ್ಕು ತಾಸು ಹೊತ್ತೇರಿದ್ದರೂ ಅವಳು ಹೊರಗೆ ಹಣಿಕಿ ಹಾಕಿರಲಿಲ್ಲ. ಹಾಕುವ ಕಾರಣವಾದರೂ ಏನು ಅವಳಿಗೆ ? ಈಗ ಗಂಡ ಬಂದಾನೆಂಬ ಆಸೆ ಅವಳಿಗೆ ಕಡಿದುಹೋಗಿದೆ. ಯಾರ ದರ್ಶನಕ್ಕಾಗಿ ಅವಳು ಹೊರಗೆ ಮುಖ ಹಾಕಬೇಕು?

ಹುಡುಗರು ಎದ್ದು ನೀರವವಾಗಿ ರೋದಿಸತೊಡಗಿದ್ದವು. ಅದನ್ನು ಆಲಿಸುವ ಅಸಹ್ಯ ವ್ಯಥೆಯನ್ನು ಸಹಿಸುವುದಾಗದೆ ಜಾನಕಿ ಅತ್ತಿತ್ತ ಜೋಲುತ್ತ ಬಂದು ಚಪ್ಪರಕ್ಕೆ ಆತು ಹೊರಗೆ ನಿಂತಳು. ಅವಳಿಗೆ ನಂಬುವುದಾಗಲಿಲ್ಲ. ಆಕಳು ತಾಯಿ ಕರು ಚಪ್ಪರದ ಮಗ್ಗುಲಲ್ಲಿ ಪವಡಿಸಿದ್ದವು. ಕಣ್ಣು ಸಿಡಿದುಹೋಗುವ ದೃಶ್ಯ–ರಕ್ತ ಮಾಂಸ ಏನೂ ಇಲ್ಲ. ಬರಿ ಎಲುವಿನ ಗೂಡು. ಆ ಮೂಳೆಯ ಸೆಳೆಗಳನ್ನು ಈಕ್ಷಿಸಿ ಅವಳು ಕಣ್ಣು ಕತ್ತಲಿಸಿಹೋದವು.

ಹಿಂದಿನ ದಿನ ತಾನು ಮುತ್ತ್ಯಾವನ್ನು ದಂಡಿಸಿದ ಚಿತ್ರ ಅವಳ ಮನಸ್ಸಿನಲ್ಲಿ ಸುಳಿದು ಹೋಯಿತು. ಬದುಕಬೇಕೆನ್ನುವವರಿಗೆ ಛಲ ಅಭಿಮಾನ ಏಕೆ? ಮಾನಪಮಾನದ ಚಿಂತೆಯೇಕೆ? ಎಂದು ಚಿಂತಿಸಿ ಜಾನಕಿ ಒಂದು ನಿರ್ಧಾರಕ್ಕೆ ಬಂದಳು.

ದೇವಣ್ಣಾ ಈ ಹತ್ತು–ಹನ್ನೆರಡು ದಿನವೂ ಅಲೆದ, ಕೆಲಸಕ್ಕಾಗಿ – ತುತ್ತು ಅನ್ನಕ್ಕಾಗಿ.

ಬಿಜಾಪುರದ ತುಂಬ ತಿರುಕರ ಸಂತೆ. ನಿರ್ಗತಿಕರ ಮಹಾಯಾತ್ರೆ. ತಮ್ಮ ಪಾಲಿನ ತಿರುಪೆಗಾಗಿ ಇವನೆಲ್ಲಿಯ ಪಾಲುಗಾರ ಎಂದು ಎಲ್ಲರೂ ಇವನನ್ನು ಕಂಡು 'ಥೂ, ಥೂ' ಮಾಡಿಬಿಟ್ಟರು.

ಅಷ್ಟರಲ್ಲಿ ಮಹಾಜನರು ಅನ್ನ ಸಂತರ್ಪಣೆಯ ಏರ್ಪಾಟು ಮಾಡಿದರು. ದೇವಣ್ಣನಿಗೆ ತನ್ನ ಕಗ್ಗತ್ತಲೆಯ ಬಾಳಿನಲ್ಲಿ ಒಂದು ಆಶಾಕಿರಣ ಸುಳಿದಂತಾಯಿತು. ಜಾನಕಿಯನ್ನು ಕರೆದುಕೊಂಡು ಬಂದು ಆ ಅನ್ನದ ಆಶ್ರಯದಲ್ಲಿ ನಿಲ್ಲಬೇಕು. ಹಾಗೇ ಕೆಲಸ ಸಂಪಾದಿಸುವ ದಾರಿ ಹುಡುಕಿಕೊಳ್ಳಬೇಕು ಎಂದು ಯೋಚಿಸಿ ಆ ದಿನ ಅಲ್ಲಿಯ ಊಟ ಮಾಡಿಕೊಂಡು ತನ್ನ ಹಳ್ಳಿಗೆ ಪಯಣ ಬೆಳೆಸಿದ. ಜಾನಕಿ ಮಕ್ಕಳ ಗತಿಯೇನೆಂಬ ಚಿಂತೆ ದಾರಿಯುದ್ದವೂ ಅವನ ಮನಸ್ಸನ್ನು ಕಲಕುತ್ತಿತ್ತು.

೬

ಜಾನಕಿ ತನ್ನ ಅಭಿಮಾನವನ್ನು ಅಂಗೈಯಲ್ಲಿಟ್ಟುಕೊಂಡು ಮುಚ್ಚಂಜೆಯಲ್ಲಿ ಹೂವಕ್ಕನ ಬಳಿಗೆ ಹೋದಳಂತೆ! ಕೂಗಲು ಅವಳಿಗೆ ದನಿಯಿಲ್ಲ. ಆಯಾಸಗೊಂಡು ಹಾಗೆಯೆ ಬಾಗಿಲು ಬಳಿಯಲ್ಲಿ ಕುಳಿತುಕೊಂಡಿದ್ದಳು. ಹೂವಕ್ಕ ಆಕಸ್ಮಾತ್ ಬಾಗಿಲಿಗೆ ಬಂದಾಗ ಜಾನಕಿಯ ದರ್ಶನ. ಈಗಾಗಲೆ ಅವಳ ಅಂತಃಕರಣ ಕರಗಿತ್ತು. ಜಾನಕಿಯ ಇರುವನ್ನು ಕಂಡು ಅವಳಲ್ಲಿ ಮರುಕ ತಲೆದೋರಿತ್ತು. ತನ್ನ ಪ್ರೀತಿಯ ಮುದ್ದು ಮುತ್ತುವಿನ ದಲಿತ ಚಿತ್ರ ಅವಳ ಹೃದಯಲ್ಲಿ ಪರಿವರ್ತನೆಯನ್ನು ಉಂಟುಮಾಡಿತ್ತು.

ಆದರೆ ತೋರಿಕೆಯ ಮುನಿಸನ್ನು ಅವಳು ಬಿಡಲಿಲ್ಲ.

"ಓಹೋ! ಈಗ ಬರುವಂತಾಯಿತೇನೊ, ಹೂವಕ್ಕನ ನೆನಪು ಕೊನೆಗಾದರೂ ಬಂದಿತಲ್ಲ."

"ಅಕ್ಕಾ ನಿನ್ನನ್ನು ಹೇಗೆ ಮರೆತೇನೆ?"

"ಹೇಗೆ ಮರೆತೀಯಪ್ಪ? ಹುಡುಗರೆಲ್ಲ ಒಳಗಿ ಸಾಯುವಂತಾದರೂ ನೀನು ನಿನ್ನ ಅಭಿಮಾನ ಬಿಡಬೇಡ. ಹುಡುಗರ ಜೀವಕ್ಕಿಂತ ನಿನ್ನ ಪಂಥ ದೊಡ್ಡದು."

"ನನ್ನದೆಂಥಾದ್ದೆ ಪಂಥ?"

"ತುತ್ತು ಕೂಳಿಗಾಗಿ ಗತಿಯಿಲ್ಲದಿದ್ದರೂ ಇನ್ನೂ ನಿನ್ನ ಒಗರು ಹೋಗಲಿಲ್ಲ. ತಪ್ಪು ನನ್ನದೇ ಅಂತೆ, ಎದ್ದೇಳು ನಡೆಯಾಚೆಗೆ!"

"ಇಲ್ಲ ಅಕ್ಕ; ನನ್ನ ತಪ್ಪು ಏನಿದ್ದರೂ ಮನ್ನಿಸಪ್ಪ. ಇದೊ ಕಾಲು ಹಿಡಿದುಕೊಂಡಿದ್ದೇನೆ."

ಹೂವಕ್ಕನ ಹೃದಯ ತುಂಬಿ ಬಂದಿತ್ತು. ಅವಳನ್ನು ಕರೆದುಕೊಳ್ಳಬೇಕೆಂದು ಕೈಯನ್ನು ಕೆಳಗಿರಿಸದ್ದಳು. ಸುಮ್ಮನೆ ಇನ್ನೂ ಸ್ವಲ್ಪ ನೋಡೋಣ, ಆಮೇಲೆ ಅವಳ ಚಪ್ಪರಕ್ಕೆ ಹೋಗಿ ಜಾನಕಿಯನ್ನು ಅವಳ ಮಕ್ಕಳು ಸಮೇತವಾಗಿ ಕರೆದುಕೊಂಡು ಬಂದರಾಯಿತು. ಹೀಗೆಂದುಕೊಂಡು ಹೂವಕ್ಕ ಹೇಳಿದಳು.

"ಹಾವಿಗೆ ಹಾಲೆರೆದರೇನು ಫಲ? ಅದೆಲ್ಲ ಸಾಧ್ಯವಿಲ್ಲ. ಬಂದ ಹಾದಿ ಹಿಡಿದುಬಿಡು."

–ಜಾನಕಿ, ಕಟ್ಟಿಕೊಂಡಿದ್ದ ಅಂತಿಮ ಆಸೆಯೂ ರಸಾತಳಕ್ಕಿಳಿದುಹೋಯಿತು. ಉಳಿದಿದ್ದ ಅವಳ ಜೀವದಲ್ಲರ್ಧ ಭಾಗ ಅಲ್ಲಿಯೇ ಹಾರಿಹೋದಂತಾಯಿತು.. ಅವಳು ಹಾಗೂ ಹೀಗೂ ಸಾವಕಾಶವಾಗಿ ತೆವಳಿಕೊಂಡು ತನ್ನ ಗುಡಿಸಲಿಗೆ ಬಂದಳು. ಅವಳ ಮನಸ್ಸು ನಿರ್ಧಾರಗೊಂಡಿತು. ಯಾವುದೊ ಒಂದು ತೃಪ್ತಿ ಅವಳ ರುಕ್ಷ ಮುಖದಲ್ಲಿ ಪ್ರಸನ್ನತೆಯನ್ನು ಬೀರಿತ್ತು. ಹುಡುಗರು ಚಿತ್ತವೇಧಕವಾಗಿ ಒರಲುತ್ತಿದ್ದರೂ ಅದನ್ನು ಆಲಿಸಿ ಅವಳ ಮನಸ್ಸೇನೂ ಕದಡಲಿಲ್ಲ.

ಮರುದಿನ ಮಧ್ಯಾಹ್ನಕ್ಕೆ ದೇವಣ್ಣ ಹಿಂತಿರುಗಿದ. ಜಾನಕಿಗೆ ಯಾವ ಸಮಾಧಾನ ಹೇಳಲಿ ಎಂದು ತಳಮಳಿಸುತ್ತ ಅವನು ತನ್ನ ಗುಡಿಸನ್ನು ಹೊಕ್ಕ. ಇದೇನು! ಜಾನಕಿಯಿಲ್ಲ. ಹುಡುಗರೂ ಇಲ್ಲ. ಅಣ್ಣನ ಮನೆಗೇನಾದರೂ. ಹೋದಳೆ ಎಂದು ಅಣ್ಣನ ಮನೆಯೆಡೆಗೆ ಹೋದ.

ಹೂವಕ್ಕ "ಬಾ ದೇವಣ್ಣ" ಎಂದು ಅವನನ್ನು ಬರಮಾಡಿಕೊಂಡು "ಅವರಿನ್ನೂ ಬರಲಿಲ್ಲಪ್ಪ" ಎಂದಳು.

ತನ್ನ ಮತ್ತು ಜಾನಕಿಯ ನಡುವೆ ನಡೆದ ಸಮಾಚಾರವನ್ನೆಲ್ಲ ಅವನಿಗೆ ಸಂಕ್ಷಿಪ್ತವಾಗಿ ತಿಳಿಸಿ "ನಿನ್ನೆ ರಾತ್ರಿ ಕರೆಯಲಿಕ್ಕೆ ಹೋಗಿದ್ದೆ ದೇವಣ್ಣ, ಗುಡಿಸಲು ಬರಿದಾಗಿತ್ತು" ಎಂದು ಹೂವಕ್ಕ ಉಕ್ಕಿ ಬರುವ ದುಃಖದಲ್ಲಿ ಈ ಮಾತು ತೋಡಿದಳು.

"ಆದದ್ದಾಯಿತು ದೇವಣ್ಣ ಜಾನಕಿಯನ್ನು ಹುಡುಕಿಕೊಂಡು ಬರೋಣ. ಉಳಿದ ವಿಚಾರವೂ ಬೇಡ, ಇಲ್ಲಿಯೆ ಇದ್ದುಬಿಡಪ್ಪ" ಎಂದು ಅವನನ್ನು ಪ್ರಾರ್ಥಿಸಿದಳು.

ದೇವಣ್ಣ "ಆಗಲಿ" ಎಂದು ಅತ್ತಿಗೆಗೆ ಒಪ್ಪಿಗೆಕೊಟ್ಟು ಅಲ್ಲಿಂದ ನಿಧಾನವಾಗಿ ಹೆಜ್ಜೆಯನ್ನು ಹಾಕುತ್ತ ನಡೆದ.

ಅವನ ಹೃದಯ ಜಡವಾಗಿತ್ತು. ಭಾರವಾಗಿತ್ತು.

ನೀರು ಕುಡಿದು ಬಂದು ಅವನು ಹಾಗೆಯೆ ಆಲೋಚನಾಪರನಾಗಿ ಚಿಂತಾತುರನಾಗಿ ಊರ ಹೊರಗೆ ಭಾವಿಯ ದಂಡೆಯ ಮೇಲೆ ಕುಳಿತುಕೊಂಡಿದ್ದ. ಬಿಸಿಲು ಬಹಳ ತೀಕ್ಷ್ಣವಾಗಿತ್ತು. ಆ ತೀಕ್ಷ್ಣತೆಯಲ್ಲಿ ಭಾವಿಯ ತಳದ ಕಲ್ಲು ಮಣ್ಣು ಕೂಡ ಸ್ಪಷ್ಟವಾಗಿ ಎದ್ದುಕಾಣುತ್ತಿದ್ದವು. ನೋಡುತ್ತಿದ್ದಂತೆಯೆ ಅವನಿಗೆ ಮೂರ್ಛೆ ಬಂದಂತಾಯಿತು. ಹೌದು ಅವರೆ ಒಂದು, ಎರಡು, ಮೂರು!

"ಅಯ್ಯೋ! ಜಾನೂ" ಎಂದು ದೇವಣ್ಣ ಕೂಗಿಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ.

ಸತ್ಯಪ್ಪ ಅದೇ ಹೊಸ ಎಮ್ಮೆಯನ್ನು ಹೊಡೆದುಕೊಂಡು ಬಂದು ಬಾವಿಯಲ್ಲಿ ಕೈಕಾಲು ಮುಖತೊಳೆದು ಮೇಲಕ್ಕೆ ನೋಡಿದಾಗ ಕಪ್ಪಲಿಗಟ್ಟಿನಲ್ಲಿ ದೇವಣ್ಣನ ದೇಹ ತೂಗುತ್ತಿತ್ತು.

"ದೇವ್ಹಾ, ತಮ್ಮಾ ಏನ್ಮಾಡಿದೊ!" ಎಂದು ಸತ್ಯಪ್ಪ ಕರೆಯುತ್ತ ಮನೆಗೆ ಓಡಿದ. ಯಾವುದೊ ಆವೇಶ ಅವನಲ್ಲಿ ತುಂಬಿದಂತೆ ತೋರಿತು. ಎಮ್ಮೆ, ಥೂ, ಅದೇನು ಕಃ ಪದಾರ್ಥ ಅವನಿಗೆ.

ಗಂಡ ಬಂದನೆಂದು ಉಬ್ಬಿ ಹೂವಕ್ಕ ಕಾಲಿಗೆ ನೀರು ತರಲು ಒಳಗೆ ಹೋದಳು. ಸತ್ಯಪ್ಪ ಒಂದು ಉನ್ಮಾದ ನಗೆಯನ್ನು ಬೀರಿ 'ಹಕ್ಕೆ'ಯಲ್ಲಿ ಹೋಗಿಬಂದ.

ಕಾಲಿಗೆ ನೀರನ್ನು ಹಾಕಲು ಹೂವಕ್ಕ ಮುಗುಳುನಗೆಯಲ್ಲಿ ತೇಲಿಕೊಂಡು ಬಂದಳು.

ತಂಬಿಗೆ ಹಿಡಿದುಕೊಂಡು ಅವಳು ಬಾಗಿದಳೊ ಇಲ್ಲವೊ ಹೂವಕ್ಕನ ದೇಹ ಇಬ್ಭಾಗವಾಗಿತ್ತು. ಆ ರಕ್ತದ ಬಿಸಿ ಕಾರಂಜಿಯಲ್ಲಿ ಸತ್ಯಪ್ಪನ ದೇಹಕ್ಕೆ ರಕ್ತಮಜ್ಜನವಾಗಿತ್ತು.

ಈ ದಿನ ಬೆಳಿಗ್ಗೆ ಎದ್ದೊಡನೆಯೆ ನನಗೆ ಸತ್ಯಪ್ಪನ ದರ್ಶನವಾಯಿತು. ಕೈಬಳೆಯ ಅಲಂಕಾರ ಕೊಟ್ಟುಕೊಂಡು ಪೋಲೀಸ ಕಾವಲಿನಲ್ಲಿ ಅವನು ನಡೆದಿದ್ದ.

* * * *

# ಪ್ರಶಂಸೆಯ ನುಡಿಗಳು

ಕಾಲದ ತೆರೆಯನ್ನು ಕೊಂಚ ಸರಿಸಿ ಇಣುಕುನೋಟ ಬೀರಬೇಕು:

೧೯೪೨ನೆಯ ವರುಷ. ಜೂನ್ ತಿಂಗಳು ಕರ್ನಾಟಕ ಕಾಲೇಜಿನ ವರ್ಗಗಳು ಇನ್ನೇನು ಆರಂಭವಾಗಲಿದ್ದವು. ಪ್ರವೇಶ, ಫೀ ರಿಯಾಯತಿಗಳಿಗಾಗಿ ದೈನ್ಯದಿಂದ ಹೇಳಿಕೊಳ್ಳುವ ವಿದ್ಯಾರ್ಥಿಗಳು ನನ್ನ ಕಡೆಗೆ ಬರುವುದು ನನಗೆ ರೂಢಿಯಾಗಿತ್ತು. ಆಗ ಒಬ್ಬ ವಿದ್ಯಾರ್ಥಿ ನನ್ನ ಬಳಿ ಬಂದ. ಉಳಿದ ವಿದ್ಯಾರ್ಥಿಗಳಂತೆ ದೈನ್ಯದ ಭಂಗಿ ಇರಲಿಲ್ಲ. ಕೈಯಲ್ಲಿ ದಪ್ಪನ್ನ ಪ್ಯಾಡ್ ಚಿಕ್ಕ ಪೆನ್ಸಿಲ್, ದೇಹ ಧ್ವನಿ ಎರಡೂ ಗಡಸು.

"ಏನು" ಎಂದೆ.

"ನಾನು ದಿವಂಗತ ಆ. ತು. ಸಾಸನೂರ ಅವರ ಬಗೆಗೆ ಬರೆಯಬೇಕಾಗಿದೆ. ಅವರ ಬಗೆಗೆ ನಿಮಗೆ ಗೊತ್ತಿರುವ ಸಂಗತಿ ಹೇಳ್ರಿ. ನಾನು ನೋಟ್ಸ್ ಮಾಡಿಕೊಳ್ತೇನೆ."

"ಆಗಲಿ, ಮನೆಗೆ ಬಂದರೆ ವಿರಾಮವಾಗಿ ಹೇಳುವೆ."

"ಬರುತ್ತೇನೆ, ನಿಮ್ಮ ಬಗೆಗೂ ಬರೆಯಬೇಕೆಂದಿದ್ದೇನೆ. ಆ ಬಗೆಗೂ ಕೆಲವು ಪ್ರಶ್ನೆಗಳಿಗೆ ನೀವು ಉತ್ತರ ಕೊಡಬೇಕು."

ಉದ್ದೇಶಿತ ಲೇಖನಗಳ ವಿಷಯವೇನಾಯಿತೋ ನನಗೆ ಗೊತ್ತಿಲ್ಲ. ಆದರೆ ನನ್ನ ಬಳಿ ಬಂದ ಈ ವಿದ್ಯಾರ್ಥಿ ನನ್ನ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರಿದ. ಈ ಬಗೆಯ ಆತ್ಮ ವಿಶ್ವಾಸ, ಮುಂಧೋರಣೆಗಳಿಂದ ಕೂಡಿದ ಈ ವಿದ್ಯಾರ್ಥಿಯ ಬಗೆಗೆ ನನಗೆ ಅಭಿಮಾನವೆನಿಸಿತು. ದಿಟ್ಟ ವಿದ್ಯಾರ್ಥಿಗಳ ಬಗೆಗೆ ನನಗೆ ಯಾವಾಗಲೂ ಮೆಚ್ಚುಗೆ.

ಆಗಸ್ಟ್ ತಿಂಗಳು ಬಂದಿತು. ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟವನ್ನು ಹೊಸ ದಿಸಗೆ ತಿರುಗಿಸಿದ ಆಗಸ್ಟ್ ೯ರ ಕಾಂಗ್ರಸ್ ನಿರ್ಣಯ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಕಾಲೇಜಿನಲ್ಲಿ ಗಲಾಟೆ ಆರಂಭವಾಯಿತು. ರವೀಂದ್ರನಾಥ ಠಾಕೂರ ಅವರ ಬಗೆಗೆ ಸೇರಬೇಕಾಗಿದ್ದ ಸಭೆಗೆ ವ್ಯತ್ಯಯವುಂಟಾಯಿತು. "ವರ್ಗಗಳನ್ನು ಬಹಿಷ್ಕರಿಸಿರಿ" ಎಂಬ ಚಳುವಳಿ ಉತ್ಸಾಹದಿಂದ ಸಾಗಿತು.

ಪ್ರೊಫೆಸರರ ತಲೆಯ ಮೇಲೆ ಒತ್ತಾಯದಿಂದ ಗಾಂಧೀ ಟೊಪ್ಪಿಗೆ ಹಾಕವ ಕಾರ್ಯಕ್ರಮವನ್ನು ಕೈಕೊಳ್ಳಲಾಯಿತು. ಒಳ್ಳೆಯ ಸದ್ಗೃಹಸ್ಥರಾದ ಒಬ್ಬ ಯುರೋಪಿಯನ್ ಆಗ ಕಾಲೇಜಿಗೆ ಪ್ರಿನ್ಸಿಪಾಲ್, ಅವರ ತಲೆಗೂ ಬಿಳಿ ಟೊಪ್ಪಿಗೆ ಹಾಕುವ ಪ್ರಯತ್ನ ನಡೆಯಿತು. ಈ ಚಳುವಳಿಯಲ್ಲಿ ಹಿಂದೆ ಹೇಳಿದ ವಿದ್ಯಾರ್ಥಿಯೇ ಮುಂದಾಳು.

ಈ ವಿದ್ಯಾರ್ಥಿಯ ಬಗೆಗೆ ಮುಂದೆ ನನಗೆ ಹೆಚ್ಚಿನ ವಿವರಗಳು ತಿಳಿದುಬಂದವು. ಹಾಯ್‌ಸ್ಕೂಲಿನಲ್ಲಿರುವಾಗಲೂ ಈ ವಿದ್ಯಾರ್ಥಿ ವಕ್ತೃತ್ವ, ಲೇಖನ, ವಿದ್ಯಾರ್ಥಿ ಸಂಘಟನೆಗಳಲ್ಲಿ ಮುಂದಾಳುವೇ ಆಗಿದ್ದ. ಆದರೆ ಬಡತನದ ಮನೆತನ. ತಂದೆ ಸಾದಾ ಗುಮಾಸ್ತೆ. ಶಾಲೆಯ ಫೀ ಹಣ ಕೊಡುವುದಕ್ಕೂ ಅನುಕೂಲವಿಲ್ಲದ ಪರಿಸ್ಥಿತಿ. ಆದರೆ ಅದಮ್ಯ ಉತ್ಸಾಹ ಸಾಹಸ ಪ್ರವೃತ್ತಿ. ಈ ವಿದ್ಯಾರ್ಥಿಗೆ ಬಡತವನ್ನೂ ಮೆಟ್ಟಿ ನಿಲ್ಲುವ ದಿಟ್ಟತನ.

ಈ ವಿದ್ಯಾರ್ಥಿ ಮತ್ತೊಮ್ಮೆ ನನ್ನ ಬಳಿ ಬಂದ. ಲೇಖನದ ವಿಷಯ ಸಂಗ್ರಹಕ್ಕಾಗಿ ಅಲ್ಲ. "ನೀವು ವಿದೇಶೀ ಸರಕಾರದ ನಿಮ್ಮ ನೌಕರಿಗೆ ರಾಜೀನಾಮೆ ಕೊಡಿರಿ" ಧೈರ್ಯದಿಂದಲೇ ಹೇಳಿದ.

ಇಂತಹ ಎದೆಗಾರಿಕೆಯನ್ನು ನಾನು ಮೆಚ್ಚಿಕೊಂಡೆ. ಕೊಂಚ ವಿಚಾರದ ಗೊಂದಲವೂ ನನ್ನಲ್ಲಿ ಉಂಟಾಯಿತು. ನಂತರ ಹೇಳಿದೆ:

"ನೀವು ಅಪೇಕ್ಷಿಸುವಂತೆ ನಾನು ರಾಜೀನಾಮೆ ಕೊಡಬಹುದು. ಆದರೆ ಒಂದು ಕರಾರು. ನಾಳೆ ಈ ವೇಕನ್ಸಿಗಾಗಿ ಜಾಹೀರಾತು ಬಂದಾಗ ಬೇರೆ ಯಾರೂ ಅರ್ಜಿ ಹಾಕುವುದಿಲ್ಲವೆಂದು ನೀವು ಭರವಸೆ ಕೊಡಬಲ್ಲಿರಾ?"

ವಿದ್ಯಾರ್ಥಿ ನನ್ನ ಮಾತಿನ ಅರ್ಥವನ್ನು ತಟ್ಟನೆ ಗ್ರಹಿಸಿದ.

"ಹೌದು, ಇದು ವಿಚಾರ ಮಾಡಬೇಕಾದ ಮಾತು" ಎಂದ.

ನಾನು ರಾಜೀನಾಮೆ ಕೊಡಬೇಕೆಂದು ಕೇಳಲು ಈ ವಿದ್ಯಾರ್ಥಿ ಮತ್ತೆ ನನ್ನ ಕಡೆಗೆ ಬರಲಿಲ್ಲ.

ಕಾಲ ಸರಿಯಿತು. ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಈ ವಿದ್ಯಾರ್ಥಿ ಕರ್ನಾಟಕ ಕಾಲೇಜ್ ಬಿಟ್ಟುಹೋದ. ಏಕೆಂಬುದು ನನಗೆ ತಿಳಿದಿರಲಿಲ್ಲ.

ಕೆಲದಿನಗಳು ಕಳೆದ ನಂತರ ಮತ್ತೊಮ್ಮೆ ನನ್ನನ್ನು ಕಂಡಾಗ ಈ ವಿದ್ಯಾರ್ಥಿ,

"ನೀವು ಪ್ರೊಫೆಸರರು ಪ್ರಿನ್ಸಿಪಾಲರು ಕೂಡಿ ನನ್ನನ್ನು ಕಾಲೇಜಿನಿಂದ ಹೊರಗೆ ಹಾಕಿದಿರಿ. ನನಗೆ ಆರ್ಟ್ಸ್ ಪದವಿ ತಪ್ಪಿಹೋದಂತಾಯಿತು. ಆರ್ಟ್ಸ್ ಪದವಿಯಿಲ್ಲದಿದ್ದರೆ ಹೋಗಲಿ, ಅದರಿಂದ ನನಗೇನೂ ನಷ್ಟವಿಲ್ಲ. ನಾನು ನನ್ನ

ಯೋಗ್ಯತೆಯಿಂದ ಮುಂದೆ ಬರಬಲ್ಲೆ."

ಈ ಮಾತು ಕೇಳಿ ಈ ವಿದ್ಯಾರ್ಥಿಯ ಬಗೆಗೆ ನನ್ನ ಅಭಿಮಾನ ಇನ್ನೂ ಹೆಚ್ಚಿತು. ಮುಂದೆ ಈ ಮಾತು ನಿಜವಾಗಿಯೂ ಪರಿಣಮಿಸಿತು.

ಈ ವಿದ್ಯಾರ್ಥಿ ಪಾಟೀಲ ಪುಟ್ಟಪ್ಪ. ೧೯೪೨ ಆಗಸ್ಟ್ ೯ರ ಚಳುವಳಿಯ ಸಂಬಂಧವಾಗಿ ಕರ್ನಾಟಕ ಕಾಲೇಜಿನಲ್ಲಿ ಮುಂದಾಳು. ಅತ್ತ ಮೈಸೂರಿನಲ್ಲಿ ಮಹಾರಾಜ ಕಾಲೇಜಿನಲ್ಲಿ ಇದೇ ಸಂದರ್ಭದಲ್ಲಿ ಮುಂದಾಳುತನ ಪಡೆದ ವಿದ್ಯಾರ್ಥಿ ಗ.ಸ. ಹಾಲಪ್ಪ. ಇವರಿಬ್ಬರು ಮುಂದೆ ಕರ್ನಾಟಕ ಸಾರ್ವಜನಿಕ ರಂಗದಲ್ಲಿ ಮಹತ್ವದ ಪಾತ್ರ ಮಾಡಿದರು. ಇಲ್ಲಿ ಇನ್ನೂ ಒಂದು ಮಾತನ್ನು ಹೇಳಬೇಕು. ಶಕ್ತಿಯತ ವ್ಯಕ್ತಿತ್ವ, ದಿಟ್ಟತನದಿಂದ ಕೂಡಿರುವ ಮತ್ತು ನನ್ನೊಂದಿಗೇ ಸಲಿಗೆಯಿರುವ ಇನ್ನೋರ್ವ ವಿದ್ಯಾರ್ಥಿ ಕೆ. ಈಶ್ವರನ್. ಇವರು ಬ್ಯಾಡಿಗಿ ಸ್ಕೂಲಿನಲ್ಲಿ ಪಾಟೀಲ ಪುಟ್ಟಪ್ಪನವರ ಸಹಪಾಠಿ. ತಾವು ಪಾಟೀಲ ಪುಟ್ಟಪ್ಪನವರಿಂದ ವಿದ್ಯಾರ್ಥಿ ದೆಸೆಯಲ್ಲಿ ಸ್ಫೂರ್ತಿ ಪಡೆದುದನ್ನು ಈಶ್ವರನ್ ನನಗೆ ಆಗಾಗ ಹೇಳಿದುದುಂಟು.

ಹಾಯಸ್ಕೂಲ್ ವಿದ್ಯಾಭ್ಯಾಸ ಪೂರೈಸಲು ಕೂಡ ಅನುಕೂಲವಿಲ್ಲದ ಪರಿಸ್ಥಿತಿಯನ್ನು ಪಾಟೀಲ ಪುಟ್ಟಪ್ಪ ಎದುರಿಸಬೇಕಾಯಿತು. ಮುಂದೆ ಅವರು ಮುಂಬಯಿ ವಿಶ್ವವಿದ್ಯಾಲಯದ ಎಲ್.ಎಲ್.ಬಿ ಕ್ಯಾಲಿಫೋರ್ನಿಯಾ ಯುನಿವರ್ಸಿಟಿಯಲ್ಲಿ ಪತ್ರಿಕೋದ್ಯಮದ ಎಂ.ಎಸ್.ಸಿ ಈ ಪದವಿಗಳನ್ನು ಗಳಿಸಿದರು. ಪುಟ್ಟಪ್ಪ ಇಂದು ಪ್ರಖ್ಯಾತ ಪತ್ರಿಕಾಕರ್ತ, ಸಮರ್ಥ ಲೇಖಕ; ಪ್ರಜ್ಞಾವಂತ ಸಲಹೆಗಾರ; ಏಕಾಂಗವೀರನಾಗಿ ಏಕಕಾಲಕ್ಕೆ ದಿನ, ವಾರ. ಪಕ್ಷ, ಮಾಸ ಪತ್ರಿಕೆಗಳನ್ನು ಹೊರಡಿಸಿದ ಸಾಹಸಿ. "ಪ್ರಪಂಚ" ಪತ್ರಿಕೆಯ ಪ್ರಖ್ಯಾತಿ ಎಲ್ಲರೂ ತಿಳಿದಿರುವ ಸಂಗತಿ. ಅಖಿಲ ಕರ್ನಾಟಕದ ಗಣ್ಯ ವ್ಯಕ್ತಿಗಳೊಂದಿಗೆ ಅವರಿಗೆ ಆತ್ಮೀಯ ಸಂಪರ್ಕವಿದೆ ಕರ್ನಾಟಕದ ದಿಗ್ಗಜಗಳಾದ ಜನರಲ್ ಕಾರ್ಯಪ್ಪ, ಡಾ. ಡಿ.ಸಿ. ಪಾವಟೆ, ಡಾ. ಡಿ.ವಿ.ಜಿ. ಅವರೊಂದಿಗೆ ಸಲಿಗೆಯಿದೆ. ಅಖಿಲ ಭಾರತದ, ವಿದೇಶದ ಕೆಲವು ಗಣ್ಯ ವ್ಯಕ್ತಿಗಳೊಂದಿಗೂ ಅವರು ಸಲಿಗೆಯ ಪರಿಚಯ ಪಡೆದಿದ್ದಾರೆ. ಅಂತೂ ಪುಟ್ಟಪ್ಪ ವಿವಿಧ ವ್ಯಕ್ತಿ, ವಿಷಯಗಳನು ಚೆನ್ನಾಗಿ ಅರಿತಿದ್ದರೆ. "ಪ್ರಪಂಚ" ಪತ್ರಿಕೆಯಲ್ಲಿ ಅವರು ಮೂಡಿಸುವ ಸಂದರ್ಭೋಚಿತ ವ್ಯಕ್ತಿಚಿತ್ರಗಳು, ಬರೆಯುವ ನೆನಹು, ಘಟನೆಗಳು ಈಚೆಗೆ ಅವರು "ಪ್ರಜಾವಾಣಿ" ಪತ್ರಿಕೆಗಾಗಿ ಬರೆಯುತ್ತಿರುವ ನಮ್ಮ ವಿವಿಧ ರಾಜ್ಯಗಳ "ಸಾಮುದ್ರಿಕ" –ಇತ್ಯಾದಿ ಪುಟ್ಟಪ್ಪನವರ ಅವಲೋಕನ ಅಭ್ಯಾಸಗಳ ಪ್ರವೃತ್ತಿಗೆ ಸ್ಪಷ್ಟವಾದ ಉದಾಹರಣೆಗಳಾಗಿವೆ.

ಪುಟ್ಟಪ್ಪ ನಿರ್ಭಯವಾಗಿ ಬರೆಯುತ್ತಾರೆ. ಮಾತನಾಡುತ್ತಾರೆ. ಸೊಗಸಾಗಿ

ಹರಟೆ ಹೊಡೆಯುತ್ತಾರೆ. ವಿವಿಧ ವಿಷಯಗಳನ್ನು ಆಳವಾಗಿ ಅಭ್ಯಾಸ ಮಾಡುತ್ತಾರೆ. ಸಮರ್ಪಕವಾಗಿ ವಿಶ್ಲೇಷಿಸುತ್ತಾರೆ. ಅವರ ದುಡಿಮೆ, ಸ್ಮರಣ ಶಕ್ತಿ, ಲೇಖನ ರಚನೆಯ ಶೀಘ್ರತೆಗಳು ಅದ್ಭುತೆಗಳು ಅದ್ಭುತವೆಂಬುದನ್ನು ನಾನು ಕಂಡುಕೊಂಡಿದ್ದೇನೆ. ರೇಲ್ವೆ, ಬಸ್ಸು, ವಿಮಾನಗಳಲ್ಲಿ ಪ್ರಯಾಣದ ಕಾಲಕ್ಕೇ ಇವರು ಲೇಖನ ಬರೆದು ಪೂರೈಸುತ್ತಾರೆ. ತಮ್ಮೊಬ್ಬರ ಲೇಖನಗಳಿಂದಲೆ "ಪ್ರಪಂಚ" ಪತ್ರಿಕೆಯನ್ನೆಲ್ಲ ಇವರು ತುಂಬಬಲ್ಲರು. ವೈವಿಧ್ಯವನ್ನು ತರಬಲ್ಲರು, ಖಂಡತುಂಡವಾಗಿಯೂ ಯುಕ್ತಾಯುಕ್ತವಾಗಿಯೂ ಇವರು ಬರೆಯಬಲ್ಲರು. ಇವರು ಸ್ನೇಹ ಮಾಡುತ್ತಾರೆ. ಜಗಳವಾಡುತ್ತಾರೆ. ಅವರ ಮನೆಯ ಗ್ರಂಥ ಭಂಢಾರ ವಿದ್ವಾಂಸರನ್ನು ಮೆಚ್ಚಿಸುವಂತಹದು. ಆ ಗ್ರಂಥ ಭಂಡಾರದ ಮಧ್ಯೆ ಅವರ ಸವಿಯಾದ ಆತಿಥ್ಯ ಹರಟೆಗಳಲ್ಲಿ ಗಂಟೆಗಳು ಉರುಳುತ್ತಿರುವುದೂ ನಮ್ಮ ಗಮನಕ್ಕೆ ಬರುವುದಿಲ್ಲ.

ಹೋರಾಟದ ಕೆಚ್ಚು ಇದ್ದರೂ ಪುಟ್ಟಪ್ಪ ಸ್ನೇಹಜೀವಿ, ಮುಖ್ಯವಾಗಿ ಭಾವಜೀವಿ.

ಪತ್ರಿಕಾ ರಂಗದ ಪ್ರಖ್ಯಾತಿ ಅವರಿಗಿದ್ದರೂ ಅವರು ಪ್ರಥಮ ಒಲವು ಸಣ್ಣಕತೆ ಬರೆಯುವುದೇ ಆಗಿತ್ತು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಸಣ್ಣ ಕತೆ ಬರೆಯುತ್ತಿದ್ದರು. ೧೯೪೪ರಲ್ಲಿಯೇ ಅವರ ಸಣ್ಣ ಕತೆಗಳ ಒಂದು ಸಂಕಲನ. "ಸಾವಿನ ಮೇಜವಾನಿ" ಪ್ರಕಟವಾಯಿತು. ಇನ್ನೆರಡು ಹಸ್ತಪ್ರತಿಗಳು ಅಚ್ಚಿನ ಮನೆಗೆ ಸಿದ್ಧವಾಗಿದ್ದರೂ ಅವು ಕಳೆದುಹೋದವು. ಕ್ರಮಬದ್ಧತೆ, ಶಿಸ್ತುಗಳು ಅವರಿಗೆ ಒಗ್ಗುವ ವಿಷಯಗಳಾಗಿಲ್ಲವೆಂಬುದೇ ಅದಕ್ಕೆ ಕಾರಣವಾಗಿರಬೇಕು.

ಪ್ರಪಂಚವನ್ನು ನಿಕಟವಾಗಿ ನಿರೀಕ್ಷಿಸುವ, ಸೂಕ್ಷ್ಮಸಂವೇದನಾಪರತೆಯುಳ್ಳ, ಅಭಿವ್ಯಕ್ತಿ ಸಾಮರ್ಥ್ಯವಿರುವ ಪುಟ್ಟಪ್ಪ ಮೂಲತಃ ಸಾಹಿತಿ, ಅವರ ದ್ವಿತೀಯ ಒಲವಾದ ಪತ್ರಿಕೋದ್ಯಮವು ಅವರ ಪ್ರಥಮ ಒಲವನ್ನು ಹಿಂದೆ ಸರಿಸೀತೆಂದು ನಮಗೆ ಅನಿಸುತ್ತಿತ್ತು. ಆದರೆ ಹಾಗೆ ಆಗಿಲ್ಲವೆಂದು ಸ್ಪಷ್ಟಪಡಿಸಲು ಪುಟ್ಟಪ್ಪ ಈಚೆಗೆ ಸಣ್ಣ ಕತೆ ಬರೆಯುತ್ತಾರೆ. ಬಿತ್ತರಿಸುತ್ತಾರೆ. ಪ್ರಕಟಿಸುತ್ತಾರೆ.

ಹಾವೇರಿ ಹಾಯ್‌ಸ್ಕೂಲಿನಲ್ಲಿ ಇವರು ಒಂದು ಕೈ ಬರೆಹದ ಪತ್ರಿಕೆ ಹೊರಡಿಸಿದರು. ಇಡಿಯ ಪತ್ರಿಕೆಗಾಗಿ ಲೇಖನ ಬರೆದು ತುಂಬಿ ಲೇಖನಗಳಿಗೆ ಬೇರೆ ಬೇರೆ ಲೇಖಕರ ಹೆಸರು ಹಾಕುತ್ತಿದ್ದರು. ೧೯೩೮-೩೯ರಲ್ಲಿ ಉಡುಪಿಯ "ಅಂತರಂಗ" ಪತ್ರಿಕೆಯಲ್ಲಿ ಸಾಲಾಗಿ ಲೇಖನ ಬರೆದರು. ಮುಂಬಯಿಯ ಬಾಂಬೆ ಕ್ರಾನಿಕಲ್, ಫ್ರೀ ಪ್ರೆಸ್ ಜರ್ನಲ್‌ಗಳಿಗಾಗಿ ಬರೆದು ಆಯಾ ಸಂಪಾದಕ

ಮೆಚ್ಚುಗೆ ಗಳಿಸಿದರು. ಫ್ರೀ ಪ್ರೆಸ್ ಜರ್ನಲ್‌ದ ಸಂಪಾದಕ ಸದಾನಂದ ಅವರಿಂದ ಪಡೆದ ಉತ್ತೇಜನವನ್ನು ಪುಟ್ಟಪ್ಪ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ. ಕನ್ನಡ ಪತ್ರಿಕೋದ್ಯಮದ ದ್ರೋಣಾಚಾರ್ಯ ಮೋಹರೆ ಅವರನ್ನು ಕುರಿತು ಇವರಿಗೆ ಅಕ್ಕರತೆ.

ಶೀಘ್ರ ಲೇಖನ ರಚನೆ ಇವರದೆಂದು ಹೇಳಿದೆನಷ್ಟೆ. ಇವರ "ಶಿಲಾಬಾಲಿಕೆ ನುಡಿಗಳು" (೧೯೭೪) ಎಂಬ ಸಂಕಲನದ ಸಣ್ಣ ಕತೆಗಳು ರಚಿತವಾದ ಬಗೆಗೆ ಇವರೇ ಬರೆದ ಮಾತುಗಳನ್ನು ಗಮನಿಸಬೇಕು.

"…..ಪ್ರತಿದಿನ ಒಂದು ಕತೆ ಬರೆದೇ ಮಲಗಬೇಕೆಂದು ನಿರ್ಧರಿಸಿದೆ. ಆ ನಿರ್ಧಾರದ ಫಲವೆಂದು ಆರು ದಿನಗಳಲ್ಲಿ ಹತ್ತು ಕಥೆ ಬಂದವು. ವಾರದ ಮಧ್ಯದಲ್ಲಿ ಶನಿವಾರ ರವಿವಾರ ಇದ್ದುದರಿಂದ ಹೆಚ್ಚು ಕತೆ ಬರೆಯುವುದಕ್ಕೆ ಸಾಧ್ಯವಾಯಿತು. ಆಮೇಲೆ ರೈಲಿನಲ್ಲಿ ದಿಲ್ಲಿಯಿಂದ ಹುಬ್ಬಳ್ಳಿಗೆ ಹೊರಟಾಗ ಐದು ಕಥೆಗಳನ್ನು ಬರೆದೆ, ಹುಬ್ಬಳ್ಳಿಯಿಂದ ದಿಲ್ಲಿಗೆ ಹೊರಟಾಗ ದಿಲ್ಲಿ ಮುಟ್ಟುವುದರೊಳಗೆ ಮತ್ತೆ ಐದು ಕತೆಗಳನ್ನು ಬರೆದು ಮುಗಿಸಿದೆ."

ಇದನ್ನು ಓದುತ್ತಿರುವಾಗ ಪುಟ್ಟಪ್ಪ 'ಪ್ರಪಂಚ' ಕಟ್ಟಿಕೊಳ್ಳದೆ ಬರಿಯ ಕತೆ ಬರೆಯಲು ತೊಡಗಿದ್ದರೆ?…. ಎಂಬ ವಿಚಾರ ನನ್ನಲ್ಲಿ ಸುಳಿಯದೆ ಇರಲಿಲ್ಲ.

ಪುಟ್ಟಪ್ಪನವರಿಗೆ ಕಥೆ ಹೇಳುವ ಸ್ವಭಾವವಿದೆ. ಸುತ್ತಣ ಸಮಾಜದ ಒಡನಾಟ ನಿರೀಕ್ಷಣೆಗಳು ಅವರಿಗೆ ಕಥಾ ವಸ್ತುವನ್ನು ಒದಗಿಸುತ್ತವೆ. ಶೀಘ್ರವಾಗಿ ಬರೆಯಬಲ್ಲ ಸಾಮರ್ಥ್ಯವಂತೂ ಸರಿಯೇ.

ಈಗ ವಾಚಕರ ಕೈ ಸೇರುತ್ತಿರುವ "ಗವಾಕ್ಷ ತೆರೆದಿತ್ತು" ಎಂಬ ಕೃತಿ

ಅವರ ಸಣ್ಣ ಕತೆಗಳ ಇನ್ನೊಂದು ಸಂಕಲನ.

ಕಲ್ಪಕತೆ, ಸನ್ನಿವೇಶ ನಿರ್ಮಾಣ, ವರ್ಣನೆ, ಭಾ
ಗುಣಗಳನ್ನು ನಾವು ಇಲ್ಲಿಯ ಕಥೆಗಳಲ್ಲಿ ಕಾಣುತ್ತೇವೆ. ಥ
ಏಕ ಕಾಲಕ್ಕೆ ಹೇಳುವುದು ಇವರ ಸ್ವಭಾವದ ವೈಶಿಷ್ಟ್ಯ
ಅವನ ಶೈಲಿ ಮೂಡಿಸುವುದೂ ಸಹಜ. ಇಲ್ಲಿಯ ಕೆಲವು
ವಿವರಗಳು ಹೆಚ್ಚಾಗಿ ಕಥೆಯ ಓಟ ಕಡಿಮೆಯಾದಂತೆ
ಒಟ್ಟಿನಲ್ಲಿ ಕಥೆ ಹೇಳುವ ಸ್ವಾರಸ್ಯವೇ ನಮ್ಮನ್ನು ಹೆಚ್ಚು
ಆರಂಭ, ಕೊನೆ, ಕತೆಗಳಿಗೆ ಕೊಡುವ ತಿರುವುಗಳ
ಕಾರಣವೆನ್ನಬಹುದು.

ಕತೆಗಳಿಗೆ ಇವರು ಕೊಡುವ ಶೀರ್ಷಿಕೆಗಳೂ ಗ

ಷೆಯ ಬೆಡಗು – ಎಂಬ
ಲವಾರು ವಿಷಯಗಳನ್ನು
ಲೇಖಕನ ವೈಶಿಷ್ಟ್ಯವನ್ನು
ಕಥೆಗಳಲ್ಲಿ ನಿರೂಪಿಸುವ
ನಿಸುವುದುಂಟು. ಆದರೆ
ಆಕರ್ಷಿಸಿದಂತಾಗುತ್ತದೆ.
ಲ್ಲಿಯೇ ಜಾಣ್ಮೆ ಇದಕ್ಕೆ

ಮನಾರ್ಹ. ೧) ಗವಾಕ್ಷ

ತೆರೆಯಿತು. ೨) ಸುಗಂಧ ಸೂಸಿತು. ೩) ಕೇತಕ ಅರಳಿತು ೪) ಬೇಟೆ ಆಯಿತು. ೫) ರಾಜಾ ಮನೆಗೆ ಬಂದ ೬) ಮಗ ಮನೆಗೆ ಬಂದ – ಇವು ಈ ಸಂಕಲನದಲ್ಲಿಯ ಕೆಲವು ಶೀರ್ಷಿಕೆಗಳು. ನೇರವಾಗಿ ಸಹಜವಾಗಿ ಕತೆ ಹೇಳುವ ಕಲೆಗೆ ಈ ಶೀರ್ಷಿಕೆಗಳು ಉದಾಹರಣೆಯಾಗುವಂತಿವೆ.

ಪ್ರತಿಭಾವಂತ ಲೇಖಕ ಮಧುಕರ ಓದುಗರಲ್ಲಿ ಆಶಾವಾದ ತುಂಬುತ್ತಿದ್ದ. ಆದರೆ ತಾನೇ ನಿರಾಶೆಗೆ ಒಳಗಾಗಿ ಆಸ್ಪತ್ರೆ ಸೇರುತ್ತಾನೆ. ಅದು ದೈಹಿಕ ರೋಗವಾಗಿರಲಿಲ್ಲ. ಆಸ್ಪತ್ರೆಯ ಕೋಣೆಯ ಗವಾಕ್ಷ ತೆಗೆದಾಗ ಎದುರಿಗೆ ಸೌಂದರ್ಯ ಕಂಡು ಮತ್ತೆ ಕಳೆದುಂಬುತ್ತಾನೆ. 'ನಮಗೆ ಏನಾಗುವುದು, ಅದು ಮುಖ್ಯವಲ್ಲ. ನಾವು ಜಗತ್ತಿಗೆ ಏನು ಮಾಡುತ್ತೇವೆಯೋ ಅದು ಮುಖ್ಯ" ಎಂಬ ನಿಲುಮೆಯನ್ನು ಪ್ರತಿಬಿಂಬಿಸುವಂತೆ ಮೊದಲ ಕಥೆ ರೂಪುಗೊಂಡಿದೆ. ಅದು ಸಂಕಲನಕ್ಕೂ ಹೆಸರನ್ನು ಒದಗಿಸಿದೆ. ದೇವಾಲಯದಲ್ಲಿ ಏರ್ಪಾಟು ಆದ ಸಂಗೀತದಿಂದ ಮನಸ್ಸು ಪರಿವರ್ತನೆ ಹೊಂದಿ ಕಾಮುಕತೆ ಅಳಿದು ಭಕ್ತಿ ಭಾವಕ್ಕೆ ತಿರುಗಿದ ಸನ್ನಿವೇಶ ಇನ್ನೊಂದು ಕಥೆಯಾಗಿದೆ.

ಮಠದ ಸ್ವಾಮಿಯೊಬ್ಬನ ಪ್ರಣಯಾಸಕ್ತಿ, ಗುಪ್ತ ಸಂಸಾರಗಳ ಚಿತ್ರಣ ಡಾಯರಿ ಪುಟಗಳ ರೂಪದಲ್ಲಿ ಬಂದಿದೆ. ಅದನ್ನು ಅನಿರೀಕ್ಷಿತವಾಗಿ ಮಠಕ್ಕೆ ಉತ್ತರಾಧಿಕಾರಿಯಾಗಿ ಬಂದ ಮರುದಿನ ಸ್ವಾಮಿ ಓದುತ್ತಾನೆ. ಓದಿದಾಗ ತಾನು ಹಿಂದಿನ ಸ್ವಾಮಿಯ ಕಪಟ ಸಂಸಾರದ ಸಂತಾನವೆಂಬುದನ್ನು ಕಂಡುಕೊಳ್ಳುವಲ್ಲಿ ಒಂದು ಕಥೆ ಮುಕ್ತಾಯವಾಗುತ್ತಿದೆ. ಸ್ವಾಮಿಗಳ ಕಾಮುಕತೆ ಕಪಟಾಚರಣೆಗಳನ್ನು ಕುರಿತ ಇನ್ನೊಂದು ಕತೆಯೂ ಈ ಸಂಕಲನದಲ್ಲಿದೆ.

ನಗರಗಳ ಜೀವದಂತೆ ಹಳ್ಳಿಗರ ಬಾಳನ್ನೂ ಪುಟ್ಟಪ್ಪ ಸೊಗಸಾಗಿ ಚಿತ್ರಿಸಬಲ್ಲರು. ಹಳ್ಳಿಯ ಮನೆತನಗಳ ದ್ವೇಷ ಮುಂದಿನ ಪೀಳಿಗೆಯವರ ಪ್ರಣಯದಲ್ಲಿ ಪರ್ಯವಸಾನಗೊಂಡಾ ಕೇತಕಿ ಅರಳುತ್ತಿದೆ. ಮನೆತನಸ್ತ ಸ್ತ್ರೀಯರ ಸೂಳೆಯ ಸಂಸಾರದ ಕಪಟ ವ್ಯವಹಾರದಲ್ಲಿ ಮುಗ್ಧ ತರುಣನೊಬ್ಬ ಫಜೀತಿ ಪಡುವಾಗ ಅವನ "ಬೇಟೆ ಆಯಿತು" ಬಾಳಿನಲ್ಲಿಯ ಈ ಬಗೆಯ ಘಟನೆಗಳನ್ನು ಚಿತ್ರಿಸುವಲ್ಲಿ ಪುಟ್ಟಪ್ಪ ಅವರ ಸೂಕ್ಷ್ಮ ದೃಷ್ಟಿ ಕಂಡುಬರುತ್ತಿದೆ.

ಬಾಳಿನಲ್ಲಿ ನಡೆಯುವ ವಿಚಿತ್ರವಾದ ಕಪಟದ ಇನ್ನೊಂದು ಬಗೆಯ ಚಿತ್ರ 'ವಿಷಕನ್ಯೆ'ಯಲ್ಲಿ ಬಂದಿದೆ. ಅನಿರೀಕ್ಷಿತ ಮುಕ್ತಾಯದಿಂದ ಪರಿಣಾಮವನ್ನುಂಟು ಮಾಡುವುದು ಸಣ್ಣ ಕತೆಯ ತಂತ್ರದ ಒಂದು ರಹಸ್ಯ. ಈ ರಹಸ್ಯವನ್ನು ಪುಟ್ಟಪ್ಪ ಸಾಧಿಸಿಕೊಂಡಿದ್ದಾರೆ.

ಚುನಾವಣೆಯ ಬೆನ್ನು ಹತ್ತಿ ಮನೆಯನ್ನು ಮರೆತ ಸನ್ನಿವೇಶ ಇನ್ನೊಂದು ಕಥೆಯ ವಸ್ತುವಾಗಿದೆ. ಇತ್ತ ಚುನಾವಣೆಯಲ್ಲಿ ಸೋಲು ಅತ್ತ ಮನೆಯನ್ನು ಮರೆತುದರ ಫಲವಾಗಿ ನಡೆದ ಅನಾಹುತ. ಬಾಳಿನ ನಿರಾಶೆಯಲ್ಲಿ ಮನೆಯನ್ನು ಮಡದಿಯನ್ನು ತೊರೆದು ಒಬ್ಬ ಯುವಕ ಎಲ್ಲಿಗೋ ಹೋಗುತ್ತಾನೆ. ಹಾಗೆ ಹೋದವನು ಗುಪ್ತವಾಗಿ ಒಂದೆರಡು ರಾತ್ರಿ ಮಡದಿಯ ಬಳಿಬಂದು ಹೋಗುತ್ತಾನೆ. ಇದರ ಫಲವಾಗಿ ಜಟಿಲ ಸಮಸ್ಯೆಯೊಂದು ತಲೆದೋರುತ್ತದೆ. ಈ ಬಗೆಗೆ ಕಥೆಯೊಂದು ಇಲ್ಲಿದೆ.

ಸೂಳೆಯ ಮನೆಗೆ ಹೋಗುವಷ್ಟು ಪೌರುಷ ತನಗಿದೆಯೆಂದು ತೋರಿಸಿಕೊಳ್ಳುವ ಸಾಹಸವನ್ನು ಒಬ್ಬ ಹಳ್ಳಿಯ ಯುವಕ ಕೈಕೊಳ್ಳುತ್ತಾನೆ. ಆಗ ಆತನು ಅನಿರೀಕ್ಷಿತವಾಗಿ ಕೊಲೆಯ ಆರೋಪ ಎದುರಿಸಬೇಕಾಗುತ್ತದೆ. ಅವನ ಹೆಂಡತಿ ಆ ಆರೋಪವನ್ನು ತನ್ನ ತಲೆಯ ಮೇಲೆ ತೆಗೆದುಕೊಳ್ಳುವ ಕಥೆ ಮತ್ತೊಂದು. "ರಸಮಂಜರಿ" ಕಾರ್ಯಕ್ರಮಕ್ಕೆ ಹೊರಟ ರಸಿಕನೊಬ್ಬ ವಿಷಮಯ ಸನ್ನಿವೇಶದಲ್ಲಿ ತೊಳಲಾಡಿದ ಸನ್ನಿವೇಶ ಒಂದು ಕಥೆಯಲ್ಲಿ ಮೂಡಿಬಂದಿದೆ.

ಕಳ್ಳನ ಹೃದಯವನ್ನು ಪರಿವರ್ತಿಸಬಲ್ಲ ಮಾತಿನ ಜಾಣ್ಮೆ ಸುಮಿತ್ರಾಳಿಗಿದೆ. ಇದೇ ಬಗೆಯ ಜಾಣ್ಮೆಯಿಂದಾಗಿ ಮದುವೆಗೆ ಇನ್ನೂ ಸಿದ್ಧವಿರದ ಯುವಕನ ಮನವೊಲಿಸಿ ಆಕೆ ಮದುವೆ ಮಾಡಿಕೊಂಡಳು. ಮದುವೆ ನಡೆದ ಸಂಭ್ರಮದಲ್ಲಿರುವಾಗಲೇ ಅನಾಹುತದಲ್ಲಿ ಕೊನೆಗೊಳ್ಳಬೇಕಾಗಿದ್ದ ಘಟನೆ ಹೃದಯಸ್ಪರ್ಶಿಯಾದ ತಿರುವು ಪಡೆದ ಕಥೆ ಸುಮಿತ್ರಾಳದು.

ಅಮೇರಿಕೆಯಲ್ಲಿ ಓದಿ ಬಂದ ಗೃಹಸ್ಥನೊಬ್ಬ "ಮಿತ ಸಂತಾನ"ದ ವಿಷಯವಾಗಿ ಅತಿ ಉತ್ಸಾಹ ತಳೆದಿದ್ದ. ಈ ಉತ್ಸಾಹ ಆತನ ಸೋದರಿಯ ಸಂಸಾರದಲ್ಲಿ ಸಮಸ್ಯೆಯನ್ನೊಡ್ಡಿತು. ಪ್ರಶ್ನೆ ಕೋರ್ಟಿನ ಕಟ್ಟೆ ಏರಿತು. ಆದರೆ ಪರಿಹಾರವನ್ನು ಸೋದರಿ ತಾನಾಗಿಯೇ ಕಂಡುಕೊಂಡಳು. ಇದೊಂದು ಕಥೆ.

ಗೃಹ ರಚನೆಯ ಡಿಜೈನುಗಳ ಅಂತರರಾಷ್ಟ್ರೀಪ್ರದರ್ಶನವೊಂದು ದಿಲ್ಲಿಯಲ್ಲಿ ನಡೆಯಿತು. ಅದಕ್ಕಾಗಿ ಆರ್ಕಿಟೆಕ್ಟ್ ಶಿರಾಜ ತಾನು ಬಿಡಿಸಿದ ಡಿಜೈನುಗಳನ್ನು ತನ್ನ ಚೀಫ್ ಇಂಜಿನಿಯರ್ ಮುಖಾಂತರ ಕಳಿಸಿದ ಅವುಗಳಿಗೆ ಪ್ರಥಮ ಪಾರಿತೋಷಕ. ಆದರೆ ಪಾರಿತೋಷಕ ದೊರೆತದ್ದು ಚೀಫ್ ಇಂಜಿನೀಯರನ ಹೆಸರಿಗೆ. ಇಂತಹ ಮೋಸಕ್ಕೆ ಒಳಗಾದ ಶಿರಾಜ್ ಚೀಫ್ ಇಂಜಿನೀಯರನ ಕ್ರೌರ್ಯವನ್ನು ಎದುರಿಸಬೇಕಾಯಿತು. ಆದರೂ ಕೊನೆಗೂ ದೊಡ್ಡ ಪುರಸ್ಕಾರ ಆತನಿಗೆ ದೊರೆಯಿತು. ಈ ಕಥೆ ಬೇರೊಂದು ಈ ಬಗೆಯ ಇಲ್ಲಿಯ ಕತೆಗಳು

ಪುಟ್ಟಪ್ಪನವರ ವಸ್ತು ವೈವಿಧ್ಯ ತಂತ್ರ ತೋರ್ಪಡಿಸುತ್ತದೆ. ಅನಿರೀಕ್ಷಿತ ತಿರುವುಗಳ ಸ್ವಾರಸ್ಯವನ್ನು ಒದಗಿಸುತ್ತಿವೆ.

"ಅನುಭವವಿರುವಲ್ಲಿ ವಿಷಯದ ಇವರ ಅಧ್ಯಾಪಕ ಜೊಸೆಫ್ ಬ್ರ್ಯಾಂಟ್ (Joseph Brandt) ಇವರಿಗೆ ನೀಡಿದ ಉಪದೇಶ ಹೀಗೆ: "ನೀನು ಶುಷ್ಕ ಕಾಗದ ತೆಗೆದುಕೊಂಡು ಅದರಲ್ಲಿ ಜೀವಂತಿಕೆ ತುಂಬು"ಈ ಉಪದೇಶವನ್ನು ಪುಟ್ಟಪ್ಪ ಸರಿಯಾಗಿ ಪಾಲಿಸುತ್ತಿದ್ದಾರೆ. 'ಪ್ರಂಪಚ'ದ ಪುಟಗಳಲ್ಲಿ, ಸಣ್ಣ ಕತೆಯ ಪುಟಗಳಲ್ಲಿ.

'ನವ್ಯ' ವೆಂಬ ಪಂಥದ ಆಘಾತವನ್ನು ಎದುರಿಸಿಯೂ ತಲೆಯೆತ್ತಿ ನಿಲ್ಲಬಹುದಾದ ಸರಳ, ಹಸನಾದ ಹಾದಿಯ ಕಥೆಗಳು ಇಲ್ಲಿವೆ.

ದಿನಕ್ಕೊಂದು ಕತೆ ಬರೆಯುವುದು ಪುಟ್ಟಪ್ಪನವರಿಗೆ ಮತ್ತೆ ಸಾಧ್ಯವಾಗಲಿ.

"ಪ್ರಶಾಂತ" ಧಾರವಾಡ ಸ.ಸ. ಮಾಳವಾಡ
ಜುಲೈ ೨೭, ೧೯೭೪